ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 28 ಮಂಗಳವಾರ 2023

43

₹4


ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 337 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಭಾವಪೂರ್ಣ ಶ್ರದ್ಧಾಂಜಲಿ ನುಡಿ ನಮನ



ದಿ|| ಆರ್. ಧ್ರುವನಾರಾಯಣ್ ರವರು

ಮಾಜಿ ಸಂಸದರು ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರು

ದಿನಾಂಕ : 28.03.2023, ಮಂಗಳವಾರ   ಸಮಯ : ಸಂಜೆ 4 ಗಂಟೆಗೆ

ಸ್ಥಳ : ವಿದ್ಯಾವರ್ಧಕ ಶಾಲಾ ಮೈದಾನ, ಊಟಿ ರಸ್ತೆ,
ನಂಜನಗೂಡು ಪಟ್ಟಣ

ನಂಜನಗೂಡು ತಾಲ್ಲೂಕಿನ ಮಹಾಜನತೆ ಈ ಭಾವಪೂರ್ಣ ಶ್ರದ್ಧಾಂಜಲಿ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅಗಲಿದ ಜನನಾಯಕ ಶ್ರೀ ಆರ್.ಧ್ರುವನಾರಾಯಣ ಅವರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.

ಆರ್.ಧ್ರುವನಾರಾಯಣ ಅಭಿಮಾನಿಗಳ ಬಳಗ
ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ

ಹೆಣ್ಣು ಸರ್ವಕಾಲಕ್ಕೂ ಸಮಾಜದ ಕಣ್ಣು

ಡಾ.ಎಸ್.ಎಸ್.ಜಾನ್ಹವಿ ಅಭಿಮತ

ಮೈಸೂರು,ಮಾ.27–ಆಧುನಿಕ ಕಾಲದಲ್ಲಿ ಮಹಿಳೆಯರು ಮನೆಯಿಂದ ಹೊರಗೆ ಬಂದು ದುಡಿಯುತ್ತಿರುವುದರಿಂದ ಅವರ ಜವಾಬ್ದಾರಿಯ ವ್ಯಾಪ್ತಿಯು ಹೆಚ್ಚಿದೆ.



ಹಿಂದಿನಂತೆಯೇ ಗೃಹ ಕೃತ್ಯಗಳ ಜೊತೆಗೆ ಔದ್ಯೋಗಿಕ ಕ್ಷೇತ್ರದಲ್ಲೂ ತನ್ನ ಛಾಪನ್ನು ಮೂಡಿಸುತ್ತಿದ್ದಾರೆ. ಹಾಗಾಗಿ ಹೆಣ್ಣು ಸರ್ವಕಾಲಕ್ಕೂ ಸಮಾಜದ ಕಣ್ಣು ಎಂದು ಮೈಸೂರಿನ ವಿಜಯನಗರದ ಸ್ಪೋರ್ಟ್ಸ್ ಕ್ಲಬ್‌ನ ಸಭಾಂಗಣದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಿಡರ್ ಸಂಸ್ಥೆ ವತಿಯಿಂದ ನಡೆದ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಡಾ.ಎಸ್.ಎಸ್.ಜಾನ್ಹವಿ ಮಾತನಾಡಿದರು.


ಹೆಚ್ಚಿನ ಜವಾಬ್ದಾರಿಯನ್ನು ಅನುಷ್ಠಾನದುದ್ದಕ್ಕೂ ಹೇಳಬೇಕಾಗಿದೆ. ಗಂಡನಿಗೆ ಸ್ಫೂರ್ತಿ ತುಂಬುವ ಹೆಂಡತಿಯಾಗಿ, ಮಕ್ಕಳಿಗೆ ಶಕ್ತಿ ತುಂಬುವ ತಾಯಿಯಾಗಿ, ಅತ್ತೆ, ಮಾವಂದಿರ ಆರೈಕೆ ಮಾಡುವ ದಾದಿಯಾಗಿ, ಮನೆಯನ್ನು ಆರ್ಥಿಕವಾಗಿ ಮೇಲೆತ್ತುವ ಧ್ಯೇಯವನ್ನಿಟ್ಟುಕೊಂಡು ಸಕಲ ಕಾರ್ಯಗಳನ್ನು ನಿರ್ವಹಿಸುತ್ತಾಳೆ. ಹಾಗಾಗಿ ಇತಿಹಾಸ ಮತ್ತು ಪುರಾಣ ಕಾಲದಿಂದಲೂ ಮಹಿಳೆ ಸಬಲೆಯಾಗಿದ್ದರೂ ಪುರುಷ ದೌರ್ಜನ್ಯದ ಕಾರಣದಿಂದಲೂ ಅಬಲೆ ಎನಿಸಿಕೊಳ್ಳುವಂತಾಗಿತ್ತು. ಆದರೆ ಆಧುನಿಕ ಕಾಲದ ಕಾನೂನು, ಸರ್ವರಿಗೂ ಶಿಕ್ಷಣ ದೊರೆಯುತ್ತಿರುವುದು, ವಿದ್ಯಾವಂತ ಮತ್ತು ವಿಚಾರವಂತ ಪುರುಷರ ಸಮಾನತಾ ನಡೆಯಿಂದಾಗಿ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿಯೂ ಮತ್ತೆ ತನ್ನ ಸಬಲತೆಯನ್ನು ಸಾಬೀತುಪಡಿಸಿದ್ದಾಳೆ ಎಂದರು.

ಸಂಸ್ಥೆಯ ಅಧ್ಯಕ್ಷರಾದ ಲಯನ್ ಮಕಾಳ ಶಿವಕುಮಾರ್, ಸಂಸ್ಥೆಯ ಕಾರ್ಯದರ್ಶಿ ಲಯನ್ ವೆಂಕಟೇಶ್, ಖಜಾಂಚಿ ಮಹದೇವ್‌ಪ್ರಸಾದ್, ಎನ್.ರಾಕೇಶ್, ಡಾ. ಕುಮಾರ್, ಕಾಂತರಾಜು, ಭಾಸ್ಕರಾನಂದ, ನಾಗರಾಜ್ ಶ್ರೀಧರ್, ಅರುಣ್ ಸಾಗರ್ ಅಮರ ಭವಾನಿ, ಲಕ್ಷ್ಮಿ, ಅಂಬುಜಾ, ಯಶೋಧಮ್ಮ ಮತ್ತಿತರರು ಹಾಜರಿದ್ದರು.

ರಾಜ್ಯ ಸ್ಕೌಟ್ಸ್ ಅಂಡ್ ಗೈಡ್ಸ್ ಕಮಿಷನರ್ ಆಗಿ ಪಿಜಿಆರ್ ಸಿಂಧ್ಯಾ ಮರು ಆಯ್ಕೆ


ಪಿ.ಜಿ.ಆರ್.ಸಿಂಧ್ಯಾ


ಪುಷ್ಪವಲ್ಲಿ


ಡಾ.ಕೆ.ಬಿ.ಗುರುಮೂರ್ತಿ

ಮೈಸೂರು, ಮಾ. 27 –ಇತ್ತೀಚೆಗೆ ದೊಡ್ಡಬಳ್ಳಾಪುರದ ರಾಜ್ಯ ತರಬೇತಿ ಕೇಂದ್ರದಲ್ಲಿ ನಡೆದ ಚುನಾವಣೆಯಲ್ಲಿ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಅವರು ರಾಜ್ಯ ಸ್ಕೌಟ್ಸ್ ಅಂಡ್ ಗೈಡ್ಸ್ ಕಮಿಷನರ್ ಆಗಿ ಮರು ಆಯ್ಕೆಯಾಗಿದ್ದಾರೆ.

ಅಲ್ಲದೆ, ಮೈಸೂರು ಜಿಲ್ಲಾ ಕಮಿಷನರ್ ಆಗಿ ಸೇವೆ ಸಲ್ಲಿಸುತ್ತಿರುವ ಮಾಜಿ ಉಪಮೇಯರ್ ಪುಷ್ಪವಲ್ಲಿ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಜಿಲ್ಲಾ ಖಜಾಂಚಿಯಾಗಿ ಸೇವೆ ಸಲ್ಲಿಸುತ್ತಿರುವ ಡಾ.ಕೆ.ಬಿ.ಗುರುಮೂರ್ತಿ ಅವರು ರಾಜ್ಯ ಹಣಕಾಸು ಸಮಿತಿಗೆ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಾಷ್ಟ್ರೀಯ ಮಟ್ಟದ ಶಾಸ್ತ್ರೀಯ ಭಾಷಣ ಸ್ಪರ್ಧೆಯಲ್ಲಿ ಮೈಸೂರಿನ ಪ್ರಣವ ಆಚಾರ್ಯರಿಗೆ ಸ್ವರ್ಣ ಪದಕ

ಮೈಸೂರು,ಮಾ.27– ವಾರಣಾಸಿಯ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಸಂಸ್ಕೃತ ವಿವಿಗಳ ರಾಷ್ಟ್ರಮಟ್ಟದ 60ನೇ ಅಖಿಲ ಭಾರತ ಶಾಸ್ತ್ರೀಯ ಭಾಷಣ ಸ್ಪರ್ಧೆಯಲ್ಲಿ ಮೈಸೂರಿನ ಪ್ರಣವ ಆಚಾರ್ಯರಿಗೆ ಪ್ರಥಮ ಬಹುಮಾನ ಸಹಿತ ಸ್ವರ್ಣ ಪದಕ ಲಭಿಸಿದೆ.


ಪ್ರಣವ ಆಚಾರ್ಯ


ನಗರದ ಶ್ರೀ ವ್ಯಾಸತೀರ್ಥ ವಿದ್ಯಾಪೀಠದ ವಿದ್ಯಾರ್ಥಿಯಾದ ಪ್ರಣವ ಆಚಾರ್ಯ ನ್ಯಾಯಶಾಸ್ತ್ರ ಭಾಷಣ ಸ್ಪರ್ಧೆಯಲ್ಲಿ ಪಂಚಲಕ್ಷಣಿ ಗ್ರಂಥದ ಆಧಾರದ ಮೇಲೆ ವಿಷಯ ಮಂಡಿಸಿದ್ದರು. ಕರ್ನಾಟಕವನ್ನು ಪ್ರತಿನಿಧಿಸಿದ್ದ ಪ್ರಣವ ಆಚಾರ್ಯ 15 ರಾಜ್ಯಗಳ ಸ್ಪರ್ಧಾಳುಗಳ ಪ್ರಬಲ ಪೈಪೋಟಿ ಎದುರಿಸಿ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ.

ಸೋಸಲೆ ಶ್ರೀ ವಿದ್ಯಾಶ್ರೀಶ ತೀರ್ಥರ ಬಳಿ ನ್ಯಾಯಶಾಸ್ತ್ರ ಗ್ರಂಥಗಳ ಅಧ್ಯಯನ ಮಾಡಿ, ಸದ್ಯ ಶ್ರೀ ಮನ್ ನ್ಯಾಯಸುಧಾ ಮತ್ತು ಚಂದ್ರಿಕಾ ಗ್ರಂಥಗಳ ಅಧ್ಯಯನ ಮುಂದುವರೆಸಿದ್ದಾರೆ. ಚಿನ್ನದ ಪದಕ ಪಡೆಯುವ ಮೂಲಕ ಕರ್ನಾಟಕಕ್ಕೆ ಮತ್ತು ಸೋಸಲೆ ಶ್ರೀ ವ್ಯಾಸತೀರ್ಥ ಸಂಸ್ಥಾನಕ್ಕೆ ಪ್ರಣವ ಆಚಾರ್ಯ ಗೌರವ ತಂದುಕೊಟ್ಟಿದ್ದಾರೆ ಎಂದು ವಿದ್ಯಾಪೀಠದ ಪ್ರಾಚಾರ್ಯ ಡಾ.ಶ್ರೀನಿಧಿ ಪ್ಯಾಟಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇಂದು ಕಾಂಗ್ರೆಸ್ ಓಬಿಸಿ ಪದಾಧಿಕಾರಿಗಳ ಪದಗ್ರಹಣ

ಮೈಸೂರು,ಮಾ.27–ಮೈಸೂರಿನ ರೈಲ್ವೆ ನಿಲ್ದಾಣದ ಬಳಿಯಿರುವ ಕಾಂಗ್ರೆಸ್ ಭವನದಲ್ಲಿ ಮಾ.28ರಂದು ಮಂಗಳವಾರ ಬೆಳಗ್ಗೆ 11.30ಕ್ಕೆ ಹಿಂದುಳಿದ ವರ್ಗಗಳ ವಿಭಾಗದ (ಓಬಿಸಿ) ನಗರ ಅಧ್ಯಕ್ಷ ಎನ್.ಆರ್.ನಾಗೇಶ್ ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ನಗರಾಧ್ಯಕ್ಷ ಆರ್.ಮೂರ್ತಿ, ಶಾಸಕರಾದ ಯತೀಂದ್ರ ಸಿದ್ದರಾಮಯ್ಯ, ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ವಾಸು ಇನ್ನಿತರರು ಭಾಗವಹಿಸಲಿದ್ದಾರೆ.


ಎನ್.ಆರ್.ನಾಗೇಶ್


ಸಿಸಿಬಿ ಎಸಿಪಿ ಸಂದೇಶ್‌ಕುಮಾರ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಶುಭಾಶಯ ಕೋರಿದರು. ಕಾಳ ಬೋರಪ್ಪ, ಭೈರವ ಗ್ರೂಪ್ ಮಾದೇವ, ಶಿವು ಚಿತ್ರದಲ್ಲಿದ್ದಾರೆ.

ಇಂದು ಶ್ರೀ ಅಗ್ನಿ ಬನ್ನಿರಾಯಸ್ವಾಮಿ ಜಯಂತಿ

ಮೈಸೂರು,ಮಾ.27–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ದೇವರ ಶ್ರೀ ಅಗ್ನಿ ಬನ್ನಿರಾಯ ಸ್ವಾಮಿ ಜಯಂತಿಯನ್ನು ಮಾ.28ರಂದು ಬೆಳಗ್ಗೆ 11.30ಕ್ಕೆ ಕಲಾಮಂದಿರದ ಕಿರುರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ಶ್ರೀನಿವಾಸ್‌ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸುವರು.

ನಿಧನ

ಎಸ್.ಪದ್ಮ



ಮೈಸೂರು, ಮಾ.27– ಮೈಸೂರಿನ ಅಗ್ರಹಾರ ನಿವಾಸಿ ಲೇಟ್ ಡಾ.ಎಲ್.ವಿ. ಶಲ್ಲಮ್ ಅಯ್ಯಂಗಾರ್ ಅವರ ಪುತ್ರಿ ಎಸ್.ಪದ್ಮ (92) ಭಾನುವಾರ ನಿಧನ ಹೊಂದಿದರು. ಮೃತರು ಅವಿವಾಹಿತರಾಗಿದ್ದು, ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಎಸ್.ರಾಮಪ್ರಸಾದ್ ಸೇರಿದಂತೆ ಇಬ್ಬರು ಸಹೋದರರು, ಓರ್ವ ಸಹೋದರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ (ಮಾ.27) ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಾರದಮ್ಮ



ಮೈಸೂರು ತಾಲೂಕಿನ ಕುಪ್ಪೇಗಾಲ ನಿವಾಸಿ ದಿವಂಗತ ಮಂಚೇಗೌಡರ ಧರ್ಮಪತ್ನಿ ಶ್ರೀಮತಿ ಶಾರದಮ್ಮ(88) ಅವರು ಇಂದು ನಿಧನರಾದರು. ಇವರು ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರಾ ಬಂಧುವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಕುಪ್ಪೇಗಾಲ ಗ್ರಾಮದಲ್ಲಿ ನಾಳೆ (ಮಂಗಳವಾರ) ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಅವರ ಬಂಧುಗಳು ತಿಳಿಸಿದ್ದಾರೆ.

ತೃತೀಯ ಲಿಂಗಿಗಳಿಗೆ ಮತದಾರರ ಚೀಟಿ ವಿತರಣೆ

ಅರ್ಹರು ಮತದಾರರ ಚೀಟಿ ಹೊಂದುವುದು ಅವಶ್ಯ: ಜಿಲ್ಲಾಧಿಕಾರಿ ಡಾ.ರಾಜೇಂದ್ರ ಸಲಹೆ



ಮೈಸೂರು, ಮಾ.27– ಜಿಲ್ಲೆಯಲ್ಲಿ 212 ಜನ ತೃತೀಯ ಲಿಂಗಿಗಳಿಗೆ ಮತದಾರರ ಚೀಟಿ ಇಲ್ಲವೆಂಬ ಮಾಹಿತಿ ಇದ್ದು, ಎಲ್ಲಾ ತೃತೀಯ ಲಿಂಗಿಗಳು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು, ಮತದಾರರ ಚೀಟಿ ಹೊಂದಿರಬೇಕು ಎಂದು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾ ಅಧಿಕಾರಿ ಡಾ. ಕೆ.ವಿ. ರಾಜೇಂದ್ರ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ತೃತೀಯ ಲಿಂಗಿಗಳಿಗೆ ಮತದಾರ ಗುರುತಿನ ಚೀಟಿ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮತದಾರರ ಚೀಟಿಯಲ್ಲಿ ಹೆಸರು ಬದಲಾವಣೆಗೆ ಪೂರಕವಾದ ದಾಖಲೆಗಳು ಅಗತ್ಯ, ತಕ್ಷಣಕ್ಕೆ ಅದು ಸಾಧ್ಯವಿಲ್ಲ. ಹೆಸರು ಬದಲಾವಣೆಗೆ ನೋಟರಿ ಮಾಡಿಸಿ ಕೋರ್ಟ್‌ನಲ್ಲಿ ತಿದ್ದುಪಡಿ ಮಾಡಿಸಿ ನಂತರ ಪತ್ರಿಕೆಯಲ್ಲಿ ಪ್ರಕಟ ಮಾಡಿಸಬೇಕು. ವಯಸ್ಸಿನ ಬದಲಾವಣೆಗೆ ದಾಖಲೆಗಳು ಬೇಕು. ಪ್ರಸ್ತುತ ವಿಳಾಸ ಮತ್ತು ಲಿಂಗದ ನೋಂದಣಿ ಬದಲಾವಣೆ ಮಾಡಲಾಗುವುದು ಎಂದು ಅವರು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಮಾತನಾಡಿ, ಚುನಾವಣೆ ಮುಗಿದ ನಂತರ ಜಾಗೃತಿ ಕಾರ್ಯಕ್ರಮಗಳನ್ನು ಮಾಡಿ ಹೆಸರು ಹಾಗೂ ಲಿಂಗ ನೋಂದಣಿ ಬದಲಾವಣೆ ಮಾಡುವ ಅಭಿಯಾನವನ್ನು ಹಮ್ಮಿಕೊಳ್ಳಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಜಿಪಂ ಉಪ ಕಾರ್ಯದರ್ಶಿ ಕೃಷ್ಣಂರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು ಇತರರು ಉಪಸ್ಥಿತರಿದ್ದರು.

ಶ್ರೀ ರಾಮನವಮಿ, ಮಹಾವೀರ ಜಯಂತಿ ಪ್ರಯುಕ್ತ ಮಾಂಸ ಮಾರಾಟ ನಿಷೇಧ

ಮೈಸೂರು, ಮಾ.27– ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಮೈಸೂರು ನಗರದಲ್ಲಿ ಮಾ.30ರಂದು ಶ್ರೀ ರಾಮನವಮಿ ಹಾಗೂ ಏ.4ರಂದು ಮಹಾವೀರ ಜಯಂತಿ ಪ್ರಯುಕ್ತ ಮುಚ್ಚಲು ಆದೇಶ ನೀಡಲಾಗುತ್ತದೆ.

ಈ ದಿನಗಳಂದು ಕುರಿ, ಮೇಕೆ, ದನ, ಎಮ್ಮೆ, ಕೋಳಿ, ಹಂದಿ ಮತ್ತು ಮೀನು ಮಾಂಸ ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಆರೋಗ್ಯಾಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೃದ್ರೋಗಿಗಳ ಚಿಕಿತ್ಸೆಗೆ ತ್ವರಿತ ಸೇವೆ: ಡಿಹೆಚ್‌ಓ

ಮೈಸೂರು,ಮಾ.27–ಪ್ರಪಂಚದಲ್ಲಿ ಅಸಾಂಕ್ರಾಮಿಕ ರೋಗಗಳ ಮರಣಗಳಲ್ಲಿ 12% ಭಾರತದಲ್ಲಿ ಹೃದಯ ರಕ್ತನಾಳದ ಕಾಯಿಲೆಯ ಹೆಚ್ಚಿನ ಹೊರೆಯನ್ನು ಹೊಂದಿದೆ. ಭಾರತದಲ್ಲಿ ಪ್ರತಿ ವರ್ಷ 2ರಿಂದ 3 ಮಿಲಿಯನ್ ಜನರು ಹೃದಯ ರೋಗದಿಂದ ಬಳಲುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ. ಭಾರತದಲ್ಲಿ ಪ್ರತಿ ನಿಮಿಷಕ್ಕೆ ಸರಾಸರಿ 4 ಜನರು ಹೃದಯಾಘಾತದಿಂದ ಮರಣ ಹೊಂದುತ್ತಾರೆ. ಕರ್ನಾಟಕದಲ್ಲಿ 6.97 ಕೋಟಿ ಜನಸಂಖ್ಯೆಯೊಂದಿಗೆ, ಪ್ರತಿ ವರ್ಷ ಅಂದಾಜು 96,150 ರೋಗಿಗಳು ಹೃದಯ ರೋಗದಿಂದ ಬಳಲುತ್ತಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಪ್ರಸಾದ್ ತಿಳಿಸಿದ್ದಾರೆ.



ಹೃದಯರೋಗಿಗಳಿಗೆ ರೋಗ ಲಕ್ಷಣದ ಪ್ರಾರಂಭದ 90 ನಿಮಿಷಗಳಲ್ಲಿ ಚಿಕಿತ್ಸೆ ನೀಡಬೇಕಾಗುತ್ತದೆ. ನಂತರ ಪ್ರತಿ 30 ನಿಮಿಷಗಳ ವಿಳಂಬವು ಹೃದಯ ಸ್ನಾಯುವಿನ 50% ನಷ್ಟಕ್ಕೆ ಕಾರಣವಾಗುತ್ತದೆ. ಮುಖ್ಯಮಂತ್ರಿಗಳು ಹೆಚ್ಚುವರಿ 30 ಸ್ಪೋಕ್ಸ್‌ಗಳನ್ನು ಆಯ್ಕೆಮಾಡಲು ಸೂಚಿಸಿದ್ದು, ಅದರಂತೆ 30 ಸ್ಪೋಕ್ಸ್‌ಗಳನ್ನು ಗುರುತಿಸಿದ್ದು, 2 ಹಬ್‌ಗಳನ್ನು ಮ್ಯಾಪಿಂಗ್ ಮಾಡಲಾಗಿದೆ. ಆದ್ದರಿಂದ ಸ್ಪೋಕ್ಸ್ ನಿರ್ವಹಣಾ ಯೋಜನೆಯೊಂದಿಗೆ ಒಟ್ಟು 75 ಸ್ಪೋಕ್ಸ್‌ಗಳು ಮತ್ತು 5 ಹಬ್‌ಗಳನ್ನು ಕಾರ್ಯನಿರ್ವಹಿಸುತ್ತವೆ. ಸ್ಟೀಮ್ ನಿರ್ವಹಣಾ ಮಾದರಿಯ ಅನುಷ್ಠಾನವು ಸ್ಟೀಮ್ ಆರೈಕೆ ತಾಲೂಕು ಆಸ್ಪತ್ರೆಗಳಲ್ಲಿ ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳಿಗೆ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವ ಒಂದು ಕಾರ್ಯಕ್ರಮವಾಗಿದ್ದು ಹೃದಯಾಘಾತದಿಂದ ಸಾರ್ವಜನಿಕರಿಗೆ ವೆಚ್ಚ, ಸಮಯ ಹಾಗೂ ಮರಣ ಪ್ರಮಾಣವು ಕಡಿಮೆಯಾಗುತ್ತದೆ.


ಡಾ.ಪ್ರಸಾದ್

ಜಿಲ್ಲೆಯಲ್ಲಿ ಸ್ಟೀಮ್ ನಿರ್ವಹಣಾ ಮಾದರಿಯನ್ನು ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ, ನಂಜನಗೂಡು, ಟಿ.ನರಸೀಪುರ, ಪಿರಿಯಾಪಟ್ಟಣ, ಹುಣಸೂರು ಹಾಗೂ ಕೆ.ಆರ್.ನಗರ ತಾಲೂಕು ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗಿದೆ. ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳಿಗೆ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವ ಒಂದು ಕಾರ್ಯಕ್ರಮವಾಗಿದ್ದು ಹೃದಯಾಘಾತದಿಂದ ಸಾರ್ವಜನಿಕರಿಗೆ ವೆಚ್ಚ, ಸಮಯ ಹಾಗೂ ಮರಣ ಪ್ರಮಾಣವು ಕಡಿಮೆಯಾಗುವುದೆಂದು ತಿಳಿಸಿದ್ದಾರೆ.


ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಹಿಂದುಳಿದ ವರ್ಗಗಳ ಹರಿಕಾರ ಹಾಗೂ ಹಿಂದುಳಿದ ವರ್ಗಗಳ ಬೈಬಲ್ ಎಂಬ ಖ್ಯಾತಿ ಪಡೆದ ಎಲ್.ಜಿ. ಹಾವನೂರರ 96ನೇ ಜಯಂತಿ ಆಚರಿಸಲಾಯಿತು. ಹಾವನೂರರ ಭಾವಚಿತ್ರಕ್ಕೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ವಾಲ್ಮೀಕಿ ನೌಕರರ ಸಂಘದ ಅಧ್ಯಕ್ಷ ವೈ.ಪಿ.ಜಗದೀಶ್‌ಮೂರ್ತಿ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಮುಖಂಡರಾದ ಡಾ.ನಂಜುಂಡಸ್ವಾಮಿ, ಹೇಮಂತ್, ಚಿಕ್ಕಣ್ಣ, ಚೆನ್ನಕೇಶವ, ಟೆನ್ನಿಸ್ ಗೋಪಿ, ಇಲವಾಲ ಕೃಷ್ಣ, ಸಿದ್ದರಾಜು, ಶಿವರಾಜ್, ಶೇಖರ್, ಸತೀಶ್ ಉಪಸ್ಥಿತರಿದ್ದರು.

ಮಾ.30ರಿಂದ ಏ.12ರವರೆಗೆ ಉಚಿತ ಸಿಇಟಿ ತರಬೇತಿ ಶಿಬಿರ

ಮೈಸೂರು,ಮಾ.27(ಎಂಟಿವೈ)– ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದ ವತಿಯಿಂದ ಮಾ.30ರಿಂದ ಏ.12ರವರೆಗೆ ವೃತ್ತಿಪರ ಕೋರ್ಸ್ ಆಕಾಂಕ್ಷಿಗಳಿಗೆ ಉಚಿತ ಸಿಇಟಿ ತರಬೇತಿ ಶಿಬಿರ ಆಯೋಜಿಸಲಾಗಿದೆ ಎಂದು ಶಿಬಿರದ ಸಂಚಾಲಕ ಪ್ರದೀಪ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಂಡವಪುರದಲ್ಲಿ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಾ.30ರಿಂದ ಏ.12ರವರೆಗೆ ಬೆಳಗ್ಗೆ 9ರಿಂದ ಸಂಜೆ 4ರವರೆಗೆ ತರಬೇತಿ ನೀಡಲಾಗುವುದು. ಈಗಾಗಲೇ 300 ಮಂದಿ ನೋಂದಣಿಯಾಗಿದ್ದಾರೆ. ಗೋಪಾಲಸ್ವಾಮಿ ಶಿಶುವಿಹಾರ ಕಾಲೇಜಿಂದ ಪರಿಣಿತ, ಅನುಭವಿ ಉಪನ್ಯಾಸಕರಿದ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ. ಮೈಸೂರು, ಚಾ.ನಗರ, ನಂಜನಗೂಡು, ತಿ.ನರಸೀಪುರ, ಹೆಚ್.ಡಿ.ಕೋಟೆ, ಗುಂಡ್ಲುಪೇಟೆ, ಮಳವಳ್ಳಿ, ಸರಗೂರು ಸ್ಥಳಗಳಿಂದ ಬರುವ ನೋಂದಾಯಿತ ವಿದ್ಯಾರ್ಥಿಗಳಿಗೆ 2 ವಾರಗಳ ಉಚಿತ ಸಾರಿಗೆ ಬಸ್ ವ್ಯವಸ್ಥೆ ಮಾಡಲಾಗಿದೆ. ಮಾಹಿತಿಗೆ ಮೊ.ಸಂ. 9980832371 ಸಂಪರ್ಕಿಸಿ. ಮೊಹಮ್ಮದ್ ಸಲಾಮತ್, ಡಾ.ಶ್ರೀನಿವಾಸ್ ಗೋಷ್ಠಿಯಲ್ಲಿದ್ದರು.


ಕಾರ್ಮಿಕ ಭವಿಷ್ಯ ನಿಧಿ ಸಂಘಟನೆ, ಪ್ರಾದೇಶಿಕ ಕಚೇರಿ ವತಿಯಿಂದ ಟಿ.ನರಸೀಪುರದ ತಾಲೂಕು ಪಂಚಾಯಿತಿ ಕಚೇರಿಯಲ್ಲಿ ನಿಧಿ ಆಪ್ ಕೆ ನಿಕಟ್ 2.0 ಅಡಿ ಏರ್ಪಡಿಸಿದ್ದ ಡಿಸ್ಟ್ರಿಕ್ಟ್ ಔಟ್ ರೀಚ್ ಪ್ರೋಗ್ರಾಂ ಅನ್ನು ತಾಪಂ ಇಓ ಕೃಷ್ಣ ಉದ್ಘಾಟಿಸಿದರು. ಮೈಸೂರು ಇಪಿಎಫ್ ಪ್ರಾದೇಶಿಕ ಕಚೇರಿಯ ಎನ್‌ಫೋರ್ಸ್‌ಮೆಂಟ್ ಆಫೀಸರ್ ನಾರಾಯಣ ರಾವ್, ಡಿಪಿಎ ಸಂಪತ್‌ಕುಮಾರ್, ಎಸ್‌ಎಸ್‌ಎ ಕೆ.ರಮೇಶ್ ಉಪಸ್ಥಿತರಿದ್ದಾರೆ.

ಮಾ.30ರಿಂದ ಶ್ರೀ ರಾಮಾಭ್ಯುದಯ ಸಭಾದಿಂದ ಸಂಗೀತೋತ್ಸವ

ಮೈಸೂರು,ಮಾ.27–ಮೈಸೂರಿನ ಶ್ರೀರಾಮಪೇಟೆಯಲ್ಲಿರುವ ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಶ್ರೀರಾಮ ನವಮಿ ಅಂಗವಾಗಿ ಕುಂಚಿಟಿಗರ ಸಂಘದ ಶ್ರೀಮತಿ ಆಲಮ್ಮನವರ ಛತ್ರದಲ್ಲಿ ಮಾ.30ರಿಂದ ಏ.8ರವರೆಗೆ ಪ್ರತಿನಿತ್ಯ ಸಂಜೆ 6.30ರಿಂದ ರಾತ್ರಿ 9.30ರವರೆಗೆ ಸಂಗೀತೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ವಿದುಷಿ ಶ್ರೀಮತಿ ಜಯಂತಿ ಕುಮರೇಶ್ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಕೈಗಾರಿಕೋದ್ಯಮಿ ಡಾ.ಎಂ. ಜಗನ್ನಾಥ ಶೆಣೈ ಭಾಗವಹಿಸುವರು. ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಾ.ಎನ್.ಶ್ರೀರಾಮ್ ಅಧ್ಯಕ್ಷತೆ ವಹಿಸಲಿದ್ದಾರೆ.


ಮಾ.30: ವಿದುಷಿ ಜಯಂತಿ ಕುಮರೇಶ್ ಅವರಿಂದ ವೀಣಾವಾದನ, ವಿದ್ವಾನ್ ಅನಂತ ಆರ್.ಕೃಷ್ಣ (ಮೃದಂಗ), ವಿದ್ವಾನ್ ಗುರು ಪ್ರಸನ್ನ (ಕಂಜೀರ).

ಮಾ.31: ವಿದ್ವಾನ್ ಪಾಲ್‌ಘಾ ಆರ್.ರಾಮಪ್ರಸಾದ್ ಅವರಿಂದ ಶಾಸ್ತ್ರೀಯ ಸಂಗೀತ. ವಿದ್ವಾನ್ ಹೆಚ್.ಎನ್.ಭಾಸ್ಕರ್ (ಪಿಟೀಲು), ವಿದ್ವಾನ್ ಅನಂತ ಆರ್.ಕೃಷ್ಣ (ಮೃದಂಗ), ವಿದ್ವಾನ್ ಗಿರಿಧರ್ ಉಡುಪ (ಘಟಂ).

ಏ.1: ವಿದ್ವಾನ್ ಹೇರಂಬ ಮತ್ತು ವಿದ್ವಾನ್ ಹೇಮಂತ್ ಅವರಿಂದ ದ್ವಂದ್ವ ಕೊಳಲು ವಾದನ. ವಿದ್ವಾನ್ ವಿಶ್ವೇಷ್ ಚಂದ್ರಶೇಖರ್ (ಪಿಟೀಲು), ವಿದ್ವಾನ್ ಹೆಚ್.ಎಸ್.ಸುಧೀಂದ್ರ (ಮೃದಂಗ), ವಿದ್ವಾನ್ ಶಮಿತ್‌ಗೌಡ (ಘಟಂ).

ಏ.2: ವಿದ್ವಾನ್ ಅಶ್ವತ್ಥ್ ನಾರಾಯಣ್ ಅವರಿಂದ ಶಾಸ್ತ್ರೀಯ ಸಂಗೀತ. ವಿದ್ವಾನ್ ವಿಶ್ವೇಷ್ ಚಂದ್ರಶೇಖರ್ (ಪಿಟೀಲು), ವಿದ್ವಾನ್ ಕೆ.ವಿ.ಪ್ರಸಾದ್ (ಮೃದಂಗ), ವಿದ್ವಾನ್ ವಿ.ರಾಮಾನುಜಂ (ಘಟಂ).

ಏ.3: ಮಲ್ಲಾಡಿ ಬ್ರದರ್ಸ್ ಶ್ರೀರಾಮಪ್ರಸಾದ್ ಮತ್ತು ರವಿಕುಮಾರ್ ಅವರಿಂದ ಶಾಸ್ತ್ರೀಯ ಸಂಗೀತ. ವಿದ್ವಾನ್ ಎಂಬರ್ ಕಣ್ಣನ್ (ಪಿಟೀಲು), ವಿದ್ವಾನ್ ಕೆ.ವಿ.ಪ್ರಸಾದ್ (ಮೃದಂಗ), ವಿದ್ವಾನ್ ಗಿರಿಧರ್ ಉಡುಪ (ಖಂಜೀರ).



ಏ.4: ವಿದುಷಿ ಅನುಪಮ ಭಾಗವತ್ ಅವರಿಂದ ಸಿತಾರ್ ವಾದನ. ಪಂಡಿತ್ ರವೀಂದ್ರ ಯಾವಗಲ್ (ತಬಲ).

ಏ.5: ವಿದುಷಿ ಐಶ್ವರ್ಯ ವಿದ್ಯ ರಘುನಾಥ್ ಅವರಿಂದ ಶಾಸ್ತ್ರೀಯ ಸಂಗೀತ. ವಿದುಷಿ ನಳಿನಾ ಮೋಹನ್ (ಪಿಟೀಲು), ವಿದ್ವಾನ್ ಬಿ.ಎಸ್.ಪ್ರಶಾಂತ್ (ಮೃದಂಗ), ವಿದ್ವಾನ್ ಶರತ್ ಕೌಶಿಕ್ (ಘಟಂ).

ಏ.6: ವಿದುಷಿ ನಂದಿನಿ ಅವರಿಂದ ಶಾಸ್ತ್ರೀಯ ಸಂಗೀತ. ವಿದ್ವಾನ್ ಮುತ್ತೂರು ಶ್ರೀನಿಧಿ (ಪಿಟೀಲು), ವಿದ್ವಾನ್ ಬಿ.ಸಿ. ಮಂಜುನಾಥ್ (ಮೃದಂಗ), ವಿದ್ವಾನ್ ವಿ.ರಾಮಾನುಜಂ (ಘಟಂ).

ಏ.7: ವಿದ್ವಾನ್ ಪ್ರಸನ್ನ ವೆಂಕಟರಾಮನ್ ಮತ್ತು ರಿತ್ವಿಕ್ ರಾಜ ಅವರಿಂದ ಶಾಸ್ತ್ರೀಯ ಸಂಗೀತ. ವಿದ್ವಾನ್ ಹೆಚ್.ಎನ್.ಭಾಸ್ಕರ್ (ಪಿಟೀಲು), ವಿದ್ವಾನ್ ಡೆಲ್ಲಿ ಸಾಯಿರಾಂ (ಮೃದಂಗ), ವಿದ್ವಾನ್ ಬಿ.ರಾಜಶೇಖರ್ (ಮೋರ್ಚಿಂಗ್).


ಏ.8: ವಿದ್ವಾನ್ ರಾಮಕೃಷ್ಣನ್‌ಮೂರ್ತಿ ಅವರಿಂದ ಶಾಸ್ತ್ರೀಯ ಸಂಗೀತ. ವಿದ್ವಾನ್ ಎಚ್.ಎನ್.ಭಾಸ್ಕರ್ (ಪಿಟೀಲು), ವಿದ್ವಾನ್ ಡೆಲ್ಲಿ ಸಾಯಿರಾಂ (ಮೃದಂಗ), ವಿದ್ವಾನ್ ಗುರು ಪ್ರಸನ್ನ (ಖಂಜೀರ).

ರಾಮಾಯಣ ಪ್ರವಚನ: ನಿವೃತ್ತ ಇಂಜಿನಿಯರ್ ಕೃ. ರಾಮಚಂದ್ರ ಅವರಿಂದ ರಾಮಮಂದಿರದಲ್ಲಿ ಮಾ.30ರಿಂದ ಏ.8ರವರೆಗೆ ಪ್ರತಿದಿನ ಸಂಜೆ 5ರಿಂದ 6ರವರೆಗೆ ರಾಮಾಯಣ ಪ್ರವಚನವಿದೆ. ಏ.2ರಂದು ಬೆಳಗ್ಗೆ 10ಕ್ಕೆ ಸೀತಾ ಕಲ್ಯಾಣ, ಸಂಜೆ 4.30ಕ್ಕೆ ಶ್ರೀರಾಮಪೇಟೆ ಶ್ರೀಮತಿ ಆಲಮ್ಮನವರ ಛತ್ರದಲ್ಲಿ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ ಏರ್ಪಡಿಸಲಾಗಿದೆ. ಡಾ. ಹೆಚ್.ವಿ.ನಾಗರಾಜರಾವ್ ಅವರಿಂದ ವಿಷ್ಣು ಸಹಸ್ರನಾಮದ ಮಹತ್ವ ಕುರಿತು ಪ್ರವಚನವಿದೆ.

ಏ.9ರಂದು ಬೆಳಗ್ಗೆ 9.30ಕ್ಕೆ ರಾಮಮಂದಿರದಲ್ಲಿ ಎ.ಎನ್. ಸೋಮಶೇಖರ್ ಅವರ ನೇತೃತ್ವದಲ್ಲಿ ಅಭಿಷೇಕ, ಅರ್ಚನೆ, ಶ್ರೀರಾಮ ಪಟ್ಟಾಭಿಷೇಕ ನಡೆಯಲಿದೆ. ವಸಂತ ವೆಂಕಟೇಶ್ ಅವರಿಂದ ಗಮಕ ವಾಚನ, ವ್ಯಾಖ್ಯಾನ: ಕೃ. ರಾಮಚಂದ್ರ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ. ಮಧ್ಯಾಹ್ನ 1ಕ್ಕೆ ಪ್ರಸಾದ ವಿನಿಯೋಗವಿದೆ.

ಏ. 10ರಂದು ವಿದ್ವಾನ್ ಅಂಜನ ಪಿ.ರಾವ್ ಅವರಿಂದ ಶಾಸ್ತ್ರೀಯ ಸಂಗೀತ. ಏ.11ರಂದು ಹನುಮಂತೋತ್ಸವ. ಸಂಜೆ 6.30ಕ್ಕೆ ರಾಜಬೀದಿಗಳಲ್ಲಿ ಮೆರವಣಿಗೆ. ನಾದಸ್ವರವಾದನ–ವಿದ್ವಾನ್ ಪಾರ್ಥಸಾರಥಿ ಮತ್ತು ವೃಂದ, ರಾತ್ರಿ 8 ಗಂಟೆಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ಏ.12ರಂದು ಶಯನೋತ್ಸವ. ಸಂಜೆ 6.30ಕ್ಕೆ ವಿದುಷಿ ಪೂಜಾ ಸುಗವ್ ಮತ್ತು ವೃಂದದವರಿಂದ ದೇವರನಾಮ ಕಾರ್ಯಕ್ರಮ. ಏ.13ರಂದು ಒಳಗುಡಿ ಉತ್ಸವ. ಸಂಜೆ 6.30ಕ್ಕೆ ವಿದುಷಿ ಚೈತ್ರಿಕ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ. ಏ.24ರಂದು ಶ್ರೀ ಶಂಕರ ಜಯಂತಿ. ಬೆಳಗ್ಗೆ 8ಕ್ಕೆ ಶ್ರೀ ಶಂಕರಭಗವತ್ಪಾದರಿಗೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.3.2023 ಮಂಗಳವಾರ, ಮಳೆ ನಕ್ಷತ್ರ: ಉತ್ತರಭಾದ್ರ, 18.03.2023ರಿಂದ 30.03.2023
ಶ್ರೀ ಶುಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್ :** 14ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಸಂಜೆ 5.30ಕ್ಕೆ ಶ್ರೀ ದಶಶ್ಯಾಮಲಾ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಕರ್ನಾಟಕ ರಾಜ್ಯ ಲಾನ್ ಟೆನ್ನಿಸ್ ಅಸೋಸಿಯೇಷನ್, ಸೈಕಲ್‌ಪ್ಯೂರ್ ಅಗರಬತ್ತೀಸ್ :** ಐಟಿಎಫ್ ಮೈಸೂರು ಓಪನ್ ವರ್ಲ್ಡ್ ಟೆನ್ನಿಸ್ ಟೂರ್ನಮೆಂಟ್, ಗೌರವ ಅತಿಥಿಗಳು : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಮುಖ್ಯ ಅತಿಥಿಗಳು : ಸೈಕಲ್‌ಪ್ಯೂರ್ ಅಗರಬತ್ತೀ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗಾ, ಚೆವರನ್ ಸಿಸ್ಟಮ್ಸ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ಅಲೆಕ್ಸ್ ಚೆರಿಯನ್, ಸ್ಥಳ: ಮೈಸೂರು ಟೆನ್ನಿಸ್ ಕ್ಲಬ್, ಚಾಮರಾಜಪುರಂ, ಬೆಳಗ್ಗೆ 9ಕ್ಕೆ.

■ **ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್, ಕದಂಬ ರಂಗ ವೇದಿಕೆ:** ರಾಷ್ಟ್ರೀಯ ಪತ್ರಿಕೋದ್ಯಮ ಉತ್ಕೃಷ್ಟತಾ ಪ್ರಶಸ್ತಿ ಪುರಸ್ಕೃತರಾದ ರುದ್ರಣ್ಣ ಹರ್ತಿಕೋಟೆ ಅವರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ: ಹಿರಿಯ ಸಾಹಿತಿ ಡಾ.ಸಿಪಿಕೆ, ಗೌರವ ಸಮರ್ಪಣೆ: ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಅಧ್ಯಕ್ಷತೆ: ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಉಪಸ್ಥಿತರು: ಕೆ.ಸಿ.ಮಹದೇವಶೆಟ್ಟಿ, ಎಸ್.ಟಿ.ರವಿಕುಮಾರ್, ಪ್ರೊ.ಎಚ್.ಎಂ.ಪರಮೇಶ್ವರಯ್ಯ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11ಕ್ಕೆ.

■ **ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ನಾಲ್ಕನೇ ರಾಮೋತ್ಸವ, ಸಂಜೆ 6 ರಿಂದ ಸ್ವರ ರಾಗಲಯ ಸಂಗೀತ ಕೇಂದ್ರ ತಂಡದವರಿಂದ ಭಜನೆ, ಸಂಜೆ 6.30ರಿಂದ ಮೋಹನ್‌ಕುಮಾರ್ ಅವರಿಂದ ಹರಿಕಥೆ, ಸ್ಥಳ: ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ, 'ಐ' ಬ್ಲಾಕ್, ರಾಮಕೃಷ್ಣನಗರ.

■ **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟಬಲ್ ವಿಶ್ವಸ್ಥ ಮಂಡಳಿ :** ಶ್ರೀ ರಾಮೋತ್ಸವದ ಅಂಗವಾಗಿ ಸಂಗೀತ ಕಛೇರಿ, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದುಷಿ ನಾಗಸುಧಾ ಅವರ ಶಿಷ್ಯ ವೃಂದದವರಿಂದ ಹಾಡುಗಾರಿಕೆ, ಸ್ಥಳ: ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟಬಲ್ ವಿಶ್ವಸ್ಥ ಮಂಡಳಿ ಆವರಣ, ಯಾದವಗಿರಿ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ.ಟಿ.ಎಸ್.ಗೋಪಾಲ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ–ಡಾ.ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ–ಉಮೇಶ್.ಎಸ್.ಎಸ್., 8.45 ಕರೆಗೊಂದು ಗೀತೆ, 10.00 ಮೌನದಾಚೆಯ ಬೆಳಕು–ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ. ನಿರ್ದೇಶನ ಹಾಗೂ ನಿರೂಪಣೆ ಸಾಹಿತ್ಯ– ಎಸ್.ಶಂಕರ್, ನಿರ್ಮಾಣ–ಗೀತಾ ರಮಾನಂದ್, 10.30 ನಮ್ಮ ಆರೋಗ್ಯ–ಕ್ಯಾನ್ಸರ್ ಜಾಗೃತಿ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು– ಪ್ರಣವ ಹೆಲ್ತ್ ಕೇರ್, ಕುವೆಂಪುನಗರ, ಮೈಸೂರು, ಭಾಗವಹಿಸುವ ತಜ್ಞರು–ಎಂ.ಎಸ್.ಗಿರೀಶ್ **ಮಧ್ಯಾಹ್ನ:** 12.30 ದೇವರನಾಮ–ರಾಜಗೋಪಾಲ ಭಾಗವತರ್, ಶಾಂತಾ ಜಯತೀರ್ಥ, 12.45 ಒಡಹುಟ್ಟಿನ ನುಡಿಗಳು–ಡಾ.ತೀತಿರ ರೇಖಾ ವಸಂತ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 1.20 ಭಾವಗೀತೆಗಳು–ರೋಹಿಣಿ ಪ್ರಭುನಂದನ್, 3.00 ಎನ್. ನಂಜುಂಡಸ್ವಾಮಿ–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ "ಶ್ರೀ ರಾಮ ಪಟ್ಟಾಭಿಷೇಕ", ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಕಿಸಾನ್‌ವಾಣಿ, ಮೈಸೂರು ಸೀಮೆಯಲ್ಲಿ ದಾಳಿಂಬೆ ಕೃಷಿಯ ಅನುಭವ ಕುರಿತು ಎಸ್.ಎನ್.ಮಲ್ಲೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎಸ್.ಸಿ.ಹೇಮಕುಮಾರ್, 9.15 ಯಕ್ಷಗಾನದ ಹಾಡುಗಳು–ಗೋಪಾಲಕೃಷ್ಣಮಯ್ಯ ಭಾಗವತರವರಿಂದ ರುಕ್ಮಿಣಿ ಸ್ವಯಂವರ ಪ್ರಸಂಗದ ಹಾಡು, 9.30 ಎನ್.ಆರ್. ಪ್ರಶಾಂತ್ – ಹಾಡುಗಾರಿಕೆ, 10.00 ಗಮಕ ವಾಚನ, ವಾಚನ–ಪದ್ಮಲತಾ, ವ್ಯಾಖ್ಯಾನ– ಸುಮಾ ಕಿರಣ್

■ **ಶ್ರೀರಾಮ ಸೇನಾ ಮಂಡಳಿ ಚಾರಿಟಬಲ್ ಟ್ರಸ್ಟ್, ಮೈಸೂರು ಉತ್ತರ :** 29ನೇ ಶ್ರೀ ರಾಮನವಮಿ ಸಂಗೀತೋತ್ಸವ–2023, ವಿದ್ವಾನ್ ಹೆಚ್.ಎಸ್. ಪ್ರಶಾಂತ್ ಅವರಿಂದ ಗಾಯನ, ವಿದ್ವಾನ್ ಮತ್ತೂರು ಶ್ರೀನಿಧಿ–ಪಿಟೀಲು, ವಿದ್ವಾನ್ ಅನೂರು ಅನಂತಕೃಷ್ಣ ಶರ್ಮ–ಮೃದಂಗ, ವಿದ್ವಾನ್ ಸುನಾದ್ ಅನೂರ್–ಖಂಜಿರ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಸಂಜೆ 6.15ರಿಂದ.

■ **ಶ್ರೀ ಕಾಶೀಮಠದ ಶ್ರೀರಾಮಮಂದಿರ :** ಕು. ಭವ್ಯ ಪೈ ಮತ್ತು ಕು. ಸಾನವಿ ಪ್ರಭು ಅವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀರಾಮಮಂದಿರ, ಶ್ರೀರಾಮಪೇಟೆ, ಸಂಜೆ 6.15 ರಿಂದ.

■ **ಗಾನಭಾರತೀ :** ಸಂಜೆ 6 ರಿಂದ ವಿದ್ವಾನ್ ಉಮಾಪತಿಯವರ ಶಿಷ್ಯರಿಂದ ಕೀಬೋರ್ಡ್ ಕಾರ್ಯಕ್ರಮ, ಸಂಜೆ 7ರಿಂದ ವಿದುಷಿ ಕೆ.ಎನ್.ಶಾರದಾಂಬ ಅವರಿಂದ ಗಾಯನ, ವಿದ್ವಾನ್ ತ್ಯಾಗರಾಜನ್–ಪಿಟೀಲು, ವಿದ್ವಾನ್ ರಮೇಶ್ ವಿ.ಎಸ್.–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 28 ಮಂಗಳವಾರ 2023

ಸಂಪುಟ: 43 | ಸಂಚಿಕೆ: 337 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಚುನಾವಣೆ ಘೋಷಣೆ ನಂತರವೇ ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಪ್ರಕಟ

ಬೆಂಗಳೂರು, ಮಾ. 27 (ಕೆಎಂಶಿ)– ರಾಜ್ಯ ವಿಧಾನಸಭಾ ಚುನಾವಣಾ ವೇಳಾಪಟ್ಟಿ ಪ್ರಕಟಗೊಂಡ ನಂತರವೇ ಬಿಜೆಪಿ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಲು ಉದ್ದೇಶಿಸಿದೆ. ಚುನಾವಣಾ ಪೂರ್ವ ಸಮೀಕ್ಷೆ ಅಂತಿಮ ವರದಿ ಬಿಜೆಪಿ ವರಿಷ್ಠರ ಕೈಸೇರಿದ್ದು, ಇದನ್ನು ಮುಂದಿಟ್ಟುಕೊಂಡು ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಗೂ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ.

ರಾಜ್ಯ ಚುನಾವಣಾ ಉಸ್ತುವಾರಿ ವಹಿಸಿಕೊಂಡಿರುವ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ 18 ಜಿಲ್ಲೆಗಳ ಅಭ್ಯರ್ಥಿಗಳ ಆಯ್ಕೆ ಹಾಗೂ ಆಯಾ ಕಟ್ಟಿನಲ್ಲಿ ಬದಲಾವಣೆಗೆ ಸಂಬಂಧಿಸಿದಂತೆ ವರಿಷ್ಠರಿಗೆ ವರದಿ ನೀಡಿದ್ದಾರೆ. ಚುನಾವಣಾ ಪೂರ್ವ ಸಮೀಕ್ಷೆ ಮತ್ತು ಧರ್ಮೇಂದ್ರ ಪ್ರಧಾನರ ವರದಿಯೇ ಅಭ್ಯರ್ಥಿಗಳ ಆಯ್ಕೆಗೆ ಮಾನದಂಡವಾಗಲಿದೆ. ಹಾಗಾಗಿ ಸಿಎಂ ಬಸವರಾಜ ಬೊಮ್ಮಾಯಿ ಸೇರಿದಂತೆ ಆ ಪಕ್ಷದ ಟಿಕೆಟ್ ಆಕಾಂಕ್ಷಿಗಳಿಗೆ ನಮಗೆ ಟಿಕೆಟ್ ಸಿಕ್ಕೇ ಸಿಗುತ್ತದೆ ಎಂಬ ಆಶಾಭಾವವಿಲ್ಲ. ಗೆಲುವೇ ಮಾನದಂಡ. ● 9ನೇ ಪುಟಕ್ಕೆ

ಜೈಲು ಶಿಕ್ಷೆ, ಸಂಸದ ಸ್ಥಾನಕ್ಕೆ ಕಂಟಕವಾದ

ಕೋಲಾರ ನೆಲದಿಂದಲೇ ರಾಹುಲ್‌ಗಾಂಧಿ ಚುನಾವಣಾ ರಣಕಹಳೆ!



● ಏಪ್ರಿಲ್ ಐದರಂದು ಕಾಂಗ್ರೆಸ್ ಪ್ರಚಾರಕ್ಕೆ ಚಾಲನೆ ● ಇಲ್ಲಿಂದಲೇ ಆರಂಭವಾಗಲಿದೆ ರಾಜಕೀಯ ಜಿದ್ದಾಜಿದ್ದಿ



ಬೆಂಗಳೂರು, ಮಾ. 27 (ಕೆಎಂಶಿ)–ತಮ್ಮ ಜೈಲು ಶಿಕ್ಷೆಗೆ ಮೂಲವಾದ ಕೋಲಾರದ ನೆಲದಿಂದಲೇ ಕರ್ನಾಟಕ ವಿಧಾನಸಭೆ ಚುನಾವಣೆಯ ರಣಕಹಳೆ ಊದಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಿರ್ಧರಿಸಿದ್ದಾರೆ.

ರಾಜ್ಯ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ಏಪ್ರಿಲ್ ಮೊದಲ ವಾರದಲ್ಲಿ ಚುನಾವಣಾ ನೀತಿ ಸಂಹಿತೆ ಘೋಷಣೆಯಾಗುವ ಸಾಧ್ಯತೆಗಳಿದ್ದು, ಕೋಲಾರದಿಂದ ರಾಜ್ಯ ಕಾಂಗ್ರೆಸ್ ಪ್ರಚಾರ ಸಮರ ಆರಂಭಿಸಲಿದೆ.

ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಈ ಹಿಂದೆ ಮಾಡಿದ ಭಾಷಣದಿಂದಾಗಿ ಸೂರತ್ ನ್ಯಾಯಾಲಯದಿಂದ ಎರಡು ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ರಾಹುಲ್ ಗಾಂಧಿ ಅವರನ್ನು, ಇದೇ ಆಧಾರದ ಮೇಲೆ ಇದೀಗ ಲೋಕಸಭೆಯ ಸದಸ್ಯತ್ವದಿಂದಲೂ ಅನರ್ಹಗೊಳಿಸಲಾಗಿದೆ. ಈ ವಿಷಯವನ್ನೇ ಮುಂದಿಟ್ಟುಕೊಂಡು ದೇಶದ ಜನರ ಮುಂದೆ ಹೋಗಲು ನಿರ್ಧರಿಸಿರುವ ರಾಹುಲ್ ಗಾಂಧಿ, ಇದೀಗ ರಾಜ್ಯ ವಿಧಾನಸಭೆ ಚುನಾವಣೆಯನ್ನು ಇದಕ್ಕೆ ವೇದಿಕೆಯಾಗಿಸಿಕೊಳ್ಳಲು ನಿರ್ಧರಿಸಿದ್ದಾರೆ. ಮುಂದಿನ ತಿಂಗಳು ಐದರಂದು ಕೋಲಾರದಿಂದ ಕಾಂಗ್ರೆಸ್ ಪಕ್ಷ ಪ್ರಚಾರ ಸಮರ ಆರಂಭಿಸಲಿದ್ದು, ರಾಹುಲ್ ಗಾಂಧಿ ಇದಕ್ಕೆ ಚಾಲನೆ ನೀಡಲಿದ್ದಾರೆ.

ಕೋಲಾರದಲ್ಲಿ ಅವರು ಮಾಡಿದ ಭಾಷಣ, ಕಳ್ಳರೆಲ್ಲ ಮೋದಿ ಹೆಸರಿನವರೇ ಯಾಕಿರುತ್ತಾರೆ ಎಂಬ ಅಂಶವನ್ನು ಕೇಂದ್ರೀಕರಿಸಿದ್ದರಿಂದ ಅವರ ವಿರುದ್ಧ ಸೂರತ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಕೆಯಾಗಿತ್ತು. ಈ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಂಡ ನ್ಯಾಯಪೀಠ, ರಾಹುಲ್ ಗಾಂಧಿ ಅವರನ್ನು ತಪ್ಪಿತಸ್ಥ ಎಂದು ಘೋಷಿಸಿದ್ದು,ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿ ಆದೇಶ ನೀಡಿದೆ. ಇದರ ಕಾವು ಮುಂದುವರಿದು ರಾಹುಲ್ ಗಾಂಧಿ ಅವರನ್ನು ಈಗ ಲೋಕಸಭೆಯ ಸದಸ್ಯತ್ವದಿಂದಲೂ ಅನರ್ಹಗೊಳಿಸಲಾಗಿದ್ದು, ಈ ಅಂಶವನ್ನೇ ಬಿಜೆಪಿ ವಿರುದ್ಧದ ಪ್ರಹಾರಕ್ಕೆ ಅಸ್ತ್ರವಾಗಿಸಿಕೊಳ್ಳಲು ರಾಹುಲ್ ಗಾಂಧಿ ಸಜ್ಜಾಗಿದ್ದಾರೆ.

ಕರ್ನಾಟಕ ವಿಧಾನಸಭಾ ಚುನಾವಣೆಯ ಪ್ರಚಾರ ಕಾರ್ಯ ಏಪ್ರಿಲ್ ಐದರಂದು ಆರಂಭವಾಗಲಿದ್ದು, ಏಕಕಾಲಕ್ಕೆ ಇದು ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧದ ಧಾಳಿಗೂ ವೇದಿಕೆಯಾಗಲಿದೆ. ಈ ಮಧ್ಯೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರುಣಾ ಕ್ಷೇತ್ರದ ಜತೆ ಕೋಲಾರ ವಿಧಾನಸಭಾ ಕ್ಷೇತ್ರದಿಂದಲೂ ಸ್ಪರ್ಧೆಯ ಕಣಕ್ಕಿಳಿಯಬಹುದು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕೋಲಾರದ ಬದಲು ವರುಣಾ ಕ್ಷೇತ್ರದಿಂದ ಸ್ಪರ್ಧಿಸುವಂತೆ ಸೂಚಿಸಿರುವುದು ಸ್ಥಳೀಯ ನಾಯಕರ ಆಕ್ರೋಶಕ್ಕೆ ಗುರಿಯಾಗಿದೆ. ಸಿದ್ದರಾಮಯ್ಯ ಅವರು ಇಲ್ಲಿಂದ ಸ್ಪರ್ಧಿಸಿದರೆ ಕೋಲಾರ,ಚಿಕ್ಕಬಳ್ಳಾಪುರ ವ್ಯಾಪ್ತಿಯ ಐದಾರು ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳಿಗೆ ಅನುಕೂಲವಾಗುತ್ತಿತ್ತು. ಆದರೆ ಇದ್ದಕ್ಕಿದ್ದಂತೆ ಸಿದ್ದರಾಮಯ್ಯ ಅವರು ಕಣದಿಂದ ಹಿಂದೆ ಸರಿದಿರುವುದು ಸರಿಯಲ್ಲ ಎಂಬುದು ಸ್ಥಳೀಯ ನಾಯಕರ ವಾದ. ಅವರ ಈ ಅಭಿಪ್ರಾಯವನ್ನು ಕಾಂಗ್ರೆಸ್ ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿದ್ದು,ಈ ಹಿನ್ನೆಲೆಯಲ್ಲಿ ವರುಣಾ ಕ್ಷೇತ್ರದ ಜತೆ, ಕೋಲಾರ ವಿಧಾನಸಭಾ ಕ್ಷೇತ್ರದಿಂದಲೂ ಸ್ಪರ್ಧೆಯ ಕಣಕ್ಕಿಳಿಯುವಂತೆ ಅದು ಸಿದ್ದರಾಮಯ್ಯ ಅವರಿಗೆ ಸೂಚಿಸಬಹುದು ಎನ್ನಲಾಗಿದೆ.



ಎಡಿಸಿ ಸಹಿ ಫೋರ್ಜರಿ ಮಾಡಿ 1.24 ಕೋಟಿಗೆ ಕನ್ನ

ಚಾ.ನಗರ ಡಿಸಿ ಕಚೇರಿಯ ಹೊರಗುತ್ತಿಗೆ ನೌಕರನ ಬಂಧನ

ಚಾಮರಾಜನಗರ, ಮಾ.27(ಎಸ್‌ಎಸ್)– ಅಪರ ಜಿಲ್ಲಾಧಿಕಾರಿಗಳ ಸಹಿಯನ್ನು ಫೋರ್ಜರಿ ಮಾಡಿ, ಸರ್ಕಾರದ ಕೋಟಿ ರೂ.ಗೆ ಕನ್ನ ಹಾಕಿ, ತನ್ನ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದ ಹೊರಗುತ್ತಿಗೆ ನೌಕರನೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯ ಆಡಳಿತ ಶಾಖೆಯ ಹೊರ ಗುತ್ತಿಗೆ ನೌಕರ ರಾಜೇಶ್ ಬಂಧಿತ ಆರೋಪಿ. ಈತ ಆರಂಭದಲ್ಲಿ 32.64 ಲಕ್ಷ ಹಣವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ಬಾರದಂತೆ ವರ್ಗಾವಣೆ ಮಾಡಿಕೊಂಡಿದ್ದ ಎಂದು ಹೇಳಲಾಗಿತ್ತು. ಈಗ ಆ ಮೊತ್ತ 1.24 ಕೋಟಿಗೆ ಏರಿಕೆ ಆಗಿದೆ.

ಹಣ ವಂಚನೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಯವರು ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿರುವ ಪೊಲೀಸರು, ಸೋಮವಾರ ಮುಂಜಾನೆ ಬೆಂಗಳೂರಿನಲ್ಲಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆದುಕೊಂಡು ಬಂದಿದ್ದಾರೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಚೆಕ್ ನಿರ್ವಹಣೆ ಜವಾಬ್ದಾರಿ ಹೊತ್ತಿದ್ದ ದ್ವಿತೀಯ ದರ್ಜೆ ಸಹಾಯಕಿ ಸೌಮ್ಯ ಅವರನ್ನು ಡಿಸಿ ಡಿ.ಎಸ್.ರಮೇಶ್ ಅಮಾನತು ಮಾಡಿ ಆದೇಶ ಹೊರಡಿಸಿದ್ದರು.

ಚೆಕ್ ನಿರ್ವಹಣೆ ಜವಾಬ್ದಾರಿ ಹೊಂದಿದ್ದ ದ್ವಿತೀಯ ದರ್ಜೆ ಸಹಾಯಕಿ ಅಮಾನತು

■ **ಎಡಿಸಿ ಸಹಿ ಫೋರ್ಜರಿ:** ಡಿಸಿ ಕಚೇರಿಯ ಆಡಳಿತ ಶಾಖೆಯು ಗ್ರಾಮೀಣ ರಸಪ್ರಶ್ನೆ ● 9ನೇ ಪುಟಕ್ಕೆ

ಲಂಚಾವತಾರ: ಮಾಡಾಳ್ ವಿರೂಪಾಕ್ಷಪ್ಪ ಬಂಧನ

ಹೈಕೋರ್ಟ್‌ನಲ್ಲಿ ನಿರೀಕ್ಷಣಾ ಜಾಮೀನು ಅರ್ಜಿ ವಜಾ ಬೆನ್ನಲ್ಲೇ ಎಚ್ಚೆತ್ತ ಲೋಕಾಯುಕ್ತ ಪೊಲೀಸರು



ಬೆಂಗಳೂರು,ಮಾ.27–ಲಂಚ ಪ್ರಕರಣದ ಪ್ರಮುಖ ಆರೋಪಿ, ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಲೋಕಾಯುಕ್ತ ಪೊಲೀಸರು ಸೋಮವಾರ ಸಂಜೆ ಬಂಧಿಸಿದ್ದಾರೆ. ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆ(ಕೆಎಸ್‌ಡಿಎಲ್) ಟೆಂಡರ್ ಪ್ರಕ್ರಿಯೆ ಸಂಬಂಧ ಲಂಚ ಪಡೆದ ಪ್ರಕರಣದ ಪ್ರಮುಖ ಆರೋಪಿಯಾಗಿರುವ ದಾವಣಗೆರೆ ಜಿಲ್ಲೆ ಚನ್ನಗಿರಿ ಕ್ಷೇತ್ರದ ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ ಹೈಕೋರ್ಟ್ ಏಕಸದಸ್ಯ ಪೀಠ ಅರ್ಜಿ ವಜಾಗೊಳಿಸಿದ ಹಿನ್ನೆಲೆಯಲ್ಲಿ ಚನ್ನಗಿರಿಯಲ್ಲಿ ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅವರು, ತರಾತುರಿಯಲ್ಲಿ ಅಲ್ಲಿಂದ ತೆರಳಿ, ನಾಪತ್ತೆಯಾಗಿದ್ದರು. ಲೋಕಾಯುಕ್ತ ಪೊಲೀಸರ ತಂಡ ತಾಲೂಕಿನ ಚನ್ನೇಶಪುರ ಗ್ರಾಮದಲ್ಲಿರುವ ಮಾಡಾಳ್ ನಿವಾಸಕ್ಕೆ ತೆರಳಿತ್ತು. ಆದರೆ ಅಷ್ಟರಲ್ಲಾಗಲೇ ಅವರು ಬೆಂಗಳೂರಿನತ್ತ ಕಾರಿನಲ್ಲಿ ಪ್ರಯಾಣ ಬೆಳೆಸಿದ್ದರು.

■ **ಟೋಲ್ ಬಳಿ ಬಂಧನ:** ವಿಷಯ ತಿಳಿದ ಲೋಕಾಯುಕ್ತ ಪೊಲೀಸರ ತಂಡ ಮಾಡಾಳ್ ವಿರೂಪಾಕ್ಷಪ್ಪನ ಬಂಧನಕ್ಕೆ ಕಾರ್ಯಾಚರಣೆ ಆರಂಭಿಸಿದ್ದರು. ಕೊನೆಗೆ ಬಿಳಿ ಬಣ್ಣದ ಇನ್ನೋವಾ ಕಾರಿನಲ್ಲಿ ತೆರಳುತ್ತಿದ್ದ ಅವರನ್ನು ತುಮಕೂರಿನ ಕ್ಯಾತಸಂದ್ರ ಟೋಲ್ ಬಳಿ ಬಂಧಿಸುವಲ್ಲಿ ಯಶಸ್ವಿಯಾದರು. ಬಳಿಕ ಅವರನ್ನು ಬೆಂಗಳೂರಿನತ್ತ ಕರೆದೊಯ್ಯಲಾಯಿತು. ವಿರೂಪಾಕ್ಷಪ್ಪ ಬಂಧನದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಲೋಕಾಯುಕ್ತ ಕಚೇರಿ ಬಳಿ 20ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯೊಂದಿಗೆ ಬಿಗಿ ಬಂದೋಬಸ್ತ್ ಮಾಡಲಾಗಿದೆ.

■ **ಚುನಾವಣೆ ಸಿದ್ಧತೆಯಲ್ಲಿದ್ದರಾ?:** ಲಂಚ ಪ್ರಕರಣದಲ್ಲಿ ಮಧ್ಯಂತರ ಜಾಮೀನಿನ ಮೇಲೆ ಹೊರಗಿದ್ದ ಮಾಡಾಳ್ ವಿರೂಪಾಕ್ಷಪ್ಪ, ಮುಂಬರುವ ಚುನಾವಣೆಯಲ್ಲೂ ಸ್ಪರ್ಧಾಕಾಂಕ್ಷಿಯಾಗಿದ್ದರು ಎನ್ನಲಾಗಿದೆ. ಇದಕ್ಕೆ ಪೂರಕವಾಗಿ ಜಾಮೀನಿನ ಮೇಲಿರುವುದನ್ನು ಲೆಕ್ಕಿಸದೆ ಸೋಮವಾರ ಸಂಜೆ 351 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿ ಹಾಗೂ ಶಂಕುಸ್ಥಾಪನಾ ಸರ್ಕಾರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ವಿವಿಧ ಕಾಮಗಾರಿಗಳ ಉದ್ಘಾಟಿಸಿ, ವಿವಿಧ ಸೌಲಭ್ಯದಡಿ ಫಲಾನುಭವಿಗಳಿಗೆ ಪರಿಕರಗಳನ್ನು ವಿತರಿಸಿದ್ದರು. ● 9ನೇ ಪುಟಕ್ಕೆ

ಒಳ ಮೀಸಲಾತಿ ನಿರ್ಧಾರ ಖಂಡಿಸಿ ಶಿಕಾರಿಪುರದಲ್ಲಿ ಬಂಜಾರ ಸಮುದಾಯ ಪ್ರತಿಭಟನೆ ವೇಳೆ ಹಿಂಸಾಚಾರ

ಮಾಜಿ ಸಿಎಂ ಯಡಿಯೂರಪ್ಪ ಮನೆ ಮೇಲೆ ಕಲ್ಲು ತೂರಾಟ

● ಮನೆಯ ಕಿಟಕಿ ಗಾಜು ಪುಡಿಪುಡಿ ● ಸಿಎಂ ಬೊಮ್ಮಾಯಿ, ಯಡಿಯೂರಪ್ಪ, ವಿಜಯೇಂದ್ರ ಫ್ಲೆಕ್ಸ್, ಬ್ಯಾನರ್‌ಗೆ ಬೆಂಕಿ; ರಸ್ತೆಯಲ್ಲಿ ಟೈರ್, ಸೀರೆಗಳಿಗೆ ಅಗ್ನಿಸ್ಪರ್ಶ ● ಪೊಲೀಸರಿಂದ ಲಘು ಲಾಠಿಪ್ರಹಾರ; ಶಿಕಾರಿಪುರದಲ್ಲಿ ಉದ್ವಿಗ್ನ ಪರಿಸ್ಥಿತಿ





ಶಿವಮೊಗ್ಗ, ಮಾ.27–ರಾಜ್ಯ ಬಿಜೆಪಿ ಸರ್ಕಾರದ ಒಳಮೀಸಲಾತಿ ನಿರ್ಧಾರ ಖಂಡಿಸಿ ಜಿಲ್ಲೆಯ ಶಿಕಾರಿಪುರದಲ್ಲಿ ನಡೆದ ಪ್ರತಿಭಟನೆ ವಿಕೋಪಕ್ಕೆ ತಿರುಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಮನೆ ಮೇಲೆ ಕಲ್ಲು ತೂರಿದ ಪರಿಣಾಮ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ನಿಷೇಧಾಜ್ಞೆ (ಸೆಕ್ಷನ್ 144) ಜಾರಿಗೊಳಿಸಲಾಗಿದೆ.

ಒಳ ಮೀಸಲಾತಿ ಪ್ರಮಾಣ ಕಡಿಮೆ ಮಾಡಲಾಗಿದೆ ಎಂದು ಬಂಜಾರ ಸಮುದಾಯದವರು ತೀವ್ರ ಪ್ರತಿಭಟನೆ ನಡೆಸಿ, ರಾಜ್ಯ ಮತ್ತು ಕೇಂದ್ರ ಸರ್ಕಾರ ವಿರುದ್ಧ ಘೋಷಣೆ ಕೂಗಿದರು. ಬಿಜೆಪಿ ಬಾವುಟ, ಪ್ರಧಾನಿ ಮೋದಿ, ಸಿಎಂ ಬೊಮ್ಮಾಯಿ, ಮಾಜಿ ಸಿಎಂ ಯಡಿಯೂರಪ್ಪ, ವಿಜಯೇಂದ್ರ ಸೇರಿ ಬಿಜೆಪಿ ನಾಯಕರ ಫ್ಲೆಕ್ಸ್‌ಗಳು, ಬ್ಯಾನರ್‌ಗಳನ್ನು ಹರಿದು ಸುಟ್ಟರು. ಅಲ್ಲದೆ ರಸ್ತೆ ಮಧ್ಯೆ ಟೈರ್, ಸೀರೆಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಯುವಕರ ಗುಂಪು ಯಡಿಯೂರಪ್ಪ ಅವರ ಮನೆ ಬಳಿ ನುಗ್ಗಿ ಕಲ್ಲು ತೂರಾಟ ನಡೆಸಿ, ಕಿಟಕಿ ● 6ನೇ ಪುಟಕ್ಕೆ

ಮೊದಲ ಬಾರಿ ಶಾಸಕನಾದಾಗಿನಿಂದ ಇಲ್ಲಿವರೆಗೆ ಧರ್ಮದ ಆಧಾರದಲ್ಲಿ ರಾಜಕಾರಣ ಮಾಡಿಲ್ಲ; ಎಲ್ಲರನ್ನೂ ಒಟ್ಟಿಗೆ ಕರೆದೊಯ್ದಿದ್ದೇನೆ...

-ತನ್ವೀರ್ ಸೇಠ್



“ ಮೈಸೂರು ನಗರದ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ನರಸಿಂಹರಾಜ(ಎನ್‌ಆರ್) ಕ್ಷೇತ್ರಕ್ಕೆ ಮಾತ್ರ ಕಾಂಗ್ರೆಸ್ ಅಭ್ಯರ್ಥಿ ಘೋಷಿಸಲಾಗಿದ್ದು, ಹಾಲಿ ಶಾಸಕರಾದ ತನ್ವೀರ್ ಸೇಠ್ ಅವರನ್ನೇ ಮತ್ತೆ ಕಣಕ್ಕಿಳಿಸಲಾಗುತ್ತಿದೆ. ಅಜೀಜ್ ಸೇಠ್ ಅವರ ನಿಧನದ ಬಳಿಕ ಅವರ ಪುತ್ರರಾದ ತನ್ವೀರ್ ಸೇಠ್ ಚುನಾವಣಾ ರಾಜಕೀಯ ಪ್ರವೇಶಿಸಿದ್ದು, 2002ರಲ್ಲಿ ನಡೆದ ಉಪ ಚುನಾವಣೆ ಸೇರಿ 2018ರ ಸಾರ್ವತ್ರಿಕ ಚುನಾವಣೆವರೆಗೆ ಸತತವಾಗಿ ಐದು ಬಾರಿ ಶಾಸಕರಾಗಿ ಆಯ್ಕೆಯಾಗಿ ದಾಖಲೆ ಬರೆದಿದ್ದಾರೆ. ಸೋಲಿಲ್ಲದ ಸರದಾರರಾಗಿರುವ ಅವರು 6ನೇ ಬಾರಿಗೆ ಮುಂದಿನ ಮೇ ತಿಂಗಳಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದು, ಮತ್ತೆ ಶಾಸಕರಾಗಿ ಆಯ್ಕೆಯಾದರೆ 6 ಬಾರಿ ಶಾಸಕರಾಗಿದ್ದ ತಮ್ಮ ತಂದೆಯ ದಾಖಲೆಯನ್ನೂ ಸರಿಗಟ್ಟಲಿದ್ದಾರೆ. ತಮ್ಮ ಐದು ಚುನಾವಣೆಗಳಲ್ಲೂ ಸಾಲು ಸಾಲು ಸ್ಪರ್ಧಿಗಳಿದ್ದರೂ ಶೇ.32ರಿಂದ 39ರಷ್ಟು ಮತಗಳೊಂದಿಗೆ ಆಯ್ಕೆಯಾಗಿರುವುದು ವಿಶೇಷ. ಈ ನಡುವೆ ವೈಯಕ್ತಿಕ ಕಾರಣದಿಂದ ಚುನಾವಣಾ ರಾಜಕೀಯದಿಂದ ನಿವೃತ್ತಿ ಪಡೆಯುವ ಚಿಂತನೆಯಲ್ಲಿದ್ದ ತನ್ವೀರ್ ಸೇಠ್ ಅವರನ್ನು ಕಾಂಗ್ರೆಸ್ ಮತ್ತೆ ಅಖಾಡಕ್ಕಿಳಿಸಿದೆ. ಚುನಾವಣೆ ಹೊಸ್ತಿಲಲ್ಲಿ ಅವರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ್ದಾರೆ.

■ ಸಂದರ್ಶನ: ಎಸ್.ಬಿ.ದೇವರಾಜ

ಮೈಸೂರು ಮಿತ್ರ: ಎನ್‌ಆರ್ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ತಮಗೆ 6ನೇ ಬಾರಿಗೆ ಟಿಕೆಟ್ ಘೋಷಿಸಿದೆ. ಈ ಬಗ್ಗೆ ನಿಮ್ಮ ಮೊದಲ ಪ್ರತಿಕ್ರಿಯೆ ಏನು?

ತನ್ವೀರ್ ಸೇಠ್: ಹೌದು, ಈಗಾಗಲೇ ಟಿಕೆಟ್ ಘೋಷಿಸಿದ್ದಾರೆ. ಒಂದೆಡೆ ಯಾವ ರೀತಿ ಸಿದ್ಧತೆ ಮಾಡಿಕೊಳ್ಳಬೇಕು ಎನ್ನುವ ಚಿಂತನೆ ಶುರುವಾಗಿದೆ. ನೋಡೋಣ, ಇನ್ನೂ ಚುನಾವಣಾ ವೇಳಾಪಟ್ಟಿ ಪ್ರಕಟವಾದ ನಂತರ ರೂಪುರೇಷೆ ನಿರ್ಧರಿಸಬೇಕಿದೆ.

ಮಿತ್ರ: ಈ ನಡುವೆ ಚುನಾವಣಾ ರಾಜಕೀಯದಿಂದ ನಿವೃತ್ತಿ ಚಿಂತನೆ ಮಾಡಿದ್ದಕ್ಕೆ ಏನಾದರೂ ಬಲವಾದ ಕಾರಣವಿತ್ತೇ?.

ತನ್ವೀರ್: ಇಲ್ಲ, ನಾನು ನನ್ನ ವೈಯಕ್ತಿಕ ವಿಚಾರವನ್ನು ಪಕ್ಷಕ್ಕೆ ತಿಳಿಸಿದ್ದೆ. ನಂತರ ಕಾರ್ಯಕರ್ತರ ಒತ್ತಡದ ಮೇರೆಗೆ ಪಕ್ಷದ ವರಿಷ್ಠರು ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ ಎಂದು ಹೇಳಿದ್ದೆ. ಪಕ್ಷ ಈಗ ಟಿಕೆಟ್ ಕೊಟ್ಟಿದೆ, ಅದನ್ನು ಸ್ವೀಕರಿಸಿದ್ದೇನೆ.

ಮಿತ್ರ: ಈ ವಿಚಾರವಾಗಿ ಪಕ್ಷದ ನಾಯಕರು ನಿಮ್ಮನ್ನು ಸಂಪರ್ಕಿಸಿ ಮಾತನಾಡಿದ್ದರಾ?

ತನ್ವೀರ್: ಎಐಸಿಸಿ, ಕೆಪಿಸಿಸಿ ಅಧ್ಯಕ್ಷರು, ಸಿಎಲ್‌ಪಿ ನಾಯಕರು ಸೇರಿದಂತೆ ಎಲ್ಲರೂ ನನ್ನೊಂದಿಗೆ ಮಾತನಾಡಿದ್ದರು. ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ಅವರೂ ಬೆಂಗಳೂರಿಗೆ ನನ್ನನ್ನು ಕರೆಸಿಕೊಂಡು ಮಾತನಾಡಿದ್ದರು. ಚುನಾವಣಾ ರಾಜಕೀಯ ನಿವೃತ್ತಿ ವಿಚಾರವಾಗಿ ಯಾವುದೇ ಹೇಳಿಕೆ ನೀಡಬೇಡಿ. ನಾವು ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದಿದ್ದರು.

ಮಿತ್ರ: ಎನ್‌ಆರ್ ಕ್ಷೇತ್ರದಿಂದ ಅರ್ಜಿ ಹಾಕಿದ್ದ ಇತರ ಸ್ಪರ್ಧಾಕಾಂಕ್ಷಿಗಳ ಬೆಂಬಲ ನಿಮಗೆ ಸಿಗುವುದೇ. ಗೆಲುವು ಸಾಧಿಸುವ ವಿಶ್ವಾಸವಿದೆಯೇ?

ತನ್ವೀರ್: ಖಂಡಿತ ಆ ವಿಶ್ವಾಸವಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಟಿಕೆಟ್ ಕೇಳಿದ್ದಾರೆ ಎಂದ ಮಾತ್ರಕ್ಕೆ ಯಾರೂ ಶತ್ರುಗಳಾಗಲು ಸಾಧ್ಯವಿಲ್ಲ ಅಲ್ಲವೇ. ಜನರ ಮುಂದೆ ಹೋಗಿ ಅವರ ಆಶೀರ್ವಾದ ಕೇಳುತ್ತೇವೆ. ಎಲ್ಲವನ್ನೂ ಅವರೇ ನಿರ್ಧರಿಸುತ್ತಾರೆ.

ಮಿತ್ರ: ಕ್ಷೇತ್ರದ ಜನ ನಿಮ್ಮನ್ನು, 6ನೇ ಬಾರಿ ಶಾಸಕರಾಗಿ ಯಾವ ಕಾರಣಕ್ಕೆ ಆಯ್ಕೆ ಮಾಡಬೇಕು?

ತನ್ವೀರ್: ಒಂದು ಅಭಿವೃದ್ಧಿಯ ಪರಿಕಲ್ಪನೆ. ನಾನು ಎಲ್ಲೆಲ್ಲಿ ಅವಕಾಶ ಸಿಗುತ್ತೋ ಅಲ್ಲಲ್ಲಿ ನಿರಂತರವಾಗಿ ಅಭಿವೃದ್ಧಿ ಮಾಡುತ್ತಿದ್ದೇನೆ. ಅದಕ್ಕಿಂತ ಹೆಚ್ಚಾಗಿ ಕ್ಷೇತ್ರವನ್ನು ಒಳ್ಳೆಯ ರೀತಿಯಲ್ಲಿ ಕಾಪಾಡಿಕೊಂಡು ಹೋಗುವುದು ಮುಖ್ಯ. ಶಾಂತಿ–ಸುವ್ಯವಸ್ಥೆ ಕಾಯ್ದುಕೊಳ್ಳುವುದರ ಜೊತೆಗೆ ವೈಷಮ್ಯ ದೂರ ಮಾಡಿ ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗುವ ಪ್ರವೃತ್ತಿಯೊಂದಿಗೆ ನಾನು ಕೆಲಸ ಮಾಡುತ್ತಿದ್ದೇನೆ. ಬಹುಶಃ ಅದು ನನ್ನ ಕ್ಷೇತ್ರದ ಎಲ್ಲರಿಗೂ ಮೆಚ್ಚುಗೆ ಆಗಿರುವಂತದ್ದು. ಶಾಂತಿ–ಸುವ್ಯವಸ್ಥೆ ಕಾಪಾಡಿಕೊಳ್ಳುವ ಆದ್ಯತೆ ಎಲ್ಲಾ ಹಂತದಲ್ಲೂ ಇದ್ದೇ ಇರುತ್ತದೆ.

ಮಿತ್ರ: ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಎನ್‌ಆರ್ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಾರೆಂಬ ಮಾತಿದೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ತನ್ವೀರ್: ಬರಲಿ, ಪ್ರತಿಸ್ಪರ್ಧಿಯಾಗಿ ಯಾರು ಬಂದರೂ ಚುನಾವಣೆಯಲ್ಲಿ ನಾವು ನಿಲ್ಲಲೇಬೇಕು. ತೀರ್ಮಾನ ಮಾಡುವುದು ಜನ. ಹಾಗಾಗಿ ಯಾರೇ ಬಂದರೂ ಆ ಬಗ್ಗೆ ನಾನು ಪ್ರತಿಕ್ರಿಯಿಸುವುದೇನೂ ಇಲ್ಲ.

ಮಿತ್ರ: ಕಾಂಗ್ರೆಸ್, ಜೆಡಿಎಸ್, ಎಸ್‌ಡಿಪಿಐ ಪಕ್ಷಗಳೂ ಮುಸ್ಲಿಂ ನಾಯಕರನ್ನೇ ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸಿದರೆ ಅದು ಬಿಜೆಪಿಗೆ ವರದಾನವಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಈ ಬಗ್ಗೆ ತಮ್ಮ ಅಭಿಪ್ರಾಯವೇನು?.

ತನ್ವೀರ್: ಯಾರು ಏನೇ ವಿಶ್ಲೇಷಣೆ ಮಾಡಲಿ. ನಾನು ಯಾವತ್ತೂ ಒಂದು ಕೋಮಿನ ಮತಗಳಿಂದ ಗೆದ್ದಿದ್ದೀನಿ ಎಂದು ಎಲ್ಲೂ ಹೇಳಿಲ್ಲ. ಹಾಗೆ ಆಗುವುದಕ್ಕೂ ಸಾಧ್ಯವಿಲ್ಲ. ಚುನಾವಣೆ ಸಂದರ್ಭದಲ್ಲಿ ಮತದಾರರು ಯಾವ್ಯಾವ ಚಿಂತನೆಯಲ್ಲಿ ಯಾವ್ಯಾವ ಹಂತದಲ್ಲಿ ಮತ ಹಾಕಿದ್ದಾರೆ ಎನ್ನುವುದು ಅವರಿಗೆ ಮಾತ್ರ ಗೊತ್ತು. ನನ್ನ ಕ್ಷೇತ್ರದಲ್ಲಿ ನಾನು ಯಾವತ್ತೂ ಜಾತಿ ಆಧಾರಿತವಾದ ಭೇದಭಾವ ಎಲ್ಲೂ ತಂದಿಲ್ಲ. ವಿಶ್ಲೇಷಣೆ ಮಾಡುವವರ ಕಣ್ಣಿಗೆ ನಾನು ಮುಸಲ್ಮಾನನಾಗಿ ಕಾಣುತ್ತೀನಿ. ಆದರೆ ನಾನು ಈವರೆಗೂ ಇತರೆ ಧರ್ಮದವರೊಂದಿಗೂ ಸಮಾನ ಮಾನ್ಯತೆಯೊಂದಿಗೆ ನಡೆದುಕೊಳ್ಳುತ್ತೇನೆ. ನಾನು ಯಾವತ್ತೂ ಧರ್ಮದ ಆಧಾರದಲ್ಲಿ ರಾಜಕಾರಣ ಹಾಗೂ ಚುನಾವಣೆ ಮಾಡಿಲ್ಲ, ಮಾಡುವುದೂ ಇಲ್ಲ.

ಮಿತ್ರ: ಎನ್‌ಆರ್ ಕ್ಷೇತ್ರವನ್ನು ಒಂದೇ ಕುಟುಂಬದವರು ಆಳುತ್ತಿದ್ದು, ನಿರೀಕ್ಷಿತ ಅಭಿವೃದ್ಧಿಯಾಗಿಲ್ಲ ಎಂಬ ಆರೋಪಕ್ಕೆ ನಿಮ್ಮ ಪ್ರತಿಕ್ರಿಯೆ ಏನು?.

ತನ್ವೀರ್: ಈ ರೀತಿ ಆರೋಪ ಮಾಡುವವರೇ ಯಾವ ರೀತಿ ಅಭಿವೃದ್ಧಿಯಾಗಬೇಕೆಂದು ನನಗೆ ಹೇಳಬೇಕು. ಮಳೆ ಬಂದಾಗ ಮನೆಗಳಿಗೆ ನೀರು ನುಗ್ಗುತ್ತಿತ್ತು. ಎಲ್ಲಾ ಭಾಗದಲ್ಲೂ ಒಳಚರಂಡಿ ನೀರು ಹೊರಗೆ ಹರಿಯುತ್ತಿತ್ತು ಲಾರಿ ಮೂಲಕವೇ ಕುಡಿಯುವ ನೀರು ಸರಬರಾಜು ಮಾಡುವ ಪರಿಸ್ಥಿತಿ ಇತ್ತು. ಈಗ ಪ್ರತಿ ಮನೆಗೂ ನಲ್ಲಿ ಹಾಗೂ ಒಳಚರಂಡಿ ಸಂಪರ್ಕ ಇದೆ. ಬಡಾವಣೆಗಳ ಸಂಪರ್ಕಿಸುವ ರಸ್ತೆಗಳೂ ಅಭಿವೃದ್ಧಿಯಾಗಿವೆ. ನಮಗೆ ಬರುವ ಅನುದಾನಗಳನ್ನು ಸೂಕ್ತ ರೀತಿಯಲ್ಲಿ ಹಂಚಿಕೆ ಮಾಡಿಕೊಂಡು ಆದ್ಯತೆ ಮೇರೆಗೆ ನಿರಂತರವಾಗಿ ಕೆಲಸ ಮಾಡಿದ್ದೇವೆ. ಕೊಳಚೆ ಪ್ರದೇಶ ನಿರ್ಮೂಲನೆ ಸಾಧಿಸುವ ಹಂತಕ್ಕೆ ಬಂದಿದ್ದೇವೆ. ನಿಜ, ಕೆಲ ಅನಧಿಕೃತ ಬಡಾವಣೆಗಳಲ್ಲಿ ಅವಶ್ಯಕತೆಗೆ ತಕ್ಕಂತೆ ಮನೆ ಕಟ್ಟಿಕೊಂಡಿರುವುದರಿಂದ ಪಾರ್ಕ್ ಇನ್ನಿತರ ಕಾಮಗಾರಿಗಳಿಗೆ ಸ್ಥಳವಿಲ್ಲ. ಜೊತೆಗೆ ನನ್ನ ಕ್ಷೇತ್ರ ಜಿಲ್ಲೆಯ ಗಡಿ ಭಾಗವಾಗಿರುವ ಕಾರಣ ವಿಸ್ತರಣೆಗೂ ಅವಕಾಶವಿಲ್ಲ. ಜಿಲ್ಲಾ ಕಚೇರಿಗಳ ಸಂಕೀರ್ಣವನ್ನು ಕ್ಷೇತ್ರಕ್ಕೆ ತರುವುದೂ ಕಷ್ಟವಾಗಿತ್ತು. ಬಹುತೇಕ ಪೊಲೀಸ್ ಇಲಾಖೆ ವಸತಿ ಗೃಹಗಳು, ಕಚೇರಿಗಳೆಲ್ಲಾ ನನ್ನ ಕ್ಷೇತ್ರದಲ್ಲೇ ಇವೆ. ಹಾಗಾಗಿ ಆದ್ಯತೆ ಮೇರೆಗೆ ಏನೆಲ್ಲಾ ಸಾಧ್ಯವಿದೆಯೋ ಆ ಎಲ್ಲಾ ಅಭಿವೃದ್ಧಿ ಕಾರ್ಯಗಳಾಗಿವೆ.

ನಕ್ಕರೆ ಅದೇ ಸ್ವರ್ಗ

ತಾಯಿ : ನಾನು ನಿನಗೆ ಟೊಮೆಟೋ ತರಲು ಐದು ರೂಪಾಯಿ, ಆಲೂಗೆಡ್ಡೆ ತರಲು ಐದು ರೂಪಾಯಿ ನಾಣ್ಯ ಕೊಟ್ಟಿದ್ದೆ. ಮತ್ತೆ ನೀನು ಯಾಕೆ ಬರಿಗೈಲಿ ಬಂದೆ?

ಪುಟ್ಟ : ಯಾವ ನಾಣ್ಯ ಟೊಮೊಟೊಗೆ ಮತ್ತು ಯಾವ ನಾಣ್ಯ ಆಲೂಗೆಡ್ಡೆಗೆ ಅಂತ ಮರೆತು ಹೋಯಿತು ಅದಕ್ಕೆ!

ಮೈಸೂರು ಮಿತ್ರ

ಮಂಗಳವಾರ, 28 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಗ್ರಾಹಕರಿಗೆ ಏನು ಬೇಕೆಂದು ಕೇಳಿ ಅದನ್ನು ಉತ್ಪಾದಿಸಲು ಹೊರಟರೆ ಸಮಯ ತಗಲುತ್ತದೆ. ಆ ಹೊತ್ತಿಗೆ ಗ್ರಾಹಕನ ಇಚ್ಛೆ, ಅಭಿರುಚಿಯೇ ಬದಲಾಗಿರುತ್ತದೆ.

– ಸ್ಟೀವ್ ಜಾಬ್

ವೇದ ಸುಳ್ಳಾದರೂ { ದಾನವಿಲ್ಲದ ಮನೆ
ಗಾದೆ ಸುಳ್ಳಾಗದು { ದೊಡ್ಡದಾದರೇನು?

ನಿಮ್ಮ ಪತ್ರಗಳು

ಟೋಲ್ ರಹಿತ ಮುಕ್ತ ಸಂಚಾರಕ್ಕೆ ರಾಜ್ಯ ಸರ್ಕಾರ ಅನುವು ಮಾಡಿಕೊಡಲಿ

ಮಾನ್ಯರೆ,



'ಎಕ್ಸ್‌ಪ್ರೆಸ್ ವೇ' ಈಗ ಬೆಂಗಳೂರು–ಮೈಸೂರು ನಡುವೆ ಸಂಚರಿಸುವವರ ಬಾಯಲ್ಲಿ ತಾಜಾ ಸುದ್ದಿ. ಈ ರಸ್ತೆ ನಿರ್ಮಾಣದ ಉಸ್ತುವಾರಿ ಹೊಣೆ ಹೊತ್ತಿದ್ದ ಉನ್ನತ ಅಧಿಕಾರಿ ಒಬ್ಬರು ಹೇಳುವಂತೆ, ಇದು ದಶಪಥ ರಸ್ತೆಯಲ್ಲ, ಇದು ಅಷ್ಟಪಥ ರಸ್ತೆ ಎನ್ನುತ್ತಾರೆ. ಆದರೆ ಮತ್ತೊಬ್ಬ ಅಧಿಕಾರಿ ಇದು ದಶಪಥ ರಸ್ತೆ ಎಂದು ವಾದಿಸುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಹೈವೇ ರಸ್ತೆಗಳ ನಿರ್ಮಾಣ ತಜ್ಞ ಇಂಜಿನಿಯರ್‌ಗಳ ಪ್ರಕಾರ, ಈಗ ನಿರ್ಮಾಣವಾಗಿರುವ ರಸ್ತೆಯನ್ನು ಸರಿಯಾದ ರೀತಿಯಲ್ಲಿ ನಿರ್ಮಾಣ ಮಾಡಿದ್ದರೆ, ಕನಿಷ್ಠ ಇನ್ನು 8 ರಿಂದ 10 ಕಿಲೋ ಮೀಟರ್‌ನಷ್ಟು ಕಡಿಮೆ ಮಾಡಬಹುದಿತ್ತು. ಈ ರಸ್ತೆಯಲ್ಲಿ ಅನೇಕ ಕಡೆಗಳಲ್ಲಿ ಅನವಶ್ಯಕ ರಸ್ತೆ ತಿರುವುಗಳನ್ನು ನಿರ್ಮಾಣ ಮಾಡಿದ್ದಾರೆ. ಇದು ನಿಜ ಎನ್ನಿಸುತ್ತದೆ. ಕಾರಣ ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ರಸ್ತೆ ಅಪಘಾತವಾಗಿರುವುದೆಲ್ಲಾ ಈ ರಸ್ತೆ ತಿರುವುಗಳಲ್ಲೇ.

ಈ ರಸ್ತೆಯ ನಿರ್ಮಾಣದ ಕೀರ್ತಿ ಮತ್ತು ಯಶಸ್ಸು ಯಾರಿಗೆ ಸಲ್ಲಬೇಕೋ ಅವರಿಗೆ ಸಲ್ಲುತ್ತದೆ. ಅದನ್ನು ಜನ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ತೀರ್ಮಾನಿಸುತ್ತಾರೆ. ಆದರೆ ಈ ಎಕ್ಸ್‌ಪ್ರೆಸ್ ವೇ ನಿರ್ಮಾಣಕ್ಕೆ ಯಾರೊಬ್ಬರೂ ತಮ್ಮ ತಮ್ಮ ಜೇಬಿನಿಂದ ದುಡ್ಡು ಹಾಕಿಲ್ಲ. ಅದು ಒಂದು ರೀತಿಯಲ್ಲಿ ಸಾರ್ವಜನಿಕರು ಕಟ್ಟುವ ತೆರಿಗೆ ಹಣವೇ ಆಗಿರುವುದರಿಂದ, ಈ ರಸ್ತೆಯನ್ನು "ಟೋಲ್ ರಹಿತ, ಸಾರ್ವಜನಿಕರ ಮುಕ್ತ ಸಂಚಾರ"ಕ್ಕೆ ರಾಜ್ಯ ಸರ್ಕಾರ ಅನುವು ಮಾಡಿಕೊಡಲಿ.

ಕಳೆದ 20 ವರ್ಷಗಳ ಹಿಂದೆ, ಮೈಸೂರು–ಬೆಂಗಳೂರು ಷಟ್ಪಥ ರಸ್ತೆ ನಿರ್ಮಾಣ ಮಾಡಿದ ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಸರ್ಕಾರ ಈ ರಸ್ತೆಗೆ ಟೋಲ್ ಹಾಕಲಿಲ್ಲ. ಅದೇ ರೀತಿ ಈ ಎಕ್ಸ್‌ಪ್ರೆಸ್‌ವೇ ರಸ್ತೆಗೆ ಟೋಲ್ ಹಾಕದೇ ಎಲ್ಲಾ ಸಾರ್ವಜನಿಕರ ಮುಕ್ತ ಸಂಚಾರಕ್ಕೆ ರಾಜ್ಯ ಸರ್ಕಾರ ಅನುವು ಮಾಡಿಕೊಡಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು

ಅರ್ಹ ಸಮುದಾಯಗಳಿಗೆ ಒಳ ಮೀಸಲಾತಿಯಿಂದ ನ್ಯಾಯ ಸಿಗಬಹುದೇ!?

ಮಾನ್ಯರೆ,

ಆಂತರಿಕ ಮೀಸಲಾತಿ ಕಲ್ಪಿಸಬೇಕು ಎಂಬ ಹಲವು ವರ್ಷದ ಬೇಡಿಕೆಯಂತೆ ರಾಜ್ಯ ಸರ್ಕಾರವು ಒಳಮೀಸಲಾತಿ ಪ್ರಕಟಿಸಿ ಎಸ್‌ಸಿ ಮೀಸಲಾತಿಯನ್ನು ನಾಲ್ಕು ಗುಂಪುಗಳಾಗಿ ವರ್ಗೀಕರಿಸಿ, ಆದಿ ಕರ್ನಾಟಕ ಸಮುದಾಯಕ್ಕೆ ಶೇ.5.5, ಆದಿ ಜಾಂಬವ ಸಮುದಾಯಕ್ಕೆ ಶೇ.6, ಬಂಜಾರ, ಬೋವಿ, ಕೊರಚ ಸಮುದಾಯಕ್ಕೆ ಶೇ.4.5, ಇತರರಿಗೆ ಶೇ.1 ರಷ್ಟು ನೀಡಲು ನಿರ್ಧರಿಸಿದೆ. ಈ ಒಳ ಮೀಸಲಾತಿಯಿಂದ ಅರ್ಹ ಸಮುದಾಯಗಳಿಗೆ ದೊರೆಯುವ ಸೌಲಭ್ಯಗಳು ಮುಂದಾದರೂ ನ್ಯಾಯಯುತವಾಗಿ ದೊರಕಬಹುದೇ!? ಇಲ್ಲ ಇದು ಕೇವಲ ಚುನಾವಣೆ ಸಂದರ್ಭದಲ್ಲಿ ಎರಡು ಪ್ರಬಲ ಸಮುದಾಯಗಳನ್ನು ಸೆಳೆಯುವ ರಾಜ(ಕೀಯ) ತಂತ್ರಗಾರಿಕೆಯೋ? ಒಟ್ಟಿನಲ್ಲಿ ಚುನಾವಣೆಯಲ್ಲಿ ಗೆದ್ದ ಪಕ್ಷಗಳು ಹಾಗೂ ಕೇಂದ್ರ ಸರ್ಕಾರವು ಸಮ್ಮತಿ ಸೂಚಿಸಿ ಒಳ ಮೀಸಲಾತಿಯಡಿ ಅರ್ಹ ಸಮುದಾಯಗಳಿಗೆ ಸವಲತ್ತುಗಳು ನ್ಯಾಯಯುತವಾಗಿ ದೊರಕಿಸಿಕೊಡುವಂತಾಗಲಿ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಧೂಮ ವಲಯ..!




ಮಾನ್ಯರೆ,

ಇದು ಸೋಮವಾರ ಬೆಳಗ್ಗೆ ಬಲ್ಲಾಳ್ ಸರ್ಕಲ್ ಬಳಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಪಕ್ಕದ ಗಲ್ಲಿಯಲ್ಲಿ ಕಂಡು ಬಂದ ದೃಶ್ಯ. ಇಲ್ಲಿ ಗುಡಿಸಿ ಹಾಕಿದ ಕಸವನ್ನು ಪಾಲಿಕೆಯವರು ತೆಗೆದುಕೊಂಡು ಹೋಗುವುದೇ ಇಲ್ಲ ಹಾಗೂ ಗಲ್ಲಿಯಲ್ಲಿ ಗುಡ್ಡೆ ಹಾಕಿದ ಕಸಕ್ಕೆ ಬೆಂಕಿ ಹಾಕಿ ವಾಯುಮಾಲಿನ್ಯ ಬೇರೆ ಮಾಡುತ್ತಾರೆ. ಇಲ್ಲಿಯ ಪಾಲಿಕೆಯ ಸದಸ್ಯರಿಗಾಗಲೀ, ಸಿಬ್ಬಂದಿಗಾಗಲೀ ಹೇಳುವವರು, ಕೇಳುವವರು ಯಾರೂ ಇಲ್ಲವೇ? ಪಾಲಿಕೆಯ ಆರೋಗ್ಯಾಧಿಕಾರಿಗಳು ಒಮ್ಮೆ ಇಲ್ಲಿ ಬಂದು ನೋಡುತ್ತಾರೆಯಾ?

–ಕೊ.ಸು.ನರಸಿಂಹಮೂರ್ತಿ, ಚಾಮರಾಜಪುರಂ, ಮೈಸೂರು

ಅಂಬೇಡ್ಕರ್ ಅವರ ಕನಸು ನನಸಾಗುವುದು ಯಾವಾಗ?

ಮಾನ್ಯರೆ,



ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹಳೇ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಸಂಗತಿ ಓದಿದ ಮೇಲೆ, ಆ ಮಾತು ನಮ್ಮನ್ನು ಒಮ್ಮೆ ಯೋಚಿಸುವಂತೆ ಮಾಡುತ್ತದೆ. ಅದೇನೆಂದರೆ ಒಂದು ದಿನ ಡಾ. ಬಿ.ಆರ್. ಅಂಬೇಡ್ಕರ್ ಅವರು ಅತ್ಯಂತ ಸಂತೋಷದಲ್ಲಿ ಇರುವುದನ್ನು ಕಂಡು, ಕುತೂಹಲದಿಂದ ಕಾರಣ ಕೇಳಿದಾಗ ಇನ್ನು ಮುಂದೆ ರಾಜನ ಮಕ್ಕಳು ಮಾತ್ರ ರಾಜ್ಯವನ್ನು ಆಳ್ವಿಕೆ ಮಾಡುವ ಬದಲು ಪ್ರಜಾಪ್ರಭುತ್ವದಲ್ಲಿ ವೋಟ್ ಮುಖಾಂತರ ಅವರನ್ನು ಅಯ್ಕೆ ಮಾಡುವ ಶಕ್ತಿ ಜನರಿಗೆ ನೀಡಲಾಗಿದೆ ಎನ್ನುತ್ತಾರೆ. ಹಣವೂ ಸೇರಿದಂತೆ ನಾನಾ ಆಮಿಷಗಳಿಂದ ಶ್ರೀಮಂತರು ಜನರನ್ನು ಮೋಸ ಮಾಡುತ್ತಾರಲ್ಲಾ ಎಂದಾಗ, ಅದು ನನಗೆ ಗೊತ್ತು, ಇದಕ್ಕೆಲ್ಲ ಕೊನೆ ಜನರಿಗೆ ತಾವು ಹಾಕುವ ವೋಟಿನ ಮಹತ್ವ ಅರಿವಾದಾಗ. ನಂತರ ಅವರು ಯಾವುದೇ ಹಣ, ಆಮಿಷಕ್ಕೆ ಒಳಗಾಗುವುದಿಲ್ಲ ಎಂದು ಅಂಬೇಡ್ಕರ್ ಹೇಳಿದ್ದರು.

ರಾಜಕೀಯ ಪಕ್ಷದ ನಾಯಕರು ಭಾಷಣದಲ್ಲಿ ನಾವು ಜಾತ್ಯತೀತರು, ನಮ್ಮಲ್ಲಿ ಎಲ್ಲರಿಗೂ ಸಮಾನ ಅವಕಾಶವಿದೆ ಅಂತ ಹೇಳಿದರೂ ಎಲೆಕ್ಷನ್‌ನಲ್ಲಿ ಟಿಕೆಟ್ ಹಂಚಿಕೆ ಸಮಯ ಬಂದಾಗ ಗೆಲುವು ಒಂದೇ ಮಾನದಂಡ ಎಂಬಂತೆ ಟಿಕೆಟ್ ನೀಡುವುದು ತಿಳಿದಿರುವ ಸಂಗತಿ. ನಮ್ಮ ರಾಜ್ಯದಲ್ಲಿ ಅರ್ಧದಷ್ಟು ಜನಸಂಖ್ಯೆ ಮಹಿಳೆಯರೇ ಇದ್ದಾರೆ. ಅವರಿಗೆ ಹೆಚ್ಚಿನ ಟಿಕೆಟ್ ನೀಡಿ ಅಭ್ಯರ್ಥಿಯನ್ನಾಗಿ ಮಾಡಬೇಕೆಂದು ಯೋಚನೆ ಬರುವುದು ಕಡಿಮೆ.

ನಮ್ಮಲ್ಲಿ ಮತದಾರ ಯಾವಾಗ ನೋಟಿಗಾಗಿ ವೋಟ್ ಹಾಕುತ್ತಾನೋ ಆಗ ಅದೇ ಹಳೆ ರಾಗ. ರಸ್ತೆ, ನೀರು, ಉತ್ತಮ ಶಿಕ್ಷಣ ಇಲ್ಲ ಎಂದು ಪ್ರತಿಭಟನೆ ಮಾಡುವುದು ತಪ್ಪುವುದಿಲ್ಲ. ಅದಕ್ಕಾಗಿ ಪ್ರಜೆಗಳು ಸರಿಯಾದ ವ್ಯಕ್ತಿಯ ಆಯ್ಕೆ ಮಾಡಿದಾಗ, ಪ್ರಜಾಪ್ರಭುತ್ವದಲ್ಲಿ ಪ್ರಾತಿ ಸಾಧ್ಯ ಎಂಬ ಅಂಬೇಡ್ಕರ್ ಅವರ ಮಾತು ನಿಜವಾಗುವುದು ಅಲ್ವಾ.


–ಆನಂದ ಜೇವೂರ್, ಕಲಬುರಗಿ



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ನಿವೃತ್ತಿಯೆಂಬ 'ಆತ್ಮತೃಪ್ತಿ' ನಿಮಗೆ ಬೇಡವೆ...!?



> “ ನಿರಂತರ ಹೋರಾಟದಲ್ಲೇ ಬದುಕಿಬಿಡುವ ಅವರು ಇವರು, ನಾವು ನೀವೂ ಎಲ್ಲರಿಗೂ ಇವತ್ತು ಅಗತ್ಯವಾಗಿ ಬೇಕಾದ ಒಂದೇ ಒಂದು ಮೂಲದ್ರವ್ಯವೆಂದರೆ 'ಆತ್ಮತೃಪ್ತಿ'. ಸಂತೃಪ್ತಿಯಿಲ್ಲದಿದ್ದರೂ ಪರ್ವಾಗಿಲ್ಲ, ಕನಿಷ್ಠ ಪಕ್ಷ ನಮ್ಮ ನಮ್ಮ ಆತ್ಮಸುಖಕ್ಕಾಗಿ ಇಷ್ಟು ದಿನ ಹೆಣಗಾಡಿದರೂ ತೃಪ್ತಿಯಿಂದ ನಿರ್ಗಮಿಸುವ ನಿರ್ಗಮನ ಪಥ ನಮ್ಮ ನೂರನೇ ಹೆಜ್ಜೆಗಾಗಿ ಕಾದಿರಬೇಕು!. ಎಂದರೆ ನಮಗೆ ಉಳಿದಿರುವ ಮಾರ್ಗ ಅದೊಂದೆ.! ಅದೇ ನಮ್ಮ ವೃತ್ತಿ-ಪ್ರವೃತ್ತಿಗಳಿಂದ ನಮಗೆ ನಿವೃತ್ತಿ ಬೇಕು. ವೃತ್ತಿಯೆಂದ ಕೂಡಲೇ, ಅದೇನು ಸರಕಾರಿ ವೃತ್ತಿಯೇ ಆಗಬೇಕಿಲ್ಲ. ಖಾಸಗಿ ಮತ್ತು ಸರಕಾರಿ ನೌಕರರಿಗೆ ನಿಗದಿತ ವಯಸ್ಸಿನ ನಂತರ ನಿವೃತ್ತಿಯಾಗುತ್ತದೆ. 'ನಿವೃತ್ತಿ'ಯಾದ ಮೇಲೆ ತನ್ನ ಇಳಿಸಂಜೆಯ ಹೊತ್ತಿನಲ್ಲಿ ಅವರು ನೆಮ್ಮದಿಯಾಗಿರಲಿ ಎಂಬುದೇ ಅದರ ಉದ್ದೇಶ. ಇಲ್ಲಿಯವರೆಗೂ ನೋಡಿಕೊಳ್ಳಲಾಗದ ಅವರ ಆರೋಗ್ಯ ನೋಡಿಕೊಳ್ಳಲಿ, ಮಕ್ಕಳು, ಮೊಮ್ಮಕ್ಕಳ ಕೂಡಿ, ಕಾಲ ಕಳೆಯಲಿ, ಒಟ್ಟಾರೆ ತಮ್ಮ ಜೀವಿತಾವಧಿಯ ಪ್ರಖರ ಅರವತ್ತು ವರ್ಷಗಳ ಕಾಲದ ವೇಗದ ಬದುಕಿಗೆ ಬ್ರೇಕ್ ಹಾಕಿ ನಿವೃತ್ತಿಯ ದಿನಗಳಲ್ಲಿ ನಿಶ್ಚಿಂತೆಯಿಂದಿರಲಿ ಎಂಬುದೇ ಈ ನಿವೃತ್ತಿಯ ಆಶಯ.

ನಮ್ಮ ಆರೋಗ್ಯ, ಆಯುಷ್ಯ, ಆರ್ಥಿಕ ಸ್ಥಿತಿ, ಸಾಮಾಜಿಕ ಸ್ಥಾನಮಾನ ಎಲ್ಲವೂ ಸರಿಯಿದ್ದಾಗಲೇ ಆತ್ಮತೃಪ್ತಿಯ ಪುಟಗಳೆಡೆಗೆ ಕಣ್ಣಾಡಿಸಬೇಕು. ಬೇಕಾದುದೆಲ್ಲಾ ದಕ್ಕಿದ ಮೇಲೂ ಮತ್ತೆ ಮತ್ತೆ ಬೆನ್ನತ್ತಿದ ಬೇತಾಳದಂತೆ ಅದರ ಹಿಂದೆಯೇ ಓಡಬಾರದು. ಎಲ್ಲವೂ ಸರಿಯಿದ್ದಾಗಲೆ ಇನ್ನು ಇದು ನನಗೆ ಸಾಕು ಎನ್ನುವ ಸಿರಿತನ ನಮ್ಮನ್ನು ಆವರಿಸಿಕೊಳ್ಳಬೇಕು. ಅದೇ ನಮ್ಮನ್ನು ನಾವೇ ಓದಿಕೊಳ್ಳುವ ನಡೆದು ಬಂದ ದಾರಿ, ಆತ್ಮತೃಪ್ತಿಯ ಸಂಪುಟ.

ನಮಗೆ ಎಲ್ಲ ಆಕರ್ಷಣೆಗಳ ಪರಮ ಕೇಂದ್ರ ಬಿಂದು ಈ ಜೀವನ. ಆಕರ್ಷಣೆಯೇ ಇಲ್ಲದಿದ್ದರೆ ಈ ಬದುಕು ಇಷ್ಟೊಂದು ಸಹನೀಯವಾಗಿ ಇರುತ್ತಿತ್ತೆ ಹೀಗೆ! ಶಾಲೆಗೆ ಹೋಗುವ ಹುಡುಗನಿಗೆ ತಾನು ಓದಿ ಬರೆದು, ದೊಡ್ಡ ವ್ಯಕ್ತಿಯಾದರೆ, ಹೀಗಿರುತ್ತೇನೆ ಹಾಗಿರುತ್ತೇನೆ ಎಂಬ ಆಕರ್ಷಣೆ ಅವನನ್ನು ಆಕರ್ಷಿಸದಿದ್ದರೆ, ಆತ ಮಣಭಾರದ ಪುಸ್ತಕದ ಹೊರೆ ಹೊತ್ತು ಶಾಲೆಯೆಡೆಗೆ ಧಾವಿಸುತ್ತಾನಾದರೂ ಏಕೆ? ಒಬ್ಬ ಉದ್ಯಮಿ ಈ ವರ್ಷದ ಆದಾಯದ ದುಪ್ಪಟ್ಟು ಲಾಭಾಂಶವನ್ನು ಮುಂದಿನ ವರ್ಷ ಕಾಣುತ್ತೇನೆಂಬ ಯೋಜನಾಬದ್ಧ ಕ್ರಿಯಾಯೋಜನೆಗೆ ಆಕರ್ಷಿತನಾಗದೇ ಹೋದರೆ, ಆತ ದುಡಿಮೆಯನ್ನೇಕೆ ನೆಚ್ಚಿಕೊಳ್ಳುತ್ತಾನೆ. ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಎಂಟ್ರಿ ತೆಗೆದುಕೊಂಡ ರಾಜಕಾರಣಿ ಇವತ್ತಲ್ಲ, ನಾಳೆ ತಾನು ಯಾವುದಾದರೊಂದು, ಅಧಿಕಾರದ ಗದ್ದುಗೆಯಲ್ಲಿ ಕೂರುತ್ತೇನೆ ಎಂಬ ಆಕರ್ಷಣೆಗೆ ಒಳಗಾಗದೇ ಹೋದರೆ ಆತನಾದರೂ ಜನಸೇವೆಯ ಆಕರ್ಷಣೆಗೆ ಏಕೆ ಒಳಗಾಗುತ್ತಾನೆ. ಬರಹಗಾರನೊಬ್ಬ ಎಷ್ಟೇ ಸಿದ್ಧಾಂತ ವೇದಾಂತ ಮಾತಾಡಿದರೂ ಜನ ತನ್ನನ್ನು ಒಬ್ಬ ಬರಹಗಾರ ಎಂದು ಗುರ್ತಿಸಲಿ ಎಂಬ ಆಕರ್ಷಣೆಗೆ ಒಳಗಾಗದೆ ಹೋದರೆ, ಆತನ ಅಧ್ಯಯನ, ಅಭ್ಯಾಸ, ಅಕ್ಷರಗಳು, ಕಳೆಕಟ್ಟುವುದಾದರೂ ಹೇಗೆ? ಹೋಟೆಲಿನ ಮಾಣಿ ಮುಂದೊಂದು ದಿನ ತಾನು ಚಿಕ್ಕದೊಂದು ದರ್ಶಿನಿಗಾದರೂ ಮಾಲೀಕನಾಗುತ್ತೇನೆಂಬ ಚಿಕ್ಕದೊಂದು ಆಕರ್ಷಣೆಗೆ ಒಳಗಾಗದೇ ಹೋದರೆ, ಆತ ತನ್ನ ಕೆಲಸದಲ್ಲಿ ತಾಜಾತನ ಕಾಣುವುದಾದರೂ ಹೇಗೆ? ಸಮಾಜದಲ್ಲಿ ಹೀಗೆ ಹೊಟ್ಟೆಪಾಡಿಗೆ ದುಡಿಯುವ, ವರ್ಗ ಒಂದಲ್ಲಾ ಒಂದು ವಿಧದಲ್ಲಿ ತಮ್ಮ ತಮ್ಮ ಅಭಿವೃದ್ಧಿಯ ಆಕರ್ಷಣೆಗೆ ಒಳಗಾಗಿಯೇ ದಿನ ದೂಡುತಿರುತ್ತದೆ.

ಆದರೆ, ದುಡ್ಡು, ಕಾಸು, ಅನುಕೂಲ, ಅಧಿಕಾರಗಳೆಲ್ಲವನ್ನೂ ಕಂಡುಂಡ ಮಂದಿ ಕೂಡ ಸುಮ್ಮನೆ ರಗ್ಗು ಹೊದ್ದು ಮಲಗುತ್ತಾರೆಯೇ? ನಮಗೆ ಎಲ್ಲವೂ ಇದೆ ನಮಗಿನ್ಯಾಕೆ ಶ್ರಮ, ದುಡಿಮೆ, ಎಂದು ಯಾರು ತಾನೆ ಕೈಕಟ್ಟಿ ಕೂರುತ್ತಾರೆ ಹೇಳಿ? ಪ್ರತಿಯೊಬ್ಬರ ಕಲ್ಪನೆಯೂ ಅವರನ್ನು ತಮ್ಮ ತಮ್ಮ ಬದುಕಿನ 'ಹೀರೋ' ಆಗಿಸಿಕೊಳ್ಳಲಿಕ್ಕಾಗಿಯೇ ಹೆಣಗುವ ನಿರಂತರವಾಗಿ ದುಡಿಮೆಯೆಂಬ ಹಳಿಯ ಮೇಲೆ ಪಯಣ ಕೇಳುತ್ತಿರುತ್ತದೆ. ಹಾಗೆ ಆಕರ್ಷಣೆಯ ಹುಚ್ಚು ವೇಗದಲ್ಲಿ ಕೆಲವರು ಅಪಘಾತಕ್ಕೊಳಗಾಗುತ್ತಾರೆ. ವೇಗದ ಓಟಕ್ಕೆ ಬ್ರೇಕ್ ಹಾಕುವ ಅಪಾಯವನ್ನೂ, ಅಡೆತಡೆಗಳ ಒತ್ತಡವನ್ನೂ ದಾಟಿ ಕೆಲವರು ತಮ್ಮ ಪ್ರಯಾಣವನ್ನು ಮುನ್ನಡೆಸುತ್ತಾರೆ. ಆಗ ಸಿಕ್ಕುತ್ತಾರೆ ನೋಡಿ ಅವರೊಳಗೊಬ್ಬ ಸಕ್ಸಸರ್, ಅವನೇ ಯಶಸ್ಸಿನ ಮೆಟ್ಟಿಲೇರಿ ಬೀಗುವವನು. ನೆಲಕ್ಕೆ ಬಿದ್ದವನು ಮೇಲೆದ್ದು ಓಡುವ ಹೊತ್ತಿಗೆ, ಇವರು ಗುರಿಮುಟ್ಟಿರುತ್ತಾರೆ. 'ಏಳಿ ಎದ್ದೇಳಿ ಗುರಿ ಮುಟ್ಟುವವರೆಗೂ ನಿಲ್ಲದಿರಿ' ಎಂದು ಸ್ವಾಮಿ ವಿವೇಕಾನಂದರು ಹೇಳಿದ ಮಾತು ಸಾರ್ವತ್ರಿಕ ಮತ್ತು ಎಲ್ಲರಿಗೂ ಅನ್ವಯಿಕ. ಯಾಕೆಂದರೆ ಯಶಸ್ಸಿನ ಮೊದಲ ಹೆಜ್ಜೆ ಕೂಡ ಶುರುವಾಗುವುದು ಮೊದಲ ಹೆಜ್ಜೆಯಿಂದ, ಅಂದರೆ ಅದರ ಸಂಖ್ಯೆ ಶುರುವಾಗುವುದು ಒಂದರಿಂದಲೇ! ಅದು ಹತ್ತು ತಲುಪಿ ಗುರಿಮುಟ್ಟಿದ ಮೇಲೆ ಮುಂದೇನು? ಎಂಬ ಪ್ರಶ್ನೆ ಕಾಡುತ್ತದೆ. ನಾವು ಹೀಗೆ ಯೋಚಿಸಲಿಕ್ಕೆ ಆ ದಿನಗಳು ನಮಗೆ ಬರಲೇ ಇಲ್ಲ ಅಲ್ಲವೇ? ಕಾರಣ ಇಷ್ಟೇ, ನಾವು ಶುರು ಹಚ್ಚಿಕೊಂಡ ನಮ್ಮ ಬದುಕಿನ ಯಶೋಗಾಥೆಯ ನಿರಂತರ ಪ್ರಯಾಣ ನಮಗಿನ್ನೂ ಮುಗಿದೇ ಇಲ್ಲ. ನಮಗಿನ್ನು ಅದೇ ಹೋರಾಟ, ನಿತ್ಯ ಪರದಾಟ.

ದುಡ್ಡು ಕಾಸು, ಅಡ್ಜೆಸ್ಟ್‌ಮೆಂಟು, ಹೀಗೆ ಸಾಯುವ ಕಡೇ ದಿನದವರೆಗೂ ಹೆಣಗಿ ಹೆಣಗಿ ಹೈರಾಣಾಗಿ ಹೋಗುತ್ತೇವೆ. ಈ ಜೀವ–ಜೀವನದ ರೇಜಿಗೆಗಳಿಂದ ತಲೆತಪ್ಪಿಸಿಕೊಳ್ಳಲು ಒಂದಲ್ಲಾ ಒಂದು ರೀತಿಯ ಹೋರಾಟದ ಬದುಕನ್ನು ಸವೆಸುತ್ತಲೇ ಕಾಲ ದೂಡುವ ನಮ್ಮಂಥ ಸಾಮಾನ್ಯಜೀವಗಳ ಕಥೆಯಿದು. ಆದರೆ ನಮ್ಮ ನಡುವೆಯೇ ಮತ್ತೊಂದು ವರ್ಗವಿದೆ. ಅವರ ಕೈಯ್ಯಲ್ಲಿ ದುಡ್ಡಿದೆ, ಅಧಿಕಾರವಿದೆ, ಆಸ್ತಿಯಿದೆ, ಅಂತಸ್ತಿದೆ, ಆಳು ಕಾಳುಗಳಿದ್ದಾರೆ, ಬೇಡವೆಂದರೂ ಒಲಿದು ಬರುವ ಸುಖದ ಸುಪ್ಪತ್ತಿಗೆಯಿದೆ, ಬೆಡಗಿನ ಸಿರಿಯಿದೆ, ಸಾಕೆನ್ನುವಷ್ಟು ಭೂಮಿಯಿದೆ, ಕಾಣಿಯಿದೆ, ಕಣ್ಣ ಆಣತಿಯಲ್ಲೇ ಜಗವ ಕುಣಿಸುವ ತಾಕತ್ತಿದೆ. ಖಂಡಿತವಾಗಿ ಇಷ್ಟೆಲ್ಲಾ ಇದ್ದರೂ ಕೂಡ ಅವರಿಗೆ ನೆಮ್ಮದಿಯ ನಿದ್ದೆಯಿಲ್ಲ! ತೃಪ್ತಿಯಿಂದ ಅವರು ತೃಪ್ತರಾಗಿಲ್ಲ.! ಸಾಮಾನ್ಯರಲ್ಲಿ ಸಾಮಾನ್ಯರಾದ ನಾವು ಅನ್ನಬಟ್ಟೆ, ವಸತಿ, ಖರ್ಚು–ವೆಚ್ಚಗಳಿಗಾಗಿ ಹೋರಾಡಿದರೆ, ಯಶಸ್ಸಿನ ಮೆಟ್ಟಿಲೇರಿದ ಆ ಇನ್ನೊಂದು ವರ್ಗ, ಗಳಿಸಿದ್ದೆಲ್ಲವನ್ನೂ ತಾವು ಬದುಕಿರುವವರೆಗೂ ಉಳಿಸಿಕೊಳ್ಳಲು ಹೋರಾಡುತ್ತಿರುತ್ತಾರೆ.

ಅಂದರೆ ನಿರಂತರ ಹೋರಾಟದಲ್ಲೇ ಬದುಕಿಬಿಡುವ ಅವರು ಇವರು, ನಾವು ನೀವೂ ಎಲ್ಲರಿಗೂ ಇವತ್ತು ಅಗತ್ಯವಾಗಿ ಬೇಕಾದ ಒಂದೇ ಒಂದು ಮೂಲದ್ರವ್ಯವೆಂದರೆ 'ಆತ್ಮತೃಪ್ತಿ'. ಸಂತೃಪ್ತಿಯಿಲ್ಲದಿದ್ದರೂ ಪರ್ವಾಗಿಲ್ಲ, ಕನಿಷ್ಠ ಪಕ್ಷ ನಮ್ಮ ನಮ್ಮ ಆತ್ಮಸುಖಕ್ಕಾಗಿ ಇಷ್ಟು ದಿನ ಹೆಣಗಾಡಿದರೂ ತೃಪ್ತಿಯಿಂದ ನಿರ್ಗಮಿಸುವ ನಿರ್ಗಮನ ಪಥ ನಮ್ಮ ನೂರನೇ ಹೆಜ್ಜೆಗಾಗಿ ಕಾದಿರಬೇಕು!. ಎಂದರೆ ನಮಗೆ ಉಳಿದಿರುವ ಮಾರ್ಗ ಅದೊಂದೆ.! ಅದೇ ನಮ್ಮ ವೃತ್ತಿ–ಪ್ರವೃತ್ತಿಗಳಿಂದ ನಮಗೆ ನಿವೃತ್ತಿ ಬೇಕು.

ವೃತ್ತಿಯೆಂದ ಕೂಡಲೇ, ಅದೇನು ಸರಕಾರಿ ವೃತ್ತಿಯೇ ಆಗಬೇಕಿಲ್ಲ. ಖಾಸಗಿ ಮತ್ತು ಸರಕಾರಿ ನೌಕರರಿಗೆ ನಿಗದಿತ ವಯಸ್ಸಿನ ನಂತರ ನಿವೃತ್ತಿಯಾಗುತ್ತದೆ. 'ನಿವೃತ್ತಿ'ಯಾದ ಮೇಲೆ ತನ್ನ ಇಳಿಸಂಜೆಯ ಹೊತ್ತಿನಲ್ಲಿ ಅವರು ನೆಮ್ಮದಿಯಾಗಿರಲಿ ಎಂಬುದೇ ಅದರ ಉದ್ದೇಶ. ಇಲ್ಲಿಯವರೆಗೂ ನೋಡಿಕೊಳ್ಳಲಾಗದ ಅವರ ಆರೋಗ್ಯ ನೋಡಿಕೊಳ್ಳಲಿ, ಮಕ್ಕಳು, ಮೊಮ್ಮಕ್ಕಳ ಕೂಡಿ, ಕಾಲ ಕಳೆಯಲಿ, ಒಟ್ಟಾರೆ ತಮ್ಮ ಜೀವಿತಾವಧಿಯ ಪ್ರಖರ ಅರವತ್ತು ವರ್ಷಗಳ ಕಾಲದ ವೇಗದ ಬದುಕಿಗೆ ಬ್ರೇಕ್ ಹಾಕಿ ನಿವೃತ್ತಿಯ ದಿನಗಳಲ್ಲಿ ನಿಶ್ಚಿಂತೆಯಿಂದಿರಲಿ ಎಂಬುದೇ ಈ ನಿವೃತ್ತಿಯ ಆಶಯ. ಹಾಗೆಯೇ ಪ್ರವೃತ್ತಿಯಲ್ಲಿ ಸದಾ ಬಿಜಿಯಾಗಿರುವ ಕಲೆ, ಕಲಾವಿದ ಕ್ರೀಡೆ–ಕ್ರೀಡಾಪಟು, ಉದ್ಯಮಿ, ವ್ಯಾಪಾರಿ ರಾಜಕಾರಣಿ ಹೀಗೆ ನೌಕರಿಯ ವಲಯದಿಂದ ಆಚೆಯಿರುವವರು ಕೂಡ ತಮ್ಮ 'ಆತ್ಮತೃಪ್ತಿ'ಗಾಗಿ 'ನಿವೃತ್ತಿ'ಯನ್ನು ಆಶ್ರಯಿಸಲೇಬೇಕು. ಅದು ಸ್ವಯಂ ನಿವೃತ್ತಿಯಾ! ವಯೋ ನಿವೃತ್ತಿಯಾ? ಎಂದರೆ ಖಂಡಿತವಾಗಿಯೂ ಅದು 'ವಯೋ ನಿವೃತ್ತಿ'.

ಕಾರಣ ಇಷ್ಟೇ. ಸ್ವಯಂ ನಿವೃತ್ತಿಯಾದವರ ಉದ್ದೇಶ, ಪರಿವೇಷಗಳು ಬೇರೆಯೇ ಇರುತ್ತವೆ. ಅವರ ಗೊತ್ತುಗುರಿಗಳು ಮತ್ತಿನ್ನೇನನ್ನೋ ಸಾಧಿಸಲು ಹವಣಿಸುತ್ತಿರುತ್ತವೆ. ಅದನ್ನು ಸಾರ್ವತ್ರಿಕ ಸ್ವೀಕೃತಿ ಎನ್ನಲಾಗುವುದಿಲ್ಲ. ಆದರೆ ವಯೋ ನಿವೃತ್ತಿ ಹಾಗಲ್ಲ. ಅದು ದೇಹ, ಮನಸ್ಸುಗಳಿಗೆ ತಮ್ಮ ಅರವತ್ತು ವರುಷಗಳ ಮಣಭಾರದ ಆಯಾಸವನ್ನು ಕೆಳಗಿಳಿಸುವ ತವಕ. ವಿಶ್ರಾಂತ ಜೀವನದ ನಿರ್ಲಿಪ್ತ ಸ್ಥಿತಿ. ಹೋರಾಟದ ಜೀವನದಲ್ಲಿ ಶಸ್ತ್ರಾಸ್ತ್ರಗಳನ್ನು ಕಳಚಿಟ್ಟು ನಿರ್ಲಿಪ್ತ ಆನಂದಕ್ಕೆ ನಮ್ಮನ್ನೇ ಒಡ್ಡಿಕೊಳ್ಳುವ ಪುಳಕ. ಒಟ್ಟಾರೆ 'ಅಂತರ್ಯದಲ್ಲಿ ಆತ್ಮತೃಪ್ತಿ'ಯ ಪುಟಗಳನ್ನು ತೆರೆದು 'ನಮಗಿನ್ನು ಸಾಕು' ನಮಗೆ ಇನ್ನೇನು ಬೇಕು! ಎಂದು ನೆಮ್ಮದಿಯ ನೇಪಥ್ಯದಲ್ಲಿ ಷರಾ ಬರೆದುಕೊಳ್ಳುವ ಮಧುರ ಕ್ಷಣದ ಹೆಸರು 'ವಯೋನಿವೃತ್ತಿ'. ಆದರೆ ಬದುಕು ಎಲ್ಲಿಗೆ ಬಂದು ನಿಂತಿದೆ ನೋಡಿ! ಸ್ವಯಂ ನಿವೃತ್ತಿಯಾಗಿ ಆತ್ಮತೃಪ್ತಿ'ಯ ದಿನಗಳು ಕದ ತೆರೆದು ಕೈ ಬೀಸಿ ಕರೆಯುತ್ತಿದ್ದರೂ ಬಹಳಷ್ಟು ಮಂದಿಗೆ ಹೋಗುವ ಮನಸ್ಸಿಲ್ಲ. ನಿವೃತ್ತಿಯಾದ ಮೇಲೂ ಕೆಲವರಿಗೆ ದುಡಿಯುವ ತವಕ. ಕೆಲವರಿಗದು ಅನಿವಾರ್ಯ.

ಆ ಕಾರಣಕ್ಕೇ ಅವರು ಮತ್ತೊಮ್ಮೆ ಹೋರಾಟದ ಅಖಾಡಕ್ಕಿಳಿಯುತ್ತಾರೆ. ಅವರ ತಾಪತ್ರಯಗಳ ಅಯೋಮಯ ಆಯ–ವ್ಯಯಗಳ ಅಂದಾಜು ವೆಚ್ಚ ಅರವತ್ತರ ನಂತರದಲ್ಲೂ ಅವರಿಂದ ದುಡಿಸುತ್ತದೆ. ಅಂಥವರು ದುಡಿದೂ ದುಡಿದೂ ಅಳಿದು ಹೋಗುತ್ತಾರೆ. ಅದು ಬಿಡಿ! ಆದರೆ ಸಾರಸರ್ವಸ್ವವೂ ಕೈವಶವಾದವರು, ನಿವೃತ್ತಿಯ ನಂತರವೂ ದುಡಿಮೆಯ ಅಖಾಡಕ್ಕಿಳಿಯುವುದನ್ನು ನೋಡಿದರೆ! ಅಸಂಖ್ಯಾತರ ಎದೆಯಲ್ಲಿ 'ಆತ್ಮತೃಪ್ತಿ' ಎಂಬುದು ಮರಳುಗಾಡಿನ ಮರೀಚಿಕೆಯಂತೆ ಅಲ್ಲವೇ? ಇದು ಕೇವಲ ನೌಕರರಿಗೆ ಮಾತ್ರವಲ್ಲ, ಇದು ಪ್ರವೃತ್ತಿಗೂ ಅನ್ವಯಿಸುತ್ತದೆ. ಹೆಜ್ಜೆ ಎತ್ತಿಡಲಾಗದೆ ಮಂಡಿ ನೋವಿನಿಂದ ಬಳಲುವ ನೃತ್ಯಪಟುಗಳು ಮತ್ತೆ ಜನರ ಚಪ್ಪಾಳೆಗಾಗಿ ಕಾಲಿಗೆ ಗೆಜ್ಜೆ ಕಟ್ಟುತ್ತಾರೆ. ಪಿ.ಬಿ. ಶ್ರೀನಿವಾಸರಂಥ ಅದ್ಭುತ ಗಾಯಕ ಸಹ ದಶಕಗಳ ಕಾಲ ಕರ್ನಾಟಕದ ಮನೆ ಮನಗಳನ್ನು ಸೂರೆಗೊಂಡರೂ, ಅಷ್ಟೊಂದು ಜನಪ್ರೀತಿಯನ್ನು ಎಂಜಾಯ್ ಮಾಡಿದ್ದರೂ, ಇಳಿವಯಸ್ಸಿನಲ್ಲೂ ಮೈಕು ಬಿಡದೆ ಹಾಡುತ್ತಿದ್ದರು.

ಆದರೆ ಅವರ ಗಂಟಲು ಮಾತ್ರ ವಯೋಸಹಜ ನಿವೃತ್ತಿ ಘೋಷಿಸಿಕೊಂಡಿತ್ತು. ಇಳಿವಯಸ್ಸಿನಲ್ಲಿ ಅವರು ಹಾಡುತ್ತಿದ್ದರೇನೋ ಸರಿ! ಆದರೆ ಆ ಲಯಮಾಧುರ್ಯದಲ್ಲಿ, ನಮ್ಮ ಹಳೆಯ ಪಿ.ಬಿ. ಶ್ರೀನಿವಾಸ್ ಕಾಣುತ್ತಿರಲಿಲ್ಲ. ಆದರೆ ಅದು ಅವರಿಗೆ ಗೊತ್ತಾಗುತ್ತಿರಲಿಲ್ಲ. ಆದರೆ ಜನರು ಮಾತ್ರ ಅವರ ಮೇಲಿನ ಪ್ರೀತಿ ಅಭಿಮಾನದಿಂದ ಪಿ.ಬಿ.ಯವರ ಹಾಡನ್ನು ಕೇಳಿಸಿಕೊಳ್ಳುತ್ತಿದ್ದರು. ಅದೇ ಅವರ ಜನ ಪ್ರೀತಿ. ಆದರೆ ಗಂಟಲು ಮಾತ್ರ ಅವರ ಆ ಇಳೀ ವಯಸ್ಸಿನಲ್ಲಿ ವಯೋನಿವೃತ್ತಿ ಘೋಷಿಸಿಕೊಂಡಿತ್ತು.

ಲಂಕೇಶ್‌ರಂಥ ಪತ್ರಿಕಾ ಸಂಪಾದಕರು ತಾವು ಸಾಯುವ ಒಂದೆರಡು ವಾರದ ಹಿಂದೆ ಟೀಕೆ–ಟಿಪ್ಪಣಿ ಬರೆದು ಮುಗಿಸಿ, ಅವರಿಗೇ ಅದು ಹಿಡಿಸದಂತಾಗಿ ಹರಿದು ಬಿಸಾಕಿದರಂತೆ. ಹೀಗೆ ಬರೆಯುವುದಾದರೆ ಇನ್ನು ಬರೆಯಲೇಬಾರದು, ನಿಲ್ಲಿಸಿಬಿಡಬೇಕೆಂದು ಗೊಣಗಿಕೊಂಡು ಸುಮ್ಮನಾದರಂತೆ. ತನ್ನ ಆತ್ಮತೃಪ್ತಿಗಾಗಿ ಅವಶ್ಯಕವಾದ ವಯೋನಿವೃತ್ತಿಯ ಮಾಯಾಂಗನೆ ತೋರಿಸುತ್ತಿರುವ ಬಣ್ಣದ ವೇಷದ ನೆರಳಿನಾಟಕ್ಕೆ ಅವರು ಒಳಗಾಗಿದ್ದರು. ಎಷ್ಟೋ ಜನ ರಾಜಕಾರಣದಲ್ಲಿ ಕೆಲವರು ಸೋತ ನಂತರವೂ ಮತ್ತೊಮ್ಮೆ ಗೆಲ್ಲುವ ತವಕ, ಬೇಕೋ ಬೇಡವೋ ಬೆಳಗ್ಗಿನಿಂದಲೂ ಸಂಜೆಯ ತನಕ ವಿಶ್ರಾಂತಿಯಿಲ್ಲದೆ ಜನಸಂಪರ್ಕದಲ್ಲಿರುವ ಹುಮ್ಮಸ್ಸು, ಇದೆಲ್ಲವನ್ನೂ ಉಳಿಸಿಕೊಳ್ಳಲು ಹೋಗಿ ಆತ್ಮತೃಪ್ತಿಯ ಪುಟಗಳಿಗೆ ತಾವೇ ಪೂರ್ಣ ವಿರಾಮ ಇಟ್ಟುಕೊಂಡುಬಿಡುತ್ತಾರೆ. ಹೀಗೆ ತಾವು ಮತ್ತು ತಮ್ಮ ಐಡೆಂಟಿಟಿ ಅಸ್ತಿತ್ವದಲ್ಲಿರಬೇಕು ಎಂಬ ಲೈಮ್‌ಲೈಟ್ ಥಿಯರಿಯಿಟ್ಟುಕೊಂಡು ಮಾಡುವ ಈ ಸಂಕಲ್ಪಗಳು ಕಡೇ ಕ್ಷಣದವರೆಗೂ ವಿಶ್ರಾಂತಿಯ ಆತ್ಮತೃಪ್ತಿ ಕೈಗೂಡುವುದಿಲ್ಲ. ಆದರೆ ಕಾಲ ಅವರ ವಯೋನಿವೃತ್ತಿಯ ದಿನಾಂಕವನ್ನು ಘೋಷಿಸಿಯೇ ತೀರುತ್ತದೆ. ಅದನ್ನು ಓವರ್ ಟೇಕ್ ಮಾಡಿ ಓಡುವ ಹಲವರಿಗೆ again ಆತ್ಮತೃಪ್ತಿಯೆಂಬ ನೆಮ್ಮದಿಯ ನಿರಾಳ ಕನಸಿನ ಮಾತು.

ದಶಕಗಳ ಕಾಲ ಇಡೀ ಕನ್ನಡ ಚಿತ್ರರಂಗದ ಪರದೆಯ ಮೇಲೆ ತಮ್ಮ ಗೀತರಚನೆಯ ಕೈಚಳಕ ತೋರಿಸಿದ ಚಿ.ಉದಯಶಂಕರ್, ನಾದಬ್ರಹ್ಮ ಹಂಸಲೇಖ ಬಂದ ಮೇಲೆ ನಿವೃತ್ತಿಯ ಆತ್ಮತೃಪ್ತಿಯೆಡೆಗೆ ಹೊರಟುಬಿಟ್ಟರು. ಜಿದ್ದಿಗೆ, ಬಿದ್ದು ಹಠಕ್ಕೆ ಬಿದ್ದು, ತಮ್ಮ ಪೆನ್ನಿಗೆ ಬಲವಂತದ ಮಾಘಸ್ನಾನ ಮಾಡಿಸಲಿಲ್ಲ. ದುಡಿವ ವಯಸ್ಸಿನಲ್ಲಿ ಬರೆದ ಹಳೆಯ ಹಾಡುಗಳಿಂದ ಇವತ್ತಿಗೂ ಅವರು ಜನರ ಮನಸ್ಸಿನಲ್ಲಿ ಜೀವಂತವಾಗಿದ್ದಾರೆ. ಹಾಗೆ ಉಳಿಯುವಂತೆ ಅವರು ಮತ್ತು ಅವರ ಹಾಡುಗಳು ಕನ್ನಡ ಚಿತ್ರರಸಿಕರ ಮನಸ್ಸನ್ನು ಆಳುತ್ತಿವೆ. ಇಂದಿಗೂ ಚಿ.ಉದಯಶಂಕರರ ಹಾಡುಗಳು ಎಂದೂ ಮರೆಯದ ಹಾಡಾಗಿ ನಮ್ಮನ್ನು ನಮ್ಮದೇ ಜೀವಮಾನದ ನಮ್ಮ ಜಮಾನವನ್ನು ನೆನಪಿಸುತ್ತವೆ. ಕಾರಣ ಇಷ್ಟೇ, ಹೊಸಬರಿಗೆ ದಾರಿಬಿಟ್ಟು ತಮ್ಮ 'ಆತ್ಮತೃಪ್ತಿ'ಯ ಬಾಲೋದ್ಯಾನದಲ್ಲಿ ವಿಹರಿಸಲು ಒಪ್ಪಿದ ಅವರವರ ಮನಸ್ಸು ಮತ್ತು ಪ್ರವೃತ್ತಿ ಇದಕ್ಕೆ ಕಾರಣ. ಹಾಗಾಗಿಯೇ ಇಂದಿಗೂ ಚಿ. ಉದಯಶಂಕರ್ ಹಾಡುಗಳು ಜೀವಂತ. ಅದೇ ರೀತಿ ಹಂಸಲೇಖ ಕೂಡ ಅದೇ ಹಾದಿ ಹಿಡಿದು ಬಹಳ ದಿನಗಳಾಗಿವೆ. ಆತ್ಮತೃಪ್ತಿಯ ಪುಟಗಳಲ್ಲಿ 'ಸರಿಗಮಪ' ನುಡಿಸುತ್ತಿರುವ ಹಂಸಲೇಖ, ಮಕ್ಕಳ ಮನಸ್ಸಿನ ಶಾರೀರ ತಿದ್ದುವಲ್ಲಿ ಸಂತೃಪ್ತಿ ಕಾಣುತ್ತಿದ್ದಾರೆ.

ಹೀಗೆ ಯಾವುದೇ ವೃತ್ತಿ ಇರಲಿ! ಪ್ರವೃತ್ತಿ ಏನೇ ಇರಲಿ, ಹೊಸತರಲ್ಲಿ ಗೋಣಿ ಎತ್ತಿ ಒಗೆದಾಗಿನ ಉತ್ಸಾಹ ಹುಮ್ಮಸ್ಸು ಸದಾ ಇರುವುದಿಲ್ಲ. ದಣಿದ ದೇಹ, ದುಡಿದ ಮನಸ್ಸು ಎರಡೂ ಕೂಡ ಯಾವುದೋ ಒಂದು ಕಾಲಕ್ಕೆ ವಿಶ್ರಾಂತಿ ಬೇಡುತ್ತವೆ. ಆ ಕಾಲಘಟ್ಟಕ್ಕೆ ತಮ್ಮ ಆತ್ಮತೃಪ್ತಿಯ ಪುಟಗಳೆಡೆಗೆ ನಿಗಾ ವಹಿಸಲು ಮುಲಾಜಿಲ್ಲದೆ ಹೊರಟು ಬಿಡಬೇಕು. ಮನೋಪ್ರವೃತ್ತಿಗೊಂದು ವಯೋನಿವೃತ್ತಿ ಘೋಷಿಸಿಕೊಂಡರೆ, ವರಕವಿ ಡಾ. ದ.ರಾ.ಬೇಂದ್ರೆಯವರು ಹೇಳಿರುವ ಹಾಗೆ,

**"ನಮ್ಮಿಂದ ಹರಿದು ಚಿಂತಿ
ಜುಮ್ಮೆನ್ನು ತಾವ ತಂತಿ"**

ಅಂದರೆ ನರನಾಡಿಗಳೆಂಬ ಈ ಜೀವ ವೀಣೆಯ ತಂತಿ, ವಿಶ್ರಾಂತಿಯಲ್ಲಿ ವಿರಮಿಸಿದರೆ, ಚಿಂತಿ ಹರಿದು ಬೆಳಕು ಮರಳಿ, ಮತ್ತೆ ಹೊಸಹಾಡ ಕಟ್ಟತೈತಿ ಮನಸು. ಅದೇ ಬದುಕಿನ ಇಳಿಸಂಜೆಯ ಸೊಗಸು, ಅದು ಬಿಟ್ಟು ಎಲ್ಲ ದಕ್ಕಿದ ಮೇಲೂ ಆಕರ್ಷಣೆಯನ್ನು ಅರ್ಥಮಾಡಿಕೊಳ್ಳದಿದ್ದರೆ ನಾವು ಆತ್ಮತೃಪ್ತಿಯಿಂದ ಹೊರದಬ್ಬಿಸಿಕೊಂಡು ಅತೃಪ್ತಿ ನಮ್ಮನ್ನು ಉಡಾಯಿಸುತ್ತಿರುತ್ತದೆ.

ಯಾವುದು ಎಷ್ಟೇ ಇರಲಿ 'ಸಾಕು' ಎನ್ನುವ ಮನಸ್ಥಿತಿಯೇ 'ಬುದ್ಧತ್ವ'. ನಾವು ನಡೆದು ಬಂದ ದಾರಿಯ ಮೈಲಿಗಲ್ಲುಗಳನ್ನು ನಾವಾದರೂ ನೆನೆಸಿಕೊಂಡು ಖುಷಿಪಡಲಿಕ್ಕೆ, ಸಮಾನ ಮನಸ್ಕಗೆಳೆಯರ ಜತೆ ಕಳೆದ ಬದುಕಿನ ಸ್ವಾರಸ್ಯವನ್ನು ಹಂಚಿಕೊಂಡು ಆನಂದಪಡಲಿಕ್ಕೆ, ವಾಕಿಂಗ್ ಪಥದಲ್ಲಿ ನಕ್ಕ ಗುಲಾಬಿಯನ್ನು ಮೈಮುಟ್ಟಿ ಮಾತಾಡಿಸಲಿಕ್ಕೆ ಆಡಿದ ಲಗೋರಿಯ ನೆನಪಿಗೆ, ಕಾಡಿದ ನವಿಲುಗರಿಯ ರೋಮಾಂಚನಕ್ಕೆ. ಮೊಮ್ಮಗುವಿನ ಹಲ್ಲಿಲ್ಲದ ಬಾಯಿಗೆ ಬೆರಳಿಟ್ಟು ಕಿತ್ತುಕೊಳ್ಳಲು ಮನಸ್ಸಿಲ್ಲದೆ ಮೋಜು ಮಾಡೋಕೆ ನಿವೃತ್ತಿಯೆಂಬ 'ಆತ್ಮತೃಪ್ತಿ' ಬೇಡವೇ? ಮತ್ತೆ ಮತ್ತೆ ಅದೇ ರಾಗ ಅದೇ ಹಾಡಿನ ಹಾಗೆ ದುಡಿವ ಧಾವಂತದ ತೀರದ ಪಯಣವನ್ನು ಮುಂದುವರಿಸಿ, ಬೇಕು ಬೇಕೆನ್ನುವ ಚಟಕ್ಕೆ ಬಿದ್ದರೆ, ಅದು ವೃತ್ತಿಯೇ ಇರಲಿ, ಪ್ರವೃತ್ತಿಯೇ ಇರಲಿ, ಅದು ಇಳಿವಯಸ್ಸಿನಲ್ಲೂ ಕತ್ತಿಯಂಚಿನ ದಾರಿ, ಆಗಲೂ ಕೂಡ ಚಂಚಲ ಮನಸ್ಸಿನ ವಾಂಛಲ್ಯವನ್ನು ನೀಗಿಕೊಂಡಂತೆ ಆಗುವುದಿಲ್ಲ.

ಆತ್ಮ ಎಂದರೆ 'ಆಕಾಶ'. ಅಲ್ಲಿಗೆ ನಮ್ಮೆಲ್ಲಾ ಅಭಿವೃದ್ಧಿ ಸಾಧನೆ, ಸಿದ್ಧಿ ಕಷ್ಟ–ನಷ್ಟಗಳೆಲ್ಲಾ ನಮ್ಮ ಮನೋ ರಥದ ಮೇಲೆ ಚೆದುರಿ ಹೋದ ಮೋಡಗಳಂತೆ ಪರಸ್ಪರ ಬಂದು ಹೋಗುತ್ತವೆಯೇ ವಿನಃ ಶಾಶ್ವತವಾಗಿ ಅವೇ ನಿಂತುಬಿಡುವುದಿಲ್ಲ. ಆತ್ಮ ಎಂಬ ಆಕಾಶ ಮಾತ್ರ ಜೀವ–ಜೀವನವಿರುವತನಕ ಅಚಲ. ಅಲ್ಲಿ ಆತ್ಮತೃಪ್ತಿಯ ಬೇರುಗಳಿವೆ. ಹುಡುಕಾಟದ ವಿನೋದಕ್ಕೆ ನಾವು ಮನಸ್ಸು ಮಾಡಬೇಕಷ್ಟೆ. ಎಲ್ಲವನ್ನೂ ನೋಡಿದ ಮೇಲಾದರೂ ಎಲ್ಲವನ್ನೂ ಗ್ರಹಿಸಿದ ಮೇಲಾದರೂ ಎಲ್ಲವನ್ನೂ ಅನುಭವಿಸಿದ ಮೇಲಾದರೂ 'ಸಾಕೆಂಬುವ ಸಿರಿತನ' ನಮ್ಮನ್ನು ತಾಕಬೇಕು, ಆತ್ಮತೃಪ್ತಿಯ ಒಳಪುಟ ತೆರೆಯಬೇಕು. ಅದಕ್ಕಾಗಿ ವಿಶ್ರಾಂತಿ, ಅದಕ್ಕಾಗಿ ವಯೋ ನಿವೃತ್ತಿ ಬೇಡೆನ್ನುತ್ತೀರ? ಸೃಷ್ಟಿಯೇ ಸೃಷ್ಟಿಸಿದ ಸಹಜ ವಯೋ ನಿವೃತ್ತಿ ಸಾದೃಶ್ಯ ಮಾರ್ಗವಲ್ಲವೇ?

ನವ್ಯಕವಿ ಎಂ. ಗೋಪಾಲಕೃಷ್ಣ ಅಡಿಗರ ಕವಿತೆಯದೊಂದು ಸಾಲಿದೆ. ನಿವೃತ್ತಿಯ ನಂತರದಲ್ಲಿ ಅದನ್ನು ಕೇಳಿಸಿಕೊಳ್ಳಬೇಕು ನಾವು. "ಹೊಸ ಜಗವು ರೂಪುಗೊಂಡಿಹುದೀಗ, ಹೊಸಬಾಳು ನಮ್ಮದಿದ; ಹೊಸತೆಲ್ಲ ನಮ್ಮದಿನ್ನು, ನಗೆಯ ಹಾಯಿ ದೋಣಿ, ಉಳಿದುದೆಲ್ಲ ಸಣ್ಣಸಂಗತಿ" ಏನಂತೀರಿ?.

ಕುಂಬಾರ ಅಭಿವೃದ್ಧಿ ನಿಗಮ ಸ್ಥಾಪನೆಗೆ ಸ್ವಾಗತ: 200 ಕೋಟಿ ರೂ. ಅನುದಾನಕ್ಕೆ ಮನವಿ

ಮೈಸೂರು,ಮಾ.27(ಎಂಟಿವೈ)– ರಾಜ್ಯ ಸರ್ಕಾರ ಕುಂಬಾರ ಸಮುದಾಯ ಅಭಿವೃದ್ಧಿ ನಿಗಮ ಸ್ಥಾಪನೆಗೆ ಆದೇಶ ಹೊರಡಿಸಿದ್ದು, ಇದರೊಂದಿಗೆ ಜನಾಂಗದ ಅಭಿವೃದ್ಧಿಗೆ 200 ಕೋಟಿ ರೂ. ಮೀಸಲಿಡುವಂತೆ ರಾಜ್ಯ ಕುಂಬಾರರ ಒಕ್ಕೂಟದ ಕಾರ್ಯಾಧ್ಯಕ್ಷ ಡಾ. ಎಂ.ಪಿ.ವರ್ಷ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಂಬಾರ ಜನಾಂಗ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸಮುದಾಯದ ಬೇಡಿಕೆಯನ್ನು ಮೊದಲ ಬಾರಿಗೆ ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪಿಸಿದ ಹನುಮಂತ ನಿರಾಣಿ, ಸರ್ಕಾರಕ್ಕೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಸಭಾಪತಿ ಬಸವರಾಜ ಹೊರಟ್ಟಿ, ನಿಗಮ ಸ್ಥಾಪನೆಗೆ ನುಡಿದಂತೆ ಸಚಿವ ಕೋಟಾ ಶ್ರೀನಿವಾಸ್ ಪೂಜಾರಿ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ರಾಜ್ಯದಲ್ಲಿ 10 ಲಕ್ಷ ಜನಸಂಖ್ಯೆ ಹೊಂದಿದ್ದರೂ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಎಲ್ಲ ಕ್ಷೇತ್ರಗಳಲ್ಲಿಯೂ ಹಿಂದುಳಿದಿದ್ದು, ಸಾಂವಿಧಾನಿಕವಾಗಿ ದೊರಕಬೇಕಾಗಿದ್ದ ಎಲ್ಲ ಸೌಲಭ್ಯದಿಂದ ವಂಚಿತವಾಗಿತ್ತು. ಹೋರಾಟದ ಫಲವಾಗಿ ರಾಜ್ಯ ಕುಂಬಾರ ಸಮುದಾಯ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿ, ಜನಾಂಗಕ್ಕೆ ಅನುಕೂಲ ಮಾಡಿಕೊಡಲಾಗಿದೆ. ರಾಜ್ಯ ಕುಂಬಾರ ಸಮುದಾಯದ ಅಭಿವೃದ್ಧಿ ನಿಗಮಕ್ಕೆ ಅಗತ್ಯ ಕ್ರಮ ಕೈಗೊಂಡು ಶಾಸನ ರೂಪ ನೀಡಬೇಕು. ಕುಂಬಾರರ ಅಭಿವೃದ್ಧಿಗಾಗಿ ನಿಗಮಕ್ಕೆ 200ಕೋಟಿ ರೂ., ಅನುದಾನ ಒದಗಿಸಬೇಕು. ಜನಪರ ಕಾಳಜಿಯುಳ್ಳವರನ್ನು ನಿಗಮದ ಅಧ್ಯಕ್ಷರು ಹಾಗೂ ಸದಸ್ಯರನ್ನಾಗಿ ನೇಮಕ ಮಾಡಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಚನ್ನಕೇಶವ, ಯದುನಂದ, ಮಹೇಶ್ ಮುಳ್ಳೂರು, ನಾಗರಾಜ್, ಯಶವಂತಕುಮಾರ್ ಇದ್ದರು.

ರಾಹುಲ್‌ಗಾಂಧಿಗೆ ನೋಟಿಸ್

ದೆಹಲಿ: ಲೋಕಸಭೆಯಿಂದ ಅನರ್ಹಗೊಂಡ ನಂತರ ಇದೀಗ ಲೋಕಸಭೆಯ ಹೌಸಿಂಗ್ ಕಮಿಟಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸರ್ಕಾರ ಮಂಜೂರು ಮಾಡಿದ ಬಂಗಲೆಯನ್ನು ಖಾಲಿ ಮಾಡುವಂತೆ ನೋಟಿಸ್ ನೀಡಿದೆ. ಅವರಿಗೆ ದೆಹಲಿ ಲುಟ್ಯೆನ್ಸ್‌ನ 12 ತುಘಲಕ್ ಲೇನ್‌ನಲ್ಲಿರುವ 5 ಬೆಡ್‌ರೂಮ್ ಬಂಗಲೆಯನ್ನು ನೀಡಲಾಗಿತ್ತು. ಏತನ್ಮಧ್ಯೆ, ಅದಾನಿ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರವನ್ನು ತರಾಟೆಗೆ ತೆಗೆದುಕೊಂಡ ಬೆನ್ನಲ್ಲೇ ರಾಹುಲ್ ಗಾಂಧಿಗೆ ಲೋಕಸಭೆಯ ಹೌಸಿಂಗ್ ಕಮಿಟಿಯಿಂದ ಈ ನೋಟಿಸ್ ಬಂದಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ರಂಗಭೂಮಿ ರಾಜಕೀಯ ಚದುರಂಗದಾಟದ ವೇದಿಕೆ ಆಗಬಾರದು; ಸಾಮಾಜಿಕ ಸಮಸ್ಯೆ ಬಿಂಬಿಸುವ ಕಣವಾಗಬೇಕು

ಹಿರಿಯ ರಂಗಕರ್ಮಿ ಬಸವಲಿಂಗಯ್ಯ ಅಭಿಮತ



ಮೈಸೂರು, ಮಾ.27(ಎಸ್‌ಪಿಎನ್)– ರಂಗಭೂಮಿ ರಾಜಕೀಯ ಪಕ್ಷಗಳ ಚದುರಂಗದಾಟದ ವೇದಿಕೆಯಾಗಬಾರದು. ಬದಲಾಗಿ ಸಮಾಜದ ಕನ್ನಡಿಯಾಗಿ, ಅಲ್ಲಿನ ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವ ವೇದಿಕೆಯಾಗಬೇಕು ಎಂದು ಹಿರಿಯ ರಂಗಕರ್ಮಿ ಬಸವಲಿಂಗಯ್ಯ ಅಭಿಪ್ರಾಯಪಟ್ಟರು.

ಮೈಸೂರು ಕಿರು ರಂಗಮಂದಿರದಲ್ಲಿ ಜಿಲ್ಲಾ ಹವ್ಯಾಸಿ ರಂಗಮಂದಿರದಲ್ಲಿ ನಡೆದ ಮೈಸೂರು ರಂಗಹಬ್ಬ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಂಗಭೂಮಿ ವೇದಿಕೆ ರಾಜಕೀಯ, ನಾಟಕೀಯ, ಪಕ್ಷದ ರಾಜಕಾರಣವಾಗಬಾರದು. ಬದಲಾಗಿ ರಂಗಭೂಮಿ ಸಮಾಜ ಕನ್ನಡಿ ಮಾತ್ರವಲ್ಲದೆ, ಸಮಸ್ಯೆಗಳ ಪರಿಹಾರ ಸೂಚಿಸುವ ಸುತ್ತಿಗೆಯಾಗಬೇಕು. ತಪ್ಪಾಗಿದ್ದರೆ ತಿದ್ದುವ ಕೆಲಸವಾಗಬೇಕು ಎಂದು ಹೇಳಿದರು.

ಪ್ರಸ್ತುತ ಆಧುನಿಕ ರಂಗಭೂಮಿಯ ನಾಟಕಗಳು ವಾಸ್ತವ ಶೈಲಿಗೆ ಬಾರದೆ ಹಳೆಯ ಕಾಲದ ಚರಿತ್ರೆಯನ್ನು ಬಿಂಬಿಸುತ್ತಿವೆ. ಯಾವುದೇ ಕಲಾವಿದ ವೇಷ ಹಾಕುತ್ತಾನೆ. ಧ್ವನಿ ಆಗುತ್ತಾನೆ. ಆದರೆ ಸಮಾಜದ ಪಾತ್ರವಾಗುತ್ತಿಲ್ಲ. ನಾಟಕದಲ್ಲಿ ಕಲಾವಿದ ಪಾತ್ರಕ್ಕೆ ಶರಣಾಗಬೇಕು. 'ಪರಕಾಯ ಪ್ರವೇಶ' ಎಂಬ ಪದ ಅವೈಜ್ಞಾನಿಕ ಪದ, ಸುಖ– ದುಃಖಗಳು ರಂಗಭೂಮಿಯಲ್ಲಿ ಭಾವನಾತ್ಮಕವಾಗಿರಬೇಕು. ಜನ ಸಮೂಹದಲ್ಲಿ ದಿನನಿತ್ಯ ಸಂಭವಿಸುವ ಘಟನೆಗಳನ್ನು ರಂಗಭೂಮಿಯಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದು ಯುವ ನಿರ್ದೇಶಕರಿಗೆ ಕಿವಿಮಾತು ಹೇಳಿದರು.

ಇಂದಿನ ಪ್ರಜಾಪ್ರಭುತ್ವದಲ್ಲಿ ಹಿಂಸೆಯೇ ತತ್ವವಾಗಿದ್ದು, ಜನರು ಅಶಾಂತಿಯೆಡೆಗೆ ತಿರುಗಿ, ರಂಗು–ರಂಗಿನ ಆಟಕ್ಕೆ ಬಲಿಯಾಗುತ್ತಿದ್ದಾರೆ. ಸೇವಕರ ಕೈಗಳಿಗೆ ಪರಿಕರಗಳ ಕೊಟ್ಟು ಸರ್ವಧರ್ಮ ಶಾಂತಿಯ ತೋಟವಾಗಿರುವ ಕರ್ನಾಟಕವನ್ನು ಹಾಳು ಮಾಡುತ್ತಿರುವುದಲ್ಲದೆ, ಇತ್ತೀಚೆಗೆ 'ಉರಿ'–'ನಂಜು' ವಿಷ ಬೀಜ ಬಿತ್ತುವ ಕೆಲಸ ಆರಂಭವಾಗಿದೆ. ಅದನ್ನು ಬೇರು ಸಮೇತ ಕಿತ್ತು ಹಾಕಿ, ಆ ಸ್ಥಳದಲ್ಲಿ ಸರ್ವಧರ್ಮಗಳ ಪ್ರೀತಿ ಹಂಚಬೇಕಿದೆ ಎಂದು ತಿಳಿಸಿದರು.

ಹಿರಿಯ ರಂಗಕರ್ಮಿ ಇಂದಿರಾ ನಾಯರ್ ಮಾತನಾಡಿ, ರಂಗಭೂಮಿ ಎಂದರೆ ನನಗೆ ಎಲ್ಲಿಲ್ಲದ ವ್ಯಾಮೋಹ, ಪ್ರೀತಿ. ಯಾವುದೇ ಹವ್ಯಾಸಿ ತಂಡದೊಂದಿಗೆ ಕೊನೆವರೆಗೂ ಇರಬೇಕು. ಈ ರಂಗ ಹಬ್ಬ ಪ್ರತಿ ವರ್ಷ ಭಾಗವಹಿಸುವ ಉದ್ದೇಶವಿದೆ. ಇದಕ್ಕೆ ಮೈಸೂರಿನ ಎಲ್ಲಾ ಹವ್ಯಾಸಿ ತಂಡಗಳನ್ನು ಒಗ್ಗೂಡಿ, 20ರಿಂದ 25 ದಿನಗಳ ಅವಧಿಯಲ್ಲಿ ಹೊಸ ನಾಟಕಗಳ ಪ್ರಯೋಗ ಮಾಡುವ ಅವಕಾಶ ದೊರಕಬೇಕು ಎಂದು ಅಭಿಪ್ರಾಯಪಟ್ಟರು,.

ಇತ್ತೀಚೆಗೆ ಎಲ್ಲಾ ಹವ್ಯಾಸಿ ತಂಡಗಳು ಹಳೆಯ ನಾಟಕಗಳನ್ನು ಪ್ರಯೋಗ ಮಾಡುತ್ತಿವೆ. ಇದು ಸ್ವಲ್ಪ ಕಡಿಮೆ ಮಾಡಬೇಕು. ಹೊಸ ನಾಟಕಗಳಿಗೆ, ನಾಟಕಕಾರರ ಆಲೋಚನೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಇಂದು ರಂಗಭೂಮಿ ಸಿದ್ಧಾಂತಗಳು ಸ್ವಲ್ಪ ಕುಸಿಯುತ್ತಿವೆ. ಇದರ ಬಗ್ಗೆ ನನಗೆ ನೋವಾಗುತ್ತಿದೆ. ಇದಕ್ಕೆ ಕಾರಣ ಹುಡುಕಿ ಪರಿಹಾರ ಕಂಡುಕೊಳ್ಳಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಸೇರಿ ರಂಗಭೂಮಿಗೆ ದುಡಿಯುವುದರ ಮೂಲಕ ರಂಗಭೂಮಿ ಉಳಿಸಿ–ಬೆಳೆಸಬೇಕಾಗಿದೆ ಎಂದು ಅನಿಸಿಕೆ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ಸುರೇಶ್ ಬಾಬು, ಕಾರ್ಯದರ್ಶಿ ಡಾ.ಎಚ್.ಎಂ.ಕುಮಾರಸ್ವಾಮಿ, ಮೈಸೂರು ರಂಗಹಬ್ಬ ಸಂಚಾಲಕ ದೀಪಕ್ ಇದ್ದರು. ವೇದಿಕೆ ಕಾರ್ಯಕ್ರಮ ನಂತರ ಮೈಸೂರು ಮೈಮ್ ತಂಡದ ಅಭಿನಯಿಸುವ, ಬೇಲೂರು ಕೃಷ್ಣಮೂರ್ತಿ ರಚಿಸಿರುವ 'ಬೇಕಾಗಿದ್ದಾರೆ' ನಾಟಕ ಪ್ರೇಕ್ಷಕರ ಮೆಚ್ಚುಗೆಗಳಿಸಿತು.

ಮಹಿಳಾ ಸಾಧಕಿಯರಿಗೆ 'ಭೂಮಿಕಾ ಭಾವೈಕ್ಯ ಮಹಿಳಾ ಸಿರಿ' ಪ್ರಶಸ್ತಿ ಪ್ರದಾನ



ಮೈಸೂರು,ಮಾ.27(ಎಸ್‌ಪಿಎನ್)– ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮೈಸೂರು ಜಗನ್ಮೋಹನ ಅರಮನೆಯಲ್ಲಿ ಸೋಮವಾರ ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆ ವತಿಯಿಂದ ಲಯನ್ಸ್‌ಕ್ಲಬ್ ಆಫ್ ಬೆಂಗಳೂರು, ಸ್ಯಾಂಡಲ್ ವುಡ್ ಸೆಲೆಬ್ರೆಟಿಸ್, ದಿ ಏಟ್ರಿಯಾ ಬೊಟಿಕ್ ಹೋಟೆಲ್, ಶ್ರೀ ತಲಕಾವೇರಿ ಮಹಿಳಾ ಶಿಕ್ಷಣ ಟ್ರಸ್ಟ್ ಹಾಗೂ ಭೂಮಿಕಾ ಭಾವೈಕ್ಯಾ ಬಳಗ ಸಹಕಾರದೊಂದಿಗೆ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಸಾಧಕರಿಗೆ 'ಭೂಮಿಕಾ ಭಾವೈಕ್ಯ ಮಹಿಳಾ ಸಿರಿ' ಪ್ರಶಸ್ತಿಯನ್ನು ಹಿರಿಯ ಕವಯತ್ರಿ ಡಾ.ಲತಾರಾಜಶೇಖರ್ ಪ್ರದಾನ ಮಾಡಿದರು.

ಮೈಸೂರು ಜೆಎಂಎಫ್‌ಸಿ ನ್ಯಾಯಾಲಯದ ಸರ್ಕಾರಿ ಸಹಾಯಕ ಅಭಿಯೋಜಕ ಸಂಧ್ಯಾ ಮಂಜುನಾಥ್, ನಯನಕುಮಾರ್ ಆಸ್ಪತ್ರೆಯ ಸ್ತ್ರೀ ರೋಗ ತಜ್ಞೆ ಡಾ.ಕವಿತಾ ಸೂರ್ಯ. ಕೈಯಂಬಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯಾಧಿಕಾರಿ ಪಿ.ಬಿ.ರಘಾನ್ನಿ, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಧರ್ಮದರ್ಶಿ ಸವಿತಾಘಾಟ್ಕೆ ಅವರಿಗೆ 'ಭೂಮಿಕಾ ಭಾವೈಕ್ಯಾ ಮಹಿಳಾ ಸಿರಿ' ಪ್ರಶಸ್ತಿಯನ್ನು ನೀಡಿ, ಗೌರವಿಸಿದರು.

ನಂತರ ಹಿರಿಯ ಕವಯತ್ರಿ ಡಾ.ಲತಾ ರಾಜಶೇಖರ್ ಮಾತನಾಡಿ, ಪ್ರಸ್ತುತ ದಿನಮಾನಗಳಲ್ಲಿ ಮಹಿಳೆಯರು ಎಲ್ಲಾ ರಂಗದಲ್ಲೂ ಗುರುತಿಸಿಕೊಂಡು ದೇಶದ ಪ್ರಗತಿಯಲ್ಲಿ ತಮ್ಮದೇ ಕೊಡುಗೆ ನೀಡಿದ್ದಾರೆ. ಅಲ್ಲದೆ, ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಮತ್ತಷ್ಟು ಅವಕಾಶಗಳು ಸಮಾಜದಲ್ಲಿ ದೊರಕಬೇಕು ಎಂದರಲ್ಲದೆ, ಇಂದು ವಿವಿಧ ಕ್ಷೇತ್ರದ ಸಾಧಕರನ್ನು ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸಾಮಾಜಿಕ, ಆರೋಗ್ಯ, ಶಿಕ್ಷಣ ಸೇರಿದಂತೆ ಇತರೆ ಕ್ಷೇತ್ರದಲ್ಲಿ ಸಾಧಕಿಯರನ್ನು ಗುರುತಿಸಿ ಸನ್ಮಾನಿಸಿರುವುದು ಉತ್ತಮ ಸಂಗತಿ ಎಂದು ತಿಳಿಸಿದರು.

ಇದಕ್ಕೂ ಮುನ್ನ ರಾಜಮಾತೆ ಕೆಂಪು ಚಲುವಾಜಮ್ಮಣಿ ಮಹಾದ್ವಾರವನ್ನು ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ನಗರಾಧ್ಯಕ್ಷೆಹೇಮಾ ನಂದೀಶ್ ಉದ್ಘಾಟಿಸಿದರು. ಶರಣೆ ಅಕ್ಕಮಹಾದೇವಿ ಸಭಾಂಗಣವನ್ನು ಮಹಿಳಾ ಕ್ರೀಡಾಪಟು ರುಕ್ಮಿಣಿ ಚಂದ್ರನ್ ಉದ್ಘಾಟಿಸಿದರು. ವೀರರಾಣಿ ಕಿತ್ತೂರು ಚನ್ನಮ್ಮ ಕಲಾಮಂಟಪವನ್ನು ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆಯ ಗೌರವಾಧ್ಯಕ್ಷೆ ಡಾ.ನಳಿನಿ ತಮ್ಮಯ್ಯ ಉದ್ಘಾಟಿಸಿದರು.

ಈ ವೇಳೆ ಮೈಸೂರು ವುಮನ್ ಇನ್‌ಸ್ಟಾಲ್ ಎಂಟರ್‌ಪ್ರೈಸಸ್ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷೆ ಬಿ.ವಿ.ವಸಂತ ಕುಮಾರಿ, ಉದ್ಯಮಿ ರತ್ನಾ ಶೇಖರ್, ವೇದಿಕೆಯ ಗೌರವಾಧ್ಯಕ್ಷೆ ಡಾ.ಬಿ.ಎಸ್.ಗೀತಾ ಗಣೇಶ್, ಮಹಿಳಾ ಉದ್ಯಮಿಗಳಾದ ಛಾಯಾ ನಂಜಪ್ಪ ರಾಜಪ್ಪ, ಎಂ.ಕೆ.ಪುರಾಣಿಕ್, ಲಯನ್ ಗಿರೀಶ್, ಲಯನ್ಸ್ ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿ ವಲಯ ಅಧ್ಯಕ್ಷ ಲಯನ್ ಟಿ.ಸುರೇಶ್, ಮಹಿಳಾ ಚಿಂತಕಿ ಇಂದಿರಾ ವೆಂಕಟೇಶ್, ಲಯನ್ ಎಸ್.ವೆಂಕಟೇಶ್, ಭೂಮಿಕಾ ಭಾವೈಕ್ಯ ಬಳಗದ ಅಧ್ಯಕ್ಷೆ ರೂಪ ರಾಘವೇಂದ್ರ, ವಿಶ್ರಾಂತ ಶಿಕ್ಷಕ ತಗಡೂರು ಗೌರಿಶಂಕರ್ ಉಪಸ್ಥಿತರಿದ್ದರು.

ಬೆಂಗಳೂರು ರೇಸ್ ಕೋರ್ಸ್ ರಸ್ತೆಗೆ ಅಂಬರೀಶ್ ಹೆಸರು

ನಾಮಫಲಕ ಅನಾವರಣಗೊಳಿಸಿದ ಸಿಎಂ ಬೊಮ್ಮಾಯಿ



ಬೆಂಗಳೂರು, ಮಾ.27– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದು ಬೆಂಗಳೂರಿನ ಮೌರ್ಯ ವೃತ್ತದಿಂದ ಬಸವೇಶ್ವರ ವೃತ್ತದವರೆಗಿನ ರೇಸ್ ಕೋರ್ಸ್ ರಸ್ತೆಗೆ ರೆಬೆಲ್‌ಸ್ಟಾರ್ ಡಾ.ಎಂ.ಹೆಚ್ ಅಂಬರೀಶ್ ರಸ್ತೆ ಎಂದು ನಾಮಕರಣ ಮಾಡಿ ನಾಮಫಲಕ ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ ಸಂಸದೆ ಸುಮಲತಾ ಅಂಬರೀಶ್, ಪುತ್ರ ಅಭಿಷೇಕ್ ಅಂಬರೀಶ್, ನಟ ರಾಘವೇಂದ್ರ ರಾಜ್ ಕುಮಾರ್, ಫಿಲಂ ಚೇಂಬರ್ ಅಧ್ಯಕ್ಷ ಭಾ.ಮ ಹರೀಶ್, ರಾಕ್‌ಲೈನ್ ವೆಂಕಟೇಶ್, ಚಿನ್ನೆಗೌಡರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ನಂತರ ಮಾತನಾಡಿದ ಮುಖ್ಯಮಂತ್ರಿ, ರೇಸ್ ಕೋರ್ಸ್ ರಸ್ತೆಯನ್ನು ಅಂಬರೀಶ್ ಅವರ ಹೆಸರಿನಲ್ಲಿ ಅತ್ಯಂತ ಸಂತೋಷದಿಂದ ನಾಮಕರಣ ಮಾಡಿದ್ದೇವೆ. ಇದು ಅವರು ಹೆಚ್ಚು ಓಡಾಡಿದ ಸ್ಥಳ. ಎಲ್ಲ ಅಭಿಮಾನಿಗಳ ಒತ್ತಾಸೆ ಮೇರೆಗೆ ಇವರ ಹೆಸರನ್ನು ಇಟ್ಟಿದ್ದೇವೆ. ಹಲವು ಪ್ರತಿಭೆಯಿರುವ ಮೇರು ವ್ಯಕ್ತಿತ್ವ ಅವರದ್ದು. ಸಿನಿಮಾದಲ್ಲಿ ಸಹಜವಾಗಿ ನಟನೆ ಮಾಡುತ್ತಿದ್ದರು. ಜನರನ್ನು ಹಿಡಿದಿಟ್ಟುಕೊಳ್ಳುವ ವ್ಯಕ್ತಿತ್ವ ಅವರಿಗಿತ್ತು. ಕರ್ನಾಟಕದ ರೆಬಲ್ ಸ್ಟಾರ್, ಎಲ್ಲರ ಮನಸ್ಸನ್ನು ಗೆದ್ದಂತಹ ನೇರ ದಿಟ್ಟ, ನಿರಂತರ ಅಂಬರೀಶ್ ಅವರ ಹೆಸರು ಚಿರಸ್ಥಾಯಿಯಾಗಿ ಉಳಿಯಲಿ ಎಂದರು.



ಕಂಠೀರವ ಸ್ಟುಡಿಯೋದಲ್ಲಿ ಸೋಮವಾರ ಅಂಬರೀಶ್ ಸ್ಮಾರಕವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು.

ರೀಲ್ ಅಂಡ್ ರಿಯಲ್ ಲೈಫ್ ಎರಡು ಒಂದೇಯಾಗಿದ್ದು, ನೇರ ವ್ಯಕ್ತಿತ್ವ ಅವರದ್ದಾಗಿತ್ತು. ಕ್ರೀಡೆಯಲ್ಲೂ ಪ್ರತಿಭೆಯನ್ನು ಹೊಂದಿದ್ದ ಅವರು, ಸಾರ್ವಜನಿಕ ಜೀವನಕ್ಕೆ ಬಂದಮೇಲೆ ವಸತಿ ಸಚಿವರಾಗಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಕಾವೇರಿ ವಿಚಾರ ಬಂದಾಗ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟವರು. ಅಧಿಕಾರ ಅವರನ್ನು ಹುಡುಕಿಕೊಂಡು ಬರುತ್ತಿತ್ತು ಎಂದು ತಿಳಿಸಿದರು.

ನನಗೆ ಇವತ್ತು ಬಹಳ ಸಂತೋಷವಾಗಿದೆ. ಅಂಬರೀಶ್ ಅವರು ನನ್ನ ಮಿತ್ರರು. ಅವರ ಜೀವನ ತೆರೆದ ಪುಸ್ತಕ. ಹಲವಾರು ಬಾರಿ ಭೇಟಿಯಾಗಬೇಕು ಅಂದಾಗ ಅಲ್ಲೇ ರೇಸ್‌ಕೋರ್ಸ್‌ನಲ್ಲಿ ಇರುತ್ತೇನೆ ಬಾರಯ್ಯ ಎನ್ನುವವರು. ಅವರ ಹೆಸರನ್ನು ಬಿಟ್ಟು ಬೇರೆ ಯಾರ ಹೆಸರು ಕೂಡ ಈ ರಸ್ತೆಗೆ ಸೂಕ್ತವಲ್ಲ ಎಂದರು.

ಜನಾರ್ಧನ ರೆಡ್ಡಿಯ 'ಕಲ್ಯಾಣ ರಾಜ್ಯ ಪ್ರಗತಿ ಪಕ್ಷ'ಕ್ಕೆ ಫುಟ್ಬಾಲ್ ಚಿಹ್ನೆ

ಪ್ರಣಾಳಿಕೆ ಬಿಡುಗಡೆ



ಬೆಂಗಳೂರು: ಮಾಜಿ ಸಚಿವ, ಕರ್ನಾಟಕ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಸಂಸ್ಥಾಪಕ ಮುಖ್ಯಸ್ಥ ಜನಾರ್ಧನ ರೆಡ್ಡಿ ಇಂದು ಸೋಮವಾರ ಬೆಂಗಳೂರಿನಲ್ಲಿ ಪಕ್ಷದ ಚಿಹ್ನೆ, ಪ್ರಣಾಳಿಕೆ ಬಿಡುಗಡೆ ಮಾಡಿದ್ದಾರೆ.

ಕಲ್ಯಾಣ ಪ್ರಗತಿ ಪಕ್ಷದ ಚಿಹ್ನೆ ಫುಟ್‌ಬಾಲ್ ಗುರುತನ್ನು ಬಿಡುಗಡೆ ಮಾಡಿದ್ದಾರೆ. ಈ ವೇಳೆ ಮಾತನಾಡಿದ ಅವರು, ಡಿಸೆಂಬರ್ ತಿಂಗಳಿನಿಂದಲೇ ನಾನು ನನ್ನ ಪಕ್ಷದ ಉದ್ದೇಶ, ಧ್ಯೇಯಗಳನ್ನು ಪ್ರಚಾರ ಮಾಡುತ್ತಿದ್ದೆ. ನಾನು ಊಹಿಸಿಕೊಂಡಿದ್ದಕ್ಕಿಂತ ಹೆಚ್ಚಿನ ಬೆಂಬಲ ಸಿಕ್ಕಿದೆ. ನನ್ನ ನಿರೀಕ್ಷೆ ಮೀರಿ ಜನರ ವಿಶ್ವಾಸ ಗಳಿಸಿಕೊಂಡಿದ್ದೇನೆ. 90 ದಿನಗಳಲ್ಲಿ 12 ಮಂದಿ ಅಭ್ಯರ್ಥಿ ಘೋಷಣೆ ಮಾಡಿದ್ದೇನೆ. ಇನ್ನು 19 ಅಭ್ಯರ್ಥಿಗಳನ್ನು ಇನ್ನೊಂದು ವಾರದಲ್ಲಿ ಘೋಷಣೆ ಮಾಡುತ್ತೇನೆ ಎಂದರು.

ಇನ್ನೂ 20 ಕ್ಷೇತ್ರಗಳಲ್ಲಿ ಅಭ್ಯರ್ಥಿ ಹಾಕಲಿದ್ದೇವೆ. 51 ಕ್ಷೇತ್ರಗಳಲ್ಲಿ ಪಕ್ಷದ ಕಾರ್ಯಾಚರಣೆ ನಡೆಯುತ್ತಿದೆ. 30 ಕ್ಷೇತ್ರ ಗೆಲ್ಲುವ ವಿಶ್ವಾಸ ಇದೆ. ಗ್ರಾಮಗಳಲ್ಲಿ ಸಮಸ್ಯೆ ಕಣ್ಣಾರೆ ಕಂಡಿರುವವನು ನಾನು. ನಮ್ಮ ಭಾಗದ ಪ್ರತಿ ಜಿಲ್ಲೆಯಲ್ಲಿ ನಾನು ಓಡಾಡಿದ್ದೇನೆ. ಹದಿನೈದು ವರ್ಷಗಳ ಹಿಂದೆ ನಾನು ಆ ಭಾಗದಲ್ಲಿ ಓಡಾಡಿದ್ದೇನೆ. ಇತ್ತೀಚೆಗೆ ಈ ಭಾಗಗಳಲ್ಲಿ ಅಭಿವೃದ್ಧಿ ಆಗಿಲ್ಲ ಎಂದರು.

ಪಕ್ಷದ ಪ್ರಣಾಳಿಕೆ ಬಿಡುಗಡೆ: ಪ್ರತಿ ಮನೆಗೆ 250 ಯೂನಿಟ್ ಉಚಿತ ವಿದ್ಯುತ್, ಎಸ್‌ಟಿ, ಎಸ್‌ಸಿ ಉಚಿತ ನಿವೇಶನ, 5 ಎಕರೆಗಿಂತ ಕಡಿಮೆ ಜಮೀನು ಹೊಂದಿರುವ ರೈತರಿಗೆ ಬಂಡವಾಳದ 15 ಸಾವಿರ ರೂಪಾಯಿ ನೆರವು, ರೈತರಿಗೆ ಬಡ್ಡಿ ರಹಿತ ಸಾಲ, ಹೆಣ್ಣು ಮಕ್ಕಳ ಹೆಸರಿನಲ್ಲಿ ಮನೆ ಇಲ್ಲದೆ ಇರುವವರಿಗೆ 2 ಬಿಹೆಚ್‌ಕೆ ಮನೆ, ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಮಾನ ವೇತನ, ವಿದ್ಯಾರ್ಥಿಗಳಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ, ಮಹಿಳೆಯರ ಭದ್ರತೆಗಾಗಿ ಹೊಸ ಮಹಿಳೆಯರ ತಂಡ ಸ್ಥಾಪನೆ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ 1,000 ರೂಪಾಯಿ ವೇತನ ಹೆಚ್ಚಳ, ಆರ್ಥಿಕ ದೌರ್ಬಲ್ಯ ಮಕ್ಕಳಿಗೆ ಉಚಿತ ಶಿಕ್ಷಣ ಇತ್ಯಾದಿಗಳಾಗಿವೆ.

ಅಮಿತ್ ಶಾ ರಾಜ್ಯ ಭೇಟಿ ವೇಳೆ ಭದ್ರತಾ ಲೋಪ; ಬೆಂಗಳೂರಿನ ಇಬ್ಬರು ವಿದ್ಯಾರ್ಥಿಗಳ ಬಂಧನ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಭೇಟಿಯ ವೇಳೆ ಭದ್ರತೆಯನ್ನು ಉಲ್ಲಂಘಿಸಿದ್ದಕ್ಕಾಗಿ ಪೊಲೀಸರು ಬೆಂಗಳೂರಿನ ಇಬ್ಬರು ವಿದ್ಯಾರ್ಥಿಗಳನ್ನು ಬಂಧಿಸಿದ್ದಾರೆ ಮತ್ತು ವಿಚಾರಣೆ ನಡೆಸಿದ್ದಾರೆ.

ಬಂಧಿತರನ್ನು ಬೆಂಗಳೂರಿನ ನೀಲಸಂದ್ರ ನಿವಾಸಿಗಳಾದ ಇಮ್ರಾನ್ ಮತ್ತು ಜಿಬ್ರಾನ್ ಎಂದು ಗುರುತಿಸಲಾಗಿದೆ. ಬೆಂಗಳೂರಿನ ಪಕ್ಷದ ಪ್ರಧಾನ ಕಚೇರಿಯಲ್ಲಿ ನಡೆದ ಕೋರ್ ಕಮಿಟಿ ಸಭೆಯಲ್ಲಿ ಭಾಗವಹಿಸಿ ದೆಹಲಿಗೆ ಹಿಂತಿರುಗಲು ಶಾ ಅವರು ಭಾನುವಾರ ತಡರಾತ್ರಿ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತಿದ್ದಾಗ ಈ ಘಟನೆ ನಡೆದಿದೆ. ಆರೋಪಿ ವಿದ್ಯಾರ್ಥಿಗಳು ನಿಯಮಗಳನ್ನು ಉಲ್ಲಂಘಿಸಿ ಅಮಿತ್ ಶಾ ಅವರ ಬೆಂಗಾವಲು ವಾಹನಗಳೊಂದಿಗೆ ಸಫೀನಾ ಪ್ಲಾಜಾದಿಂದ ಮಣಿಪಾಲ್ ಸೆಂಟರ್‌ವರೆಗೆ ಹೇಗೋ ಹಠಾತ್ತನೆ ಮಧ್ಯೆ ಪ್ರವೇಶಿಸಿ ಪ್ರಯಾಣಿಸಿದ್ದಾರೆ. 300 ಮೀಟರ್‌ವರೆಗೆ ಪೊಲೀಸರು ತಡೆಯಲು ಯತ್ನಿಸಿದರೂ, ಬೈಕ್ ಸವಾರರು ಸವಾರಿ ಮುಂದುವರಿಸಿದ್ದರು.

ಪೊಲೀಸರು ಮಣಿಪಾಲ ಕೇಂದ್ರದಲ್ಲಿ ಅವರನ್ನು ತಡೆದು ಒಬ್ಬನನ್ನು ವಶಕ್ಕೆ ಪಡೆದಿದ್ದಾರೆ. ಮತ್ತೊಬ್ಬ ಪರಾರಿಯಾಗುವಲ್ಲಿ ಯಶಸ್ವಿಯಾಗಿದ್ದ. ನಂತರ ಆತನನ್ನು ಪೊಲೀಸರು ಬಂಧಿಸಿದ್ದಾರೆ. ಪೊಲೀಸರನ್ನು ಕಂಡ ವಿದ್ಯಾರ್ಥಿಗಳು ಗಾಬರಿಗೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ವಿವರಿಸಿವೆ. ಪ್ರಾಥಮಿಕ ತನಿಖೆಯಲ್ಲಿ ಇಬ್ಬರೂ ವಿದ್ಯಾರ್ಥಿಗಳು ಯಾವುದೇ ಅಪರಾಧ ಹಿನ್ನೆಲೆ ಅಥವಾ ಯಾವುದೇ ಕೆಟ್ಟ ಉದ್ದೇಶವನ್ನು ಹೊಂದಿಲ್ಲ ಎಂದು ತಿಳಿದಿದೆ. ಆದರೆ, ಯಾವುದೇ ಅವಕಾಶ ನೀಡದ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಈ ಸಂಬಂಧ ಭಾರತೀನಗರ ಪೊಲೀಸರು ವಿದ್ಯಾರ್ಥಿಗಳ ವಿರುದ್ಧ ಐಪಿಸಿ ಸೆಕ್ಷನ್ 353 ರ ಅಡಿಯಲ್ಲಿ ಸರ್ಕಾರಿ ಅಧಿಕಾರಿಯ ಕರ್ತವ್ಯಕ್ಕೆ ಅಡ್ಡಿಪಡಿಸಿದಕ್ಕಾಗಿ ಮತ್ತು 279 ಅಜಾಗರೂಕ ಮತ್ತು ನಿರ್ಲಕ್ಷ್ಯದ ಚಾಲನೆಗಾಗಿ ಪ್ರಕರಣ ದಾಖಲಿಸಿದ್ದಾರೆ.

ಜೆಡಿಎಸ್ ಮುಖಂಡ ಬಿ.ಎಲ್.ದೇವರಾಜು ಕಾಂಗ್ರೆಸ್ ಸೇರ್ಪಡೆ



ಮಂಡ್ಯ, ಮಾ.27– ಮುಂಬರುವ ಚುನಾವಣೆಗೆ ಜೆಡಿಎಸ್ ಟಿಕೆಟ್‌ಗಾಗಿ ಪ್ರಯತ್ನಿಸಿ ವರಿಷ್ಠರ ವಿರುದ್ಧ ಬಂಡಾಯ ಸಾರಿದ್ದ ಕೆ.ಆರ್.ಪೇಟೆ ಪ್ರಭಾವಿ ಹಿರಿಯ ಮುಖಂಡ ಬಿ.ಎಲ್.ದೇವರಾಜು ಸೋಮವಾರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. 1996ರ ಕೆ.ಆರ್.ಪೇಟೆ ಉಪ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದ ದೇವರಾಜು, 2019ರ ಉಪ ಚುನಾವಣೆಯಲ್ಲೂ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಇದೀಗ ಮತ್ತೆ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಅವರು, ಟಿಕೆಟ್ ಸಿಗದ ಹಿನ್ನೆಲೆಯಲ್ಲಿ ಬೇಸತ್ತು ಜೆಡಿಎಸ್ ಪಕ್ಷ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ಜೆಡಿಎಸ್‌ನಿಂದ 2 ಬಾರಿ ಸ್ಪರ್ಧಿಸಿ ಸೋಲು ಅನುಭವಿಸಿದ್ದ ದೇವರಾಜು, ವಕೀಲರಾಗಿ ಹಾಗೂ ಸಹಕಾರಿ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು ಮಾಡಿದ್ದಾರೆ. ಕೆ.ಆರ್.ಪೇಟೆ ಭಾಗದಲ್ಲಿ ಜೆಡಿಎಸ್ ಕಟ್ಟಿ ಬೆಳೆಸಿದವರ ಪೈಕಿ ದೇವರಾಜು ಸಹ ಒಬ್ಬರು. ಅವರು ಇಂದು ಯಾವುದೇ ಷರತ್ತಿಲ್ಲದೇ ಪಕ್ಷ ಸೇರ್ಪಡೆಯಾಗಿದ್ದಾರೆ. ಅವರ ಸೇರ್ಪಡೆಗೆ ನಮ್ಮ ಸ್ಥಳೀಯ ಕಾಂಗ್ರೆಸ್ಸಿಗರು ಒಪ್ಪಿಗೆ ಸೂಚಿಸಿದ್ದಾರೆ. ದೇವರಾಜು ಜೊತೆಗೆ ನೂರಾರು ಬೆಂಬಲಿಗರು ಸಹ ಸೇರ್ಪಡೆಯಾಗಿದ್ದು, ಇದರಿಂದ ಕೆ.ಆರ್.ಪೇಟೆಯಲ್ಲಿ ಕಾಂಗ್ರೆಸ್‌ಗೆ ಆನೆಬಲ ಬಂದಂತಾಗಿದೆ ಎಂದರು.

ಬಿ.ಎಲ್.ದೇವರಾಜು ಮಾತನಾಡಿ, ಕಳೆದ 40 ವರ್ಷಗಳ ಕಾಲ ಜನತಾದಳ ಹಾಗೂ ಜೆಡಿಎಸ್ ಪರ ದುಡಿದ ನನಗೆ ಪಕ್ಷ ಮೋಸ ಮಾಡಿದೆ. ಕಳೆದ ಚುನಾವಣೆಯಲ್ಲಿ ಟಿಕೆಟ್ ನೀಡಿದರೂ ನನ್ನ ಪರವಾಗಿ ಮಾಜಿ ಸಿಎಂ ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್ ನಾಯಕರು ಶ್ರಮಿಸಲಿಲ್ಲ. ಈ ಬಾರಿಯೂ ಟಿಕೆಟ್ ನೀಡದೇ ವಂಚಿಸಿದರು. ಇದರಿಂದ ಬೇಸರಗೊಂಡು ಜೆಡಿಎಸ್ ತೊರೆಯುತ್ತಿದ್ದು, ಕಾಂಗ್ರೆಸ್ ಪಕ್ಷವನ್ನು ಸೇರ್ಪಡೆಗೊಳ್ಳುತ್ತಿದ್ದೇನೆ. ಮುಂದಿನ ಚುನಾವಣೆಯಲ್ಲಿ ಕೆ.ಆರ್.ಪೇಟೆಯಲ್ಲಿ ಕಾಂಗ್ರೆಸ್ ಗೆಲ್ಲಿಸಲು ಶ್ರಮಿಸುವೆ ಎಂದು ಹೇಳಿದರು.

ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಮಾತನಾಡಿ, ಈ ಬಾರಿ ಕೆ.ಆರ್.ಪೇಟೆಯಲ್ಲಿ ಕಾಂಗ್ರೆಸ್ ಗೆಲ್ಲಿಸುವುದೇ ನಮ್ಮ ಗುರಿಯಾಗಿದ್ದು, ಆ ನಿಟ್ಟಿನಲ್ಲಿ ತಾಲೂಕಿನ ಹಿರಿಯ ರಾಜಕೀಯ ಧುರೀಣ ಬಿ.ಎಲ್.ದೇವರಾಜು ಅವರನ್ನು ಪಕ್ಷಕ್ಕೆ ಕರೆತಂದಿದ್ದೇವೆ. ಇನ್ನು ಹಲವು ಮುಖಂಡರು ಪಕ್ಷಕ್ಕೆ ಸೇರಲಿದ್ದಾರೆ. ಸಚಿವ ನಾರಾಯಣಗೌಡ ಹಾಗೂ ಜೆಡಿಎಸ್ ಅಭ್ಯರ್ಥಿಯನ್ನು ಸೋಲಿಸುವುದೇ ನಮ್ಮ ಗುರಿಯಾಗಿದ್ದು, ಮುಂದಿನ ಚುನಾವಣೆಯಲ್ಲಿ ಕೆ.ಆರ್.ಪೇಟೆಯಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಎಂದು ಭವಿಷ್ಯ ನುಡಿದರು.

ಈ ಸಂದರ್ಭದಲ್ಲಿ ಕೇಂದ್ರದ ಮಾಜಿ ಸಚಿವ ರೆಹಮಾನ್ ಖಾನ್, ಸಂಸದ ಜಿ.ಸಿ.ಚಂದ್ರಶೇಖರ್, ಮಾಜಿ ಶಾಸಕರಾದ ಎನ್.ಚಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ, ಬಿ.ಪ್ರಕಾಶ್, ಮುಖಂಡರಾದ ವಿಜಯ್ ರಾಮೇಗೌಡ, ಕಿಕ್ಕೇರಿ ಸುರೇಶ್ ಸೇರಿದಂತೆ ದೇವರಾಜು ಬೆಂಬಲಿಗರು ಭಾಗವಹಿಸಿದ್ದರು.

ಜೆಡಿಎಸ್‌ನ ಬಂಡಾಯ ನಂಬಿಕೊಂಡು ನಾನು ಚುನಾವಣೆಗೆ ಹೊರಟಿಲ್ಲ...!



ಮೂಲತಃ ಜನತಾ ಪರಿವಾರದಲ್ಲಿದ್ದ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ, ಜೆಡಿಎಸ್ ಜೊತೆಗೆ ಮುನಿಸಿಕೊಂಡು ಕಾಂಗ್ರೆಸ್‌ಗೆ ಬಂದು ಕಳೆದ ಚುನಾವಣೆಯಲ್ಲಿ ಸ್ಪರ್ಧಿಸಿ, ಸೋಲನ್ನಪ್ಪಿದ್ದರು. ಮೂರು ಬಾರಿ ಶಾಸಕ, ಒಮ್ಮೆ ಸಂಸದ, ಎರಡು ಬಾರಿ ಮಂತ್ರಿಯಾಗಿ ಕಾರ್ಯನಿರ್ವಹಿಸಿರುವ ಅವರು, ಮಂಡ್ಯ ಜಿಲ್ಲಾ ಕಾಂಗ್ರೆಸ್ ಮಟ್ಟಿಗೆ ಚುನಾವಣಾ ಚಾಣಾಕ್ಷ. ಲೋಕಸಭೆ ಚುನಾವಣೆಯಲ್ಲಿ ಪರೋಕ್ಷವಾಗಿ ಸುಮಲತಾರನ್ನು, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ದಿನೇಶ್‌ಗೂಳಿಗೌಡ ಹಾಗೂ ಪದವೀಧರ ಚುನಾವಣೆಯಲ್ಲಿ ಮಧು ಮಾದೇಗೌಡರ ಗೆಲುವಿನ ಹಿಂದೆ ಚಲುವರಾಯಸ್ವಾಮಿ ಚಾಣಾಕ್ಷತನವಿತ್ತು. ಇದೀಗ ಅವರ ಬೆಂಬಲದಿಂದ ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್ ಚುನಾವಣೆ ಎದುರಿಸಲು ಮುಂದಾಗಿದ್ದು, ನಾಗಮಂಗಲ ಕ್ಷೇತ್ರದಲ್ಲಿ ಮೊದಲ ಪಟ್ಟಿಯಲ್ಲಿಯೇ ಅವರಿಗೆ ಟಿಕೆಟ್ ಘೋಷಣೆ ಮಾಡಲಾಗಿದೆ. ಈ ಕುರಿತು ನಾಗಮಂಗಲ ಕಾಂಗ್ರೆಸ್ ಅಭ್ಯರ್ಥಿ ಎನ್.ಚಲುವರಾಯಸ್ವಾಮಿ 'ಮೈಸೂರು ಮಿತ್ರ'ನಲ್ಲಿ ಈ ಕ್ಷಣದ ಅಭಿಪ್ರಾಯ ಹೀಗಿತ್ತು.

ಮೈಸೂರು ಮಿತ್ರ: ಬಿಡುಗಡೆಯಾದ ಮೊದಲ ಪಟ್ಟಿಯಲ್ಲೇ ಟಿಕೆಟ್ ಘೋಷಣೆಯಾಗಿದೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ?

ಚಲುವರಾಯಸ್ವಾಮಿ: ಜಿಲ್ಲೆಯ ಏಳು ಕ್ಷೇತ್ರಗಳಲ್ಲಿ ನಾಗಮಂಗಲದಲ್ಲಿ ಸಿಂಗಲ್ ಕ್ಯಾಂಡಿಡೇಟ್ ಆಗಿ ನಾನು ಮಾತ್ರ ಅರ್ಜಿ ಸಲ್ಲಿಸಿದ್ದೆ. ಹೆಚ್ಚಿನ ಆಕಾಂಕ್ಷಿಗಳಿಲ್ಲದ ಕಾರಣ ನನಗೆ ಹೈಕಮಾಂಡ್ ಟಿಕೆಟ್ ಕ್ಲಿಯರ್ ಮಾಡಿದೆ.

ಮಿತ್ರ: ನಿಮ್ಮ ನಾಗಮಂಗಲದಲ್ಲಿ ಚುನಾವಣಾ ತಯಾರಿ ಹೇಗಿದೆ?

ಚ.ಸ್ವಾಮಿ: ಚುನಾವಣೆ ತಯಾರಿ ಜೋರಾಗಿದೆ. ಮಾಧ್ಯಮದವರು ನೀವೇ ನೋಡುತ್ತಿದ್ದೀರಿ. ಮೂರು ಬಾರಿ ಶಾಸಕನಾಗಿ, ಮಂತ್ರಿಯಾಗಿ, ಸಂಸದನಾಗಿ ಕ್ಷೇತ್ರವನ್ನು ಸಾಕಷ್ಟು ಅಭಿವೃದ್ಧಿ ಮಾಡಿದ್ದೇನೆ. ಭೇದ ಭಾವ ಮಾಡದೇ ಎಲ್ಲಾ ವರ್ಗದ ಹಿತ ಸಾಧನೆಗೆ ಶ್ರಮಿಸಿರುವ ನನ್ನನ್ನು ಈ ಬಾರಿ ಜನ ಕೈಹಿಡಿಯಲಿದ್ದಾರೆ ಎಂಬ ನಂಬಿಕೆ ಇದೆ.

ಮಿತ್ರ: ಕಳೆದ ಬಾರಿ ಸೋತಿದ್ದೀರಿ. ಈ ಬಾರಿ ಮತದಾರರ ಪ್ರತಿಕ್ರಿಯೆ ಹೇಗಿದೆ?

ಚ.ಸ್ವಾಮಿ: ಮತದಾರರ ಪ್ರಕ್ರಿಯೆ ಭರ್ಜರಿಯಾಗಿದೆ. ಜನ ಹಾಲಿ ಶಾಸಕರಿಂದ ಯಾವುದೇ ಕೆಲಸವಾಗದೇ ರೋಸಿ ಹೋಗಿದ್ದಾರೆ. ಈ ಬಾರಿ ಬದಲಾವಣೆ ಬಯಸಿದ್ದು, ನನ್ನ ಪರ ಜನರ ಅಪಾರ ಒಲವಿದೆ. ಈ ಬಾರಿ ನಾನು ಗೆದ್ದೇ ಗೆಲ್ಲುತ್ತೇನೆ ಎಂಬ ವಿಶ್ವಾಸ ನನಗಿಂತ ನಾಗಮಂಗಲದ ಜನರಿಗಿದೆ.

ಮಿತ್ರ: ಡಿಕೆಶಿ ನೇತೃತ್ವದಲ್ಲಿ ಪ್ರಜಾಧ್ವನಿ ಯಾತ್ರೆ ಯಶಸ್ವಿಯಾಗಿದೆ. ಅದರ ಬಗ್ಗೆ ಏನು ಹೇಳ್ತೀರಾ?

ಚ.ಸ್ವಾಮಿ: ಪ್ರಜಾಧ್ವನಿ ಯಾತ್ರೆ ನಾಗಮಂಗಲದಲ್ಲಿ ಈ ಪರಿ ಯಶಸ್ವಿಯಾಗುತ್ತದೆ ಎಂಬುದನ್ನು ಊಹಿಸಿರಲಿಲ್ಲ. 10 ಸಾವಿರಕ್ಕೂ ಹೆಚ್ಚು ಜನ ಭಾಗಿಯಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಸ್ವಯಂಪ್ರೇರಿತರಾಗಿ ಜನ ಆಗಮಿಸಿ, ವೇದಿಕೆ ಕಾರ್ಯಕ್ರಮ ಹಾಗೂ ರೋಡ್ ಶೋ ಎರಡು ಸಹ ಯಶಸ್ವಿಯಾಯಿತು.

ಮಿತ್ರ: ಮಂಡ್ಯದ ಉಳಿದ 4 ಕ್ಷೇತ್ರದ ಟಿಕೆಟ್ ಘೋಷಣೆ ಯಾವಾಗ?

ಚ.ಸ್ವಾಮಿ: ಇನ್ನೊಂದೆರಡು ದಿನಗಳಲ್ಲಿ ಎರಡನೇ ಪಟ್ಟಿ ಬಿಡುಗಡೆಯಾಗುವ ಸಾಧ್ಯತೆ ಇದೆ. ಅದರಲ್ಲಿ ನಾಲ್ಕು ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಘೋಷಣೆಯಾಗಬಹುದು. ಆಕಾಂಕ್ಷಿಗಳು ಹೆಚ್ಚಿರುವ ಕಾರಣ ಸ್ವಲ್ಪ ತಡವಾಗಿದೆ. ಸದ್ಯದಲ್ಲೇ ಅದು ಬಗೆಹರಿಯಲಿದೆ.

ಮಿತ್ರ: ನಾಗಮಂಗಲದಲ್ಲಿ ಜೆಡಿಎಸ್ ಬಂಡಾಯ ನಿಮಗೆ ವರದಾನ ಆಗುತ್ತಾ?

ಚ.ಸ್ವಾಮಿ: ಜೆಡಿಎಸ್‌ನ ಬಂಡಾಯ ನಂಬಿಕೊಂಡು ಚುನಾವಣೆಗೆ ಹೊರಟಿಲ್ಲ. ನನ್ನ ಸ್ವಸಾಮರ್ಥ್ಯ, ಅಭಿವೃದ್ಧಿ ಹೆಸರಲ್ಲಿ ಚುನಾವಣೆ ತಯಾರಿ ನಡೆಸಿದ್ದೇನೆ. ಜೆಡಿಎಸ್‌ನಿಂದ ಹೊರ ಬಂದಿರುವ ಶಿವರಾಮೇಗೌಡ ಆದಿಯಾಗಿ ಯಾರೇ ಚುನಾವಣೆಗೆ ನಿಂತರೂ ಅದು ಅವರ ಸ್ವಾತಂತ್ರ್ಯ. ಅದಕ್ಕೂ ನನಗೂ ಸಂಬಂಧವಿಲ್ಲ.

ನಾಗಣ್ಣ ನಿಧನ

ಮಂಡ್ಯ, ಮಾ.27– ಅಖಿಲ ಕರ್ನಾಟಕ ಒಕ್ಕಲಿಗರ ಒಕ್ಕೂಟದ ಮಾಜಿ ರಾಜ್ಯಾಧ್ಯಕ್ಷ ನಾಗಣ್ಣ ಬಾಣಸವಾಡಿ (57) ಭಾನುವಾರ ರಾತ್ರಿ ನಿಧನರಾದರು.



ಮೃತರು ಪತ್ನಿ ಜ್ಯೋತಿಲಕ್ಷ್ಮಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ದೊಡ್ಡಬಾಣಸವಾಡಿ ಜಮೀನಿನಲ್ಲಿ ಸೋಮವಾರ ಮಧ್ಯಾಹ್ನ 1 ಗಂಟೆಗೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದರ್ಶನ್ ಪುಟ್ಟಣ್ಣಯ್ಯ ಜೊತೆ ಸಿದ್ದು, ಡಿಕೆಶಿ ಮಾತುಕತೆ



ಮಂಡ್ಯ, ಮಾ.27– ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ರೈತ ಸಂಘಕ್ಕೆ ಬೆಂಬಲ ನೀಡುವ ಸಂಬಂಧ ರೈತ ಸಂಘದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಜೊತೆಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತುಕತೆ ನಡೆಸಿದ್ದಾರೆ.

ಬೆಂಗಳೂರಿನಲ್ಲಿ ಸಿದ್ದರಾಮಯ್ಯ, ಡಿಕೆಶಿ ಭೇಟಿಯಾದ ದರ್ಶನ್ ಪುಟ್ಟಣ್ಣಯ್ಯ ಸುದೀರ್ಘವಾಗಿ ಮಾತುಕತೆ ನಡೆಸಿದ್ದು, ಮುಂಬರುವ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಅವರಿಗೆ ಬೆಂಬಲ ನೀಡುತ್ತಾ ಅನ್ನುವ ಅನುಮಾನ ಮೂಡಿದೆ.

ಮುಂದಿನ ಚುನಾವಣೆಯಲ್ಲಿ ದರ್ಶನ್‌ಗೆ ಬೆಂಬಲ ನೀಡುವ ಬಗ್ಗೆ ಡಿಕೆಶಿ, ಸಿದ್ದು ಮಾತುಕತೆ ನಡೆಸಿದ್ದು, ಜಿಲ್ಲಾ ನಾಯಕರಾದ ಚಲುವರಾಯಸ್ವಾಮಿ ಹಾಗೂ ಇನ್ನಿತರರ ಸಮ್ಮುಖದಲ್ಲಿ ಸಭೆ ನಡೆದಿದೆ. ದರ್ಶನ್‌ಗೆ ಬೆಂಬಲ ಸೂಚಿಸಿದರೆ, ಈಗಾಗಲೇ ಟಿಕೆಟ್‌ಗೆ ಅರ್ಜಿ ಸಲ್ಲಿಸಿರುವವರನ್ನು ಹೇಗೆ ಸಂಬಾಳಿಸಬೇಕು. ಅವರ ಮನವೊಲಿಕೆ ಹೇಗೆ, ದರ್ಶನ್‌ರನ್ನು ಗೆಲ್ಲಿಸಲು ಕಾಂಗ್ರೆಸ್ ಯಾಗವ ರೀತಿ ರಣತಂತ್ರ ರೂಪಿಸಬೇಕೆಂಬುದರ ಬಗ್ಗೆ ಸುದೀರ್ಘ ಚರ್ಚೆ ನಡೆದಿದೆ.

ಇತ್ತೀಚೆಗೆ ಮಂಡ್ಯದಲ್ಲಿ ಸುದ್ದಿಗೋಷ್ಠಿ ನಡೆಸಿದ್ದ ದರ್ಶನ್ ಪುಟ್ಟಣ್ಣಯ್ಯ, ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ನನ್ನೊಂದಿಗೆ ಮಾತುಕತೆ ನಡೆಸಿದ್ದು, ಬೆಂಬಲ ಕೊಡುವ ಬಗ್ಗೆ ತಿಳಿಸುವುದಾಗಿ ಹೇಳಿದ್ದಾರೆ ಎಂದಿದ್ದರು. ಅದೇ ಬೆನ್ನಲ್ಲೇ ಇದೀಗ ಸಿದ್ದು, ಡಿಕೆಶಿ ಕರೆಸಿ ಮಾತುಕತೆ ನಡೆಸಿದ್ದು, ದರ್ಶನ್‌ಗೆ ಕಾಂಗ್ರೆಸ್ ಬೆಂಬಲ ನೀಡುತ್ತಾ ಅನ್ನೋದನ್ನ ಕಾದು ನೋಡಬೇಕಿದೆ.

ರಾಜ್ಯ ನಾಯಕರ ಬಳಿಗೆ ತೆರಳಿದ ನಿಯೋಗ: ಮುಂಬರುವ ಚುನಾವಣೆಯಲ್ಲಿ ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕಣಕ್ಕಿಳಿಸಲೇಬೇಕೆಂದು ಒತ್ತಾಯಿಸಿ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ ಜಿಪಂ ಮಾಜಿ ಸದಸ್ಯ ಹೆಚ್.ಮಂಜುನಾಥ್, ಕೆಪಿಸಿಸಿ ಸದಸ್ಯ ತ್ಯಾಗರಾಜು ಸೇರಿದಂತೆ ಇನ್ನಿತರ ಮುಖಂಡರ ನಿಯೋಗ ಇಂದು ಬೆಂಗಳೂರಿನಲ್ಲಿ ರಾಜ್ಯ ನಾಯಕರಿಗೆ ಮನವಿ ಸಲ್ಲಿಸಿದೆ ಎನ್ನಲಾಗಿದೆ.

ಕಂದಾಯ ಗ್ರಾಮಗಳ 315 ಮಂದಿಗೆ ಹಕ್ಕುಪತ್ರ ವಿತರಣೆ



ಶ್ರೀರಂಗಪಟ್ಟಣ, ಮಾ.27– ತಾಲೂಕು ವ್ಯಾಪ್ತಿಯ ಕಂದಾಯ ಗ್ರಾಮಗಳ 315 ಮಂದಿ ಅರ್ಹ ಫಲಾನುಭವಿಗಳಿಗೆ ಶಾಸಕ ರವೀಂದ್ರ ಶ್ರೀಕಂಠಯ್ಯ ಸರ್ಕಾರದ ಪರವಾಗಿ ಹಕ್ಕುಪತ್ರ ವಿತರಿಸಿ, ಸರ್ಕಾರ ಹಾಗೂ ಕಂದಾಯ ಇಲಾಖೆಗೆ ಅಭಿನಂದನೆ ತಿಳಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ತಹಸೀಲ್ದಾರ್ ಅಶ್ವಿನಿ ನೇತೃತ್ವದಲ್ಲಿ ಆಯೋಜಿಸಿದ್ದ ಕಂದಾಯ ಗ್ರಾಮಗಳ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ರವೀಂದ್ರ ಶ್ರೀಕಂಠಯ್ಯ, ತಾಲೂಕಿನ ಕೆಆರ್‌ಎಸ್ ಅನ್ನು ಕಂದಾಯ ಗ್ರಾಮವನ್ನಾಗಿ ಘೋಷಿಸಬೇಕೆಂಬ ಪ್ರಸ್ತಾವನೆಯನ್ನು ಸರ್ಕಾರದ ಮುಂದಿಟ್ಟ ಪರಿಣಾಮ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರ ಇಚ್ಛಾಶಕ್ತಿ ಮೇರೆಗೆ ಇಂದು ರಾಜ್ಯದೆಲ್ಲೆಡೆ ಲಕ್ಷಾಂತರ ಮಂದಿ ಫಲಾನುಭವಿಗಳಿಗೆ ನ್ಯಾಯ ದೊರೆಯುತ್ತಿದೆ ಎಂದರು.

ಫಲಾನುಭವಿಗಳಲ್ಲಿ ಹಕ್ಕಪತ್ರ ಇನ್ನೂ ದೊರೆಯುತ್ತಿಲ್ಲ ಎಂಬ ಕೊರಗು ಬೇಡ. ಮೊದಲ ಹಂತವಾಗಿ 315 ಫಲಾನುಭವಿಗಳಿಗೆ ಹಕ್ಕಪತ್ರ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ತಾಲೂಕಿನ ಎಲ್ಲಾ ಅರ್ಹರಿಗೂ ವಿತರಿಸುವುದಾಗಿ ತಿಳಿಸಿದರು.

ಗ್ರೇಡ್ 2–ತಹಸೀಲ್ದಾರ್ ಶೀಲಾ, ಪುರಸಭೆ ಉಪಾಧ್ಯಕ್ಷ ಕೃಷ್ಣಪ್ಪ ಸೇರಿದಂತೆ ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಫಲಾನುಭವಿಗಳು ಉಪಸ್ಥಿತರಿದ್ದರು.

ಏ.17ಕ್ಕೆ ಪಿಂಚಣಿ ಅದಾಲತ್ ಮುಂದೂಡಿಕೆ

ಮಂಡ್ಯ, ಮಾ.27– ಪಿಂಚಣಿ ಅದಾಲತ್ ಕಾರ್ಯಕ್ರಮವನ್ನು ಮಾ.15ರಂದು ಆಯೋಜಿಸಲಾಗಿತ್ತು. ಆದರೆ ಖಜಾನೆ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿ, ಎಲ್ಲಾ ಇಲಾಖೆ ಕಚೇರಿ ಮುಖ್ಯಸ್ಥರು ಆರ್ಥಿಕ ವರ್ಷಾಂತ್ಯವಿರುವುದರಿಂದ ಬಿಲ್‌ಗಳನ್ನು ತಯಾರಿಸಿ ತೀರ್ಣಗೊಳಿಸುವಲ್ಲಿ ನಿರತರಾಗಿರುವುದರಿಂದ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಮತ್ತಷ್ಟು ಕಾರ್ಯಭಾರ ಒತ್ತಡ ಜಾಸ್ತಿಯಾಗುವುದರಿಂದ ಸದರಿ ಪಿಂಚಣಿ ಅದಾಲತ್ ಕಾರ್ಯಕ್ರಮವನ್ನು ಏ.17ಕ್ಕೆ ಮುಂದೂಡಲಾಗಿದೆ.

ಮೂರನೇ ಪುಟದಿಂದ

ಮನೆ ಮೇಲೆ ಕಲ್ಲು ತೂರಾಟ

ಗಾಜುಗಳನ್ನು ಪುಡಿ ಮಾಡಿದರು. ಪರಿಸ್ಥಿತಿ ನಿಯಂತ್ರಣ ತಪ್ಪಿದ್ದನ್ನು ಗಮನಿಸಿ ಹೆಚ್ಚುವರಿ ಪಡೆಗಳನ್ನು ಸ್ಥಳಕ್ಕೆ ಕರೆಸಲಾಯಿತು. ಮಹಿಳೆಯರು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನಾಕಾರರು ಸೇರಿದ್ದರಿಂದ ಅವರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಈ ವೇಳೆ ಸರ್ಕಲ್ ಇನ್ಸ್‌ಪೆಕ್ಟರ್ ಸೇರಿ ನಾಲ್ಕೈದು ಮಂದಿ ಪೊಲೀಸರು ಹಾಗೂ ಲಮಾಣಿ ಅಥವಾ ಲಂಬಾಣಿ ಎಂದು ಕರೆಯಲ್ಪಡುವ ಬಂಜಾರ ಸಮುದಾಯದ ಕೆಲವರು ಗಾಯಗೊಂಡಿದ್ದಾರೆ. ಪರಿಸ್ಥಿತಿ ತಹಬದಿಗೆ ಬಂದಿದ್ದು, ಎಸ್ಪಿ ಮಿಥುನ್ ಕುಮಾರ್ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ.

ಘಟನೆ ಬಗ್ಗೆ ಶಿವಮೊಗ್ಗ ಜಿಲ್ಲಾಧಿಕಾರಿ ಡಾ.ಸೆಲ್ವಮಣಿ ಪ್ರತಿಕ್ರಿಯಿಸಿ, ಶಿಕಾರಿಪುರ ಪಟ್ಟಣದಲ್ಲಿ ಇಂದು ಮನವಿ ಸಲ್ಲಿಸಲು 1,500ಕ್ಕೂ ಹೆಚ್ಚು ಜನ ಸೇರಿದ್ದರು. ಈ ವೇಳೆ ದಾರಿಯಲ್ಲಿ ಪೊಲೀಸರು ತಡೆದಿದ್ದಾರೆ ಎಂದು ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆದಿದ್ದು ಕೆಲವರು ಕಲ್ಲು ತೂರಿದ್ದಾರೆ. ನಂತರ ಯಡಿಯೂರಪ್ಪನವರ ಮನೆಗೂ ನುಗ್ಗುವಾಗ ಪೊಲೀಸರು ತಡೆಯಲು ಯತ್ನಿಸಿದ್ದಾರೆ. ಪಟ್ಟಣದಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಿದ್ದು, ಸದ್ಯ ಪಟ್ಟಣ ಶಾಂತಿಯುತವಾಗಿದೆ. ಈ ರೀತಿ ಕಾನೂನು ಕೈಗೆತ್ತಿಕೊಳ್ಳುವುದು ಸರಿಯಲ್ಲ. ಜಿಲ್ಲೆಯ ನಾಗರಿಕರು ಶಾಂತಿಯುತವಾಗಿ ವರ್ತಿಸಬೇಕು. ಯಡಿಯೂರಪ್ಪನವರ ಮನೆಗೆ ನುಗ್ಗಿದವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕ ಮಿಥುನ್ ಕುಮಾರ್, ಬೆಳಗ್ಗೆ ಸಾವಿರಾರು ಜನ ತಹಸೀಲ್ದಾರ್ ಕಚೇರಿಗೆ ಮನವಿ ಸಲ್ಲಿಸಲು ಬಂದಿದ್ದರು. ಈ ವೇಳೆ ಪೊಲೀಸರು ಹಾಕಿದ್ದ ಬ್ಯಾರಿಕೇಡ್ ತಳ್ಳಿ ನುಗ್ಗಿದ್ದರಿಂದ ನಮ್ಮ ನಾಲ್ಕೈದು ಪೊಲೀಸರಿಗೆ ಗಾಯವಾಗಿದೆ. ಶಿಕಾರಿಪುರ ಪಟ್ಟಣದಲ್ಲಿ ಕೆಎಸ್‌ಆರ್‌ಪಿ ಸೇರಿದಂತೆ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಸದ್ಯ ಪಟ್ಟಣ ಶಾಂತಿಯುತವಾಗಿದೆ. ವಿಡಿಯೋ ನೋಡಿ ಮುಂದಿನ ಕ್ರಮ ಜರುಗಿಸುತ್ತೇವೆ ಎಂದಿದ್ದಾರೆ.

ವಿಪಕ್ಷದ ವಿರುದ್ಧ ಆರೋಪ: ಮಾಜಿ ಎಂಎಲ್‌ಸಿ ಅಶ್ವಥ್ ನಾರಾಯಣ ಮಾತನಾಡಿ, ಯಡಿಯೂರಪ್ಪ ಅವರೇ ತಾಂಡ ಅಭಿವೃದ್ಧಿ ಮಾಡಿದ್ದು. ಲಂಬಾಣಿ ಸಮುದಾಯಕ್ಕೆ ನಾವು ಹೆಚ್ಚಿನ ಅನುದಾನ ನೀಡಿದ್ದೇವೆ. ಯಾರು ಸಹ ಹಿಂಸಾಚಾರ ಮಾಡಬಾರದು ಎಂದಿದ್ದಾರೆ. ಬೆಳಗಾವಿಯಲ್ಲಿ ಕುಡಚಿ ಶಾಸಕ ಪಿ.ರಾಜೀವ್ ಮಾತನಾಡಿ, ಯಡಿಯೂರಪ್ಪನವರ ಹೆಸರಿಗೆ ಕಪ್ಪುಚುಕ್ಕೆ ತರಲು ವಿರೋಧ ಪಕ್ಷ ಮುಂದಾಗಿದೆ. ಕರ್ನಾಟಕ ರಾಜ್ಯದ ಬಂಜಾರಾ, ಭೋವಿ, ಕೊರಚ ಸಮುದಾಯಗಳನ್ನು ಪರಿಶಿಷ್ಟ ಪಟ್ಟಿಯಿಂದ ಕೈಬಿಡುವ ಪ್ರಶ್ನೆಯೇ ಇಲ್ಲ. ಸಮುದಾಯದವರು ಸುಳ್ಳು ಸುದ್ದಿಗಳಿಗೆ ಕಿವಿಗೊಡಬಾರದು ಆತಂಕಕ್ಕೆ ಒಳಗಾಗಬಾರದು. ಕೆಲವರು ಈ ಕುರಿತಂತೆ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಸಿಎಂ ಬೊಮ್ಮಾಯಿ ಈ ನಾಲ್ಕು ಸಮುದಾಯಕ್ಕೆ ನ್ಯಾಯ ಒದಗಿಸಿ ಕೊಟ್ಟಿದ್ದಾರೆ. ಹೀಗಾಗಿ ನಾವೆಲ್ಲ ಸಿಎಂ ಬೊಮ್ಮಾಯಿಗೆ ಧನ್ಯವಾದ ತಿಳಿಸಬೇಕು ಎಂದರು.

ತಪ್ಪು ಗ್ರಹಿಕೆಯಿಂದ ಘಟನೆ ನಡೆದಿದೆ; ಬಿಎಸ್‌ವೈ

ಬೆಂಗಳೂರು: ತಪ್ಪು ಗ್ರಹಿಕೆಯಿಂದ ಈ ಘಟನೆ ಆಗಿದೆ. ಇನ್ನೆರಡು ದಿನದಲ್ಲಿ ಅಲ್ಲಿಗೆ ಹೋಗಿ ಎಲ್ಲರ ಜೊತೆ ಮಾತಾಡುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಕಾರಿಪುರದಲ್ಲಿ ಬಂಜಾರ ಸಮುದಾಯದ ಕಾರ್ಯಕರ್ತರು ನಮ್ಮ ಮನೆ ಮೇಲೆ ಕಲ್ಲು ತುರಾಟ ಮಾಡಿದ್ದಾರೆ. ಈ ಬಗ್ಗೆ ನಾನು ಡಿಸಿ ಹಾಗೂ ಎಸ್ಪಿ ಜೊತೆ ಮಾತಾಡಿದ್ದೇನೆ. ಅನೇಕ ವರ್ಷಗಳಿಂದ ಬಂಜಾರ ಸಮು ದಾಯ ನಮ್ಮ ಜೊತೆಗಿದೆ. ಏನೋ ತಪ್ಪು ಗ್ರಹಿಕೆಯಿಂದ ಈ ಘಟನೆ ಆಗಿದೆ. ಘಟನೆಗೆ ಸಂಬಂಧಿಸಿದಂತೆ ಸಮುದಾಯದ ಮುಖಂಡರನ್ನು ಕರೆದು ಮಾತನಾಡುತ್ತೇನೆ. ಗೊಂದಲಕ್ಕೆ ಕಾರಣ ಏನು ಅಂತ ಸಮಾ ಲೋಚನೆ ನಡೆಸಿ ಸಮಸ್ಯೆ ಏನೇ ಇದ್ದರೂ, ಚರ್ಚೆಗೆ ಸಿದ್ಧನಾಗಿದ್ದೇನೆ. ಯಾರ ಮೇಲೂ ಕ್ರಮ ತೆಗೆದುಕೊಳ್ಳಬಾರದು. ಯಾರನ್ನು ಬಂಧನ ಮಾಡಬಾರದು ಎಂದು ಎಸ್ಪಿಗೆ ಮನವಿ ಮಾಡಿದ್ದೇನೆ ಎಂದರು.

ಶಿಕಾರಿಪುರ ಶಾಂತಿಯುತವಾಗಿತ್ತು. ಇಂತಹ ಘಟನೆ ಆಗಿರೋದು ನೋವಾಗಿದೆ. ಯಾವುದೇ ಕಾರಣಕ್ಕೂ ಸಮಾಜ ಘಾತುಕ ಶಕ್ತಿ ಮಾತು ಕೇಳಬೇಡಿ. ಸಮುದಾಯಕ್ಕೆ ಸಿಗಬೇಕಾದ ಎಲ್ಲಾ ಸೌಲಭ್ಯ ಕೊಡುತ್ತೇನೆ. 4 ಬಾರಿ ಸಿಎಂ ಆಗಲು ಈ ಸಮುದಾಯದ ಜನರು ಕಾರಣ. ತಾಂಡಾ ಅಭಿವೃದ್ಧಿಗೆ ನಿರಂತರವಾಗಿ ನಾನು ಕೆಲಸ ಮಾಡಿದ್ದೇನೆ. ಬಂಜಾರ ಸಮುದಾಯದ ಅಭಿವೃದ್ಧಿಗೆ ಕೆಲಸ ಮಾಡಿದ್ದೇನೆ. ಯಾರು ಅಹಿತಕರ ಘಟನೆಗೆ ಅವಕಾಶ ಮಾಡಿಕೊಡಬಾರದು. ಎಲ್ಲರೂ ಶಾಂತಿಯುತವಾಗಿ ಇರಬೇಕು. ಸಮುದಾಯದ ಮುಖಂಡರು ಯಾವಾಗ ಬೇಕಾದರೂ ಮುಖ್ಯಮಂತ್ರಿಗಳನ್ನು ಭೇಟಿ ಮಾಡಬಹುದು. ನಾನು ಬೇಕಾದರೆ ಬಂದು ಮಾತನಾಡುತ್ತೇನೆ ಎಂದರು.

ಒಳಮೀಸಲಾತಿ ಜಾರಿಗೆ ವಿರೋಧಿಸಿ ಶಿಕಾರಿಪುರದಲ್ಲಿ ನಡೆದ ಪ್ರತಿಭಟನೆ ವೇಳೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪರ ಮನೆ ಮೇಲೆ ನಡೆದ ಕಲ್ಲು ತೂರಾಟದ ಹಿಂದೆ ಶಿವಮೊಗ್ಗದ ಸ್ಥಳೀಯ ಕಾಂಗ್ರೆಸ್ ಮುಖಂಡರ ಕೈವಾಡವಿದೆ. ಈ ಕೃತ್ಯವನ್ನು ಖಂಡಿಸುತ್ತೇನೆ. ಸಮಾಜ ಪ್ರಕ್ಷುಬ್ಧಗೊಳಿಸುವಂತಹ ಕೆಲಸ ಮಾಡಬಾರದು. ರಾಜಕೀಯ ಲಾಭಕ್ಕಾಗಿ ಇಂತಹ ಕೃತ್ಯ ಮಾಡುತ್ತಿದ್ದಾರೆ. ಒಂದು ರಾಷ್ಟ್ರೀಯ ಪಕ್ಷ ಮಾಡುವಂತಹ ಕೆಲಸವಲ್ಲ. ಈ ಕೃತ್ಯ ಕ್ಷಮೆಗೆ ಅರ್ಹವಲ್ಲ. ಕಾಂಗ್ರೆಸ್ ಶಕುನಿ ಕೆಲಸ ಮಾಡುತ್ತಿರುವ ಬಗ್ಗೆ ರಣದೀಪ್ ಸಿಂಗ್ ಸುರ್ಜೆವಾಲ ಮಾತನಾಡಲಿ.

–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಕೆ.ಆರ್.ಪೇಟೆ ಪುರಸಭೆ ಸಾಮಾನ್ಯ ಸಭೆ: ಸಮಸ್ಯೆಗಳ ಬಗ್ಗೆ ಚರ್ಚೆ



ಕೆ.ಆರ್.ಪೇಟೆ, ಮಾ.27– ಪಟ್ಟಣದ ಪುರಸಭೆಯ ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನಾ ಭವನದಲ್ಲಿ ಅಧ್ಯಕ್ಷೆ ಮಹಾದೇವಿ ನಂಜುಂಡ ಅವರ ಅಧ್ಯಕ್ಷತೆಯಲ್ಲಿ ಪುರಸಭೆ ಸಾಮಾನ್ಯ ಸಭೆ ಸೋಮವಾರ ನಡೆಯಿತು. ಈ ವೇಳೆ ಹಾಜರಿದ್ದ ಸದಸ್ಯರು ಪಟ್ಟಣದ ಸಮಸ್ಯೆಗಳ ಬಗ್ಗೆ ಚರ್ಚಿಸಿದರು.

ಪಟ್ಟಣದ ಪುರಸಭೆಯಿಂದ ಸರ್ಕಾರಿ ಸೌಲಭ್ಯ ದಡಿ ಕೇವಲ 21 ಸಾವಿರ ರೂ.ಗಳಿಗೆ 3 ಎಕರೆ ಜಮೀನನ್ನು ಪಡೆದಿರುವ ಗ್ರಾಮ ಭಾರತಿ ಶಿಕ್ಷಣ ಸಂಸ್ಥೆ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡದೇ, ಸಾಕಷ್ಟು ಡೊನೇಷನ್ ವಸೂಲಿ ಮಾಡುತ್ತಿದೆ. ಪುರಸಭಾ ಸದಸ್ಯರು ಶಿಫಾರಸ್ಸು ಮಾಡುವ ಒಬ್ಬ ಬಡ ವಿದ್ಯಾರ್ಥಿಗೆ ಉಚಿತ ಪ್ರವೇಶ ನೀಡದೇ ಸರ್ವಾಧಿಕಾರಿಯಂತೆ ವರ್ತಿಸುತ್ತಿದೆ. ಹೀಗಾಗಿ ಶಿಕ್ಷಣ ಸಂಸ್ಥೆಗೆ ನೋಟೀಸ್ ಜಾರಿ ಮಾಡಿ ತಾವು ನಿವೇಶನ ಪಡೆದ ಉದ್ದೇಶದಂತೆ ಶಿಕ್ಷಣ ಸಂಸ್ಥೆಯಲ್ಲಿ ಬಡ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಕ್ರಮ ವಹಿಸಬೇಕು. ಜೊತೆಗೆ ಪುರಸಭೆ ಸದಸ್ಯರು ಶಿಫಾರಸ್ಸು ಮಾಡಿದ ಬಡ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವಂತೆ ಖಡಕ್ ಆದೇಶ ಹೊರಡಿಸಬೇಕು ಎಂದು ಪುರಸಭಾ ಅಧ್ಯಕ್ಷರನ್ನು ಸದಸ್ಯರು ಒತ್ತಾಯಿಸಿದರು.

ಪಟ್ಟಣದ ಟೌನ್ ಕ್ಲಬ್ ಆಡಳಿತ ಮಂಡಳಿ ದಲಿತ ವಿರೋಧಿ ನೀತಿ ಅನುಸರಿಸುತ್ತಿದ್ದು, ಪುರಸಭೆಯಿಂದ ರಿಯಾಯಿತಿ ದರದಲ್ಲಿ ನಿವೇಶನ ಪಡೆದು ಕಾನೂನು ಬಾಹಿರ ಕೃತ್ಯಗಳನ್ನು ನಡೆಸುತ್ತಿದೆ ಎಂದು ಸದಸ್ಯರಾದ ಡಿ.ಪ್ರೇಮಕುಮಾರ್, ಬಿ.ಎಸ್.ಗಿರೀಶ್, ಸಂತೋಷ್ ಕುಮಾರ್ ಆರೋಪಿಸಿದರು. ಅಲ್ಲದೇ ಕ್ರಿಶ್ಚಿಯನ್ನರು, ಬಡವರು ಹೆಚ್ಚಾಗಿ ವಾಸವಿರುವ 17ನೇ ವಾರ್ಡ್‌ನಲ್ಲಿ ವೈನ್ ಶಾಪ್ ಆರಂಭಿಸಲು ಮುಂದಾಗಿದೆ. ಟೌನ್ ಕ್ಲಬ್ ವಿರುದ್ಧ ಕಾನೂನು ಕ್ರಮಕ್ಕೆ ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವಂತೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಹೇಮಾವತಿ ಬಡಾವಣೆ ನಿವೇಶನಗಳ ಸಮಸ್ಯೆಗೆ ಸಚಿವ ಡಾ.ನಾರಾಯಣಗೌಡರ ನೇತೃತ್ವದಲ್ಲಿ ಪರಿಹಾರ ಕಂಡುಕೊಳ್ಳಲಾಗಿದ್ದು, ಮೊದಲ ಹಂತವಾಗಿ 590 ನಿವೇಶನಗಳ ಕಂದಾಯ ಕಟ್ಟಿಸಿಕೊಂಡು, ಸಕ್ರಮಗೊಳಿಸಿ ಖಾತೆ ಮಾಡಿ ಇ–ಸ್ವತ್ತು ಮಾಡಿಕೊಡಲು ಕ್ರಮ ಕೈಗೊಳ್ಳಲಾಗಿದೆ. ಬುಧವಾರ ಪಟ್ಟಣದ ಹೇಮಾವತಿ ಬಡಾವಣೆಯ ಗಣಪತಿ ಪಾರ್ಕ್‌ನಲ್ಲಿ ಬಡಾವಣೆ ನಿವಾಸಿಗಳ ಸಭೆ ನಡೆಸಿ ಖಾತೆ ಮಾಡಿರುವ 60ಕ್ಕೂ ಹೆಚ್ಚು ಜನರಿಗೆ ಇ–ಸ್ವತ್ತು ವಿತರಿಸಲಾಗುವುದು ಎಂದು ಸಭೆಗೆ ಪುರಸಭಾಧ್ಯಕ್ಷರು ಸಭೆಗೆ ಮಾಹಿತಿ ನೀಡಿದರು.

ಸದಸ್ಯರಾದ ಕೆ.ಸಿ.ಮಂಜುನಾಥ್, ಡಿ.ಪ್ರೇಮಕುಮಾರ್ ಮತ್ತು ಕೆ.ಎಸ್.ಸಂತೋಷ್ ಕುಮಾರ್ ಮಾತನಾಡಿ, ಸರ್ಕಾರ ಒಂದನೇ ಹಂತದಲ್ಲಿ ಸಕ್ರಮಗೊಳಿಸಲು ಆದೇಶಿಸಿರುವ ನಿವೇಶನಗಳ ಜೊತೆಗೆ ನೂರುಲ್ಲಾ ಖಾನ್, ಕೆ.ಬಿ.ಚಂದ್ರಶೇಖರ್ ಮತ್ತು ಅಮೀರ್ ಜಾನ್ ಅವರ ಅವಧಿಯಲ್ಲಿ ವಿತರಿಸಿರುವ ನಿವೇಶನಗಳಿಗೂ ಕಂದಾಯ ಕಟ್ಟಿಸಿಕೊಂಡು ಖಾತೆ, ಇ–ಸ್ವತ್ತು ಮಾಡಿಕೊಡಬೇಕು ಒತ್ತಾಯಿಸಿದರು. ಪಟ್ಟಣದ ವಿವಿಧ ಬಡಾವಣೆಯಲ್ಲಿ ಖಾಲಿ ಉಳಿದಿರುವ ನಿವೇಶನಗಳನ್ನು ಅಂಗನವಾಡಿ ಕಟ್ಟಡ ನಿರ್ಮಿಸಲು ಉಚಿತವಾಗಿ ನೀಡುವುದು. ಪುರಸಭಾ ವಾಣಿಜ್ಯ ಮಳಿಗೆಗಳನ್ನು ಮರು ಹರಾಜು ಮಾಡುವುದು. ರಾಜ್ಯ ಸರ್ಕಾರಿ ನೌಕರರ ಸಂಘ, ಕನ್ನಡ ಸಾಹಿತ್ಯ ಪರಿಷತ್ತಿಗೆ ಸಹಾಯಧನ ನೀಡುವುದು ಸೇರಿದಂತೆ ಪತ್ರಕರ್ತರ ಮಕ್ಕಳಿಗೆ ಲ್ಯಾಪ್‌ಟಾಪ್ ನೀಡಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯಲ್ಲಿ ಪುರಸಭಾ ಉಪಾಧ್ಯಕ್ಷೆ ಗಾಯಿತ್ರಿ, ಮುಖ್ಯಾಧಿಕಾರಿ ಬಸವರಾಜು, ವ್ಯವಸ್ಥಾಪಕ ಸೋಮಶೇಖರ್, ಸದಸ್ಯರಾದ ಕೆ.ಸಿ.ಮಂಜುನಾಥ್, ಡಿ.ಪ್ರೇಮಕುಮಾರ್, ಕೆ.ಎಸ್.ಸಂತೋಷ್‌ಕುಮಾರ್, ಹೆಚ್.ಡಿ.ಅಶೋಕ್, ಪ್ರಮೋದ್, ಕೆಎನ್.ಮಹೇಶ್, ಕೆ.ಎಸ್.ರಾಜೇಶ್, ಕೆ.ಆರ್.ನೀಲಕಂಠ, ಶುಭಾ, ಪಂಕಜಾ, ಸೌಭಾಗ್ಯ, ಸುಗುಣ, ಕಲ್ಪನಾ, ಶೋಭಾ, ಇಂದ್ರಾಣಿ, ಖಮ್ಮರ್‌ಬೇಗಂ ಇದ್ದರು.

ಕುಡಿಯುವ ನೀರು ಪೂರೈಸುವ ಯೋಜನೆಗಳು ಶೀಘ್ರ ಕಾರ್ಯಗತ; ಸಂಸದ ಪ್ರತಾಪ್ ಸಿಂಹ



ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಡಾ.ಅಜಯ್ ನಾಗಭೂಷಣ್ ಅವರೊಂದಿಗೆ ವಿವಿಧ ಯೋಜನೆ ಸಂಬಂಧ ಸಂಸದ ಪ್ರತಾಪ್ ಸಿಂಹ ಚರ್ಚಿಸುತ್ತಿರುವುದನ್ನು ಕಾಣಬಹುದು.

ಮೈಸೂರು, ಮಾ.27 (ಪಿಎಂ)– ಮೈಸೂರು ಮತ್ತು ಕೊಡಗು ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಅಮೃತ್–2 ಯೋಜನೆಯಡಿ ಕುಡಿಯುವ ನೀರು ಪೂರೈಸುವ ಯೋಜನೆಗಳನ್ನು ಶೀಘ್ರದಲ್ಲಿ ಕಾರ್ಯಗತಗೊಳಿಸಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಈ ಸಂಬಂಧ ಪ್ರಕಟಣೆ ನೀಡಿರುವ ಅವರು, ಬೋಗಾದಿ, ರಮ್ಮನಹಳ್ಳಿ, ಕಡಕೊಳ ಹಾಗೂ ಕುಶಾಲನಗರ, ಹುಣಸೂರು, ಪಿರಿಯಾಪಟ್ಟಣಕ್ಕೆ ಪ್ರಧಾನಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆಯ ಅಮೃತ್–2 ಯೋಜನೆಯಿಂದ ಕುಡಿಯುವ ನೀರು ಪೂರೈಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಡಾ.ಅಜಯ್ ನಾಗಭೂಷಣ್ ಅವರೊಂದಿಗೆ ಚರ್ಚಿಸಿರುವುದಾಗಿ ಅವರು ತಿಳಿಸಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಮುಡಾ ಬಡಾವಣೆಗಳಿಗೆ ಕಬಿನಿಯಿಂದ 120 ಎಂಎಲ್‌ಡಿ ನೀರು ಪೂರೈಸುವ ಯೋಜನೆಗೆ ಮುಂದಿನ ಕ್ಯಾಬಿನೆಟ್ ಸಭೆಯಲ್ಲಿ ಅನುಮೋದನೆ ಪಡೆಯುವ ಪ್ರಯತ್ನ ಮಾಡುತ್ತಿದ್ದೇನೆ. ವಿದ್ಯಾರಣ್ಯಪುರಂನಲ್ಲಿರುವ 7 ಲಕ್ಷ ಟನ್ ಕಸಕ್ಕೆ ಮುಕ್ತಿ ನೀಡುವ 58 ಕೋಟಿ ರೂ. ಯೋಜನೆಗೆ ಇನ್ನೆರಡು ದಿನಗಳಲ್ಲಿ ಅನುಮೋದನೆ ದೊರೆಯಲಿದೆ ಎಂದು ಅವರು ಹೇಳಿದ್ದಾರೆ.

ಏ.2ರಂದು ಬೆಂಗಳೂರಲ್ಲಿ ಶೋಷಿತರ ಸಂಕಲ್ಪ ಸಮಾವೇಶ



ಮೈಸೂರು,ಮಾ.27(ಪಿಎಂ)– ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ವತಿಯಿಂದ ಏ.2ರಂದು ಬೆಂಗಳೂರು ಅರಮನೆ ಮೈದಾನದಲ್ಲಿ 'ಶೋಷಿತರ ಸಂಕಲ್ಪ ಸಮಾವೇಶ' ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ.ರಾಮಚಂದ್ರಪ್ಪ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶೋಷಿತರ ಸಂಕಲ್ಪ ಸಮಾವೇಶ ಕುರಿತಂತೆ ಸೋಮವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಅಂದು ಮಧ್ಯಾಹ್ನ 1 ಗಂಟೆಗೆ ಸಮಾವೇಶ ನಡೆಯಲಿದೆ. ಇಂದು ಆಡಳಿತ ನಡೆಸುತ್ತಿರುವ ಸರ್ಕಾರಗಳು ದಲಿತರು, ಹಿಂದುಳಿದವರು, ಆದಿವಾಸಿ, ಅಲೆಮಾರಿ, ಅಲ್ಪಸಂಖ್ಯಾತರ ಹಕ್ಕುಗಳನ್ನು ಮೊಟಕುಗೊಳಿಸುತ್ತಿವೆ. ಈ ಎಲ್ಲಾ ಸಮುದಾಯಗಳು ಮರಳಿ ಹಕ್ಕುಗಳನ್ನು ಪಡೆಯಬೇಕಾದರೆ ಜಾಗೃತಿ, ಹೋರಾಟ ಅಗತ್ಯ ಎಂಬ ಬಗ್ಗೆ ಅರಿವು ಮೂಡಿಸಲು ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದರು.

ಉರಿಗೌಡ ಮತ್ತು ನಂಜೇಗೌಡ ಎಂಬ ಕಾಲ್ಪನಿಕ ಪಾತ್ರಗಳನ್ನು ಒಬ್ಬ ಮಂತ್ರಿ ಪ್ರಸ್ತಾಪಿಸಿ, ಅವರು ಟಿಪ್ಪು ಹೊಡೆದಂತೆ ವಿಪಕ್ಷ ನಾಯಕ ಸಿದ್ದರಾಮಯ್ಯರನ್ನು ಹೊಡೆಯಬೇಕೆಂದು ಬಹಿರಂಗ ಹೇಳಿಕೆ ನೀಡಿದ್ದಾರೆ. ಈ ರೀತಿಯ ಮಾತನಾಡುವ ವ್ಯಕ್ತಿಗಳ ವಿರುದ್ಧ ಕೈಕಟ್ಟಿ ಕುಳಿತುಕೊಳ್ಳದೇ ತಳ ಸಮುದಾಯಗಳ ಪರವಾಗಿರುವ ನಾಯಕರನ್ನು ಬೆಂಬಲಿಸಬೇಕೆಂಬ ಸಂದೇಶ ನೀಡಲಾಗುವುದು ಎಂದು ಹೇಳಿದರು.

ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಜನತೆಯನ್ನು ಸಂಘಟಿಸಿ ಸಮಾವೇಶದಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದೆ. ಚುನಾವಣೆ ಹತ್ತಿರಕ್ಕೆ ಬರುತ್ತಿದ್ದು, ಪ್ರಸ್ತುತ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಸಂಪೂರ್ಣವಾಗಿ ಹಿಂದುಳಿದವರು, ದಲಿತರು ಹಾಗೂ ಅಲ್ಪಸಂಖ್ಯಾತರ ವಿರೋಧಿಯಾಗಿದೆ. ಹಾಗಾಗಿ ತಳ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಪೂರಕವಾಗಿ ಆಡಳಿತ ನೀಡುವ ಪಕ್ಷವನ್ನು ಅಧಿಕಾರಕ್ಕೆ ತರಬೇಕಿದೆ. ಈ ನಿಟ್ಟಿನಲ್ಲಿ ಜನಜಾಗೃತಿಗಾಗಿ ಈ ಸಮಾವೇಶ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿ, ರಾಜ್ಯದಲ್ಲಿ ಶೇ.70ರಷ್ಟು ತಳ ಮತ್ತು ಶೋಷಿತ ಸಮುದಾಯಗಳಿವೆ. ಆದರೆ ಅದಕ್ಕೆ ಪೂರಕವಾಗಿ ರಾಜಕೀಯ ಸ್ಥಾನಮಾನವನ್ನು ಈ ಸಮಾಜಗಳು ಹೊಂದಿಲ್ಲ. ಕಾರ್ಯಾಂಗದಲ್ಲೂ ಸ್ಥಾನಮಾನ ಕಡಿಮೆಯೇ. ಆದ್ದರಿಂದ ಈ ಸಮುದಾಯಗಳಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಲು ಮುಂದಾಗಿದ್ದು, ಮೈಸೂರು–ಚಾಮರಾಜನಗರ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನತೆ ಸಮಾವೇಶದಲ್ಲಿ ಭಾಗವಹಿಸಬೇಕೆಂದು ಕೋರಿದರು. ಹಲವು ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಏ.22ರಿಂದ ಹೊರನಾಡಿನಲ್ಲಿ ಸ್ವರ್ಣ ಮಹೋತ್ಸವ, ಬ್ರಹ್ಮಕುಂಭಾಭಿಷೇಕ

ಮೈಸೂರು,ಮಾ.27–ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ಪುನಃ ಪ್ರತಿಷ್ಠಾ ಸ್ವರ್ಣಮಹೋತ್ಸವ ಹಾಗೂ ಬ್ರಹ್ಮಕುಂಭಾಭಿಷೇಕ ಏ.22ರಿಂದ 29ರವರೆಗೆ ಹೊರನಾಡಿನಲ್ಲಿ ನಡೆಯಲಿದ್ದು, ಅದರ ಮಾಹಿತಿ ಆಹ್ವಾನದ ಪ್ರಚಾರ ಸಾಮಗ್ರಿಗಳನ್ನು ಮೈಸೂರಿನ ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರದಲ್ಲಿ ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮಕರ್ತರಾದ ಜಿ.ಭೀಮೇಶ್ವರ ಜೋಷಿ ಬಿಡುಗಡೆ ಮಾಡಿದರು.

ಜಿ.ಭೀಮೇಶ್ವರ ಜೋಷಿ ಮಾತನಾಡಿ, ಆದಿ ಶಕ್ತ್ಯಾತ್ಮಕ ಅನ್ನಪೂರ್ಣೇಶ್ವರಿ ತಾಯಿ ನೆಲೆಸಿರುವ ಶ್ರೀ ಕ್ಷೇತ್ರ ಹೊರನಾಡಿನಲ್ಲಿ ಏ.22ರಿಂದ 29ರವರೆಗೆ ಒಂದು ವಾರ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ಪುನಃ ಪ್ರತಿಷ್ಠಾ ಸ್ವರ್ಣಮಹೋತ್ಸವ ಹಾಗೂ ಬ್ರಹ್ಮಕುಂಭಾಭಿಷೇಕ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಬಹುಮುಖ್ಯವಾಗಿ ದೇವರ ರಥೋತ್ಸವ, ರಜತ ತಾಮ್ರ ಕಲಶ ಸೇವೆ, ಶ್ರೀ ಮಹಾಗಣಪತಿ ನವಗ್ರಹ ರುದ್ರ ಹೋಮ, ಲಲಿತಾ ಮೂಲ ಮಂತ್ರದ ಹೋಮ, ಶ್ರೀ ಅನ್ನಪೂರ್ಣ ಮೂಲ ಮಂತ್ರದ ಹೋಮ ಸಹಸ್ರ ಚಂಡಿಕಾ ಯಾಗ, ನಿತ್ಯ ಅನ್ನದಾನ ಸೇವೆ, ಕೋಟಿ ಕುಂಕುಮಾರ್ಚನೆ ಸೇವೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ (ಹೆಚ್ಚಿನ ಮಾಹಿತಿಗಾಗಿ 9945266832 ಆಸಕ್ತ ಭಕ್ತರು ಸಂಪರ್ಕಿಸಬಹುದಾಗಿದೆ) ಎಂದರು.

ಶಾಶ್ವತಿ ಧಾರ್ಮಿಕ ಕ್ರಿಯಾ ಸಮಿತಿ ಶ್ರೀರಂಗಪಟ್ಟಣದ ವೇದಬ್ರಹ್ಮ ಭಾನುಪ್ರಕಾಶ್ ಶರ್ಮ ಮಾತನಾಡಿ, 50 ವರ್ಷಗಳ ಬಳಿಕ ಪುಣ್ಯಕ್ಷೇತ್ರ ಹೊರನಾಡು ಅನ್ನಪೂರ್ಣೇಶ್ವರಿ ದೇವಾಲಯದಲ್ಲಿ ನಡೆಯುತ್ತಿರುವ ಪುನಃ ಪ್ರತಿಷ್ಠಾಪಿಸಿ ಸ್ವರ್ಣ ಮಹೋತ್ಸವ ಬ್ರಹ್ಮ ಕುಂಭಾಭಿಷೇಕ ಕಾರ್ಯಕ್ರಮದಲ್ಲಿ ಭಕ್ತರು ತಮ್ಮ ಹರಕೆ ಸೇವೆ ಸಲ್ಲಿಸಲು ಒಂದು ಒಳ್ಳೆಯ ಸಮಯವಾಗಿದೆ. ಅನ್ನದಾನಕ್ಕೆ ಬೇಕಾಗುವ ಅಡುಗೆ ಸಾಮಗ್ರಿಗಳನ್ನು ನಿಮ್ಮ ಊರಿನಿಂದಲೇ ತಾವು ಇಚ್ಛೆ ಪಟ್ಟಲ್ಲಿ ತಂದು ಸಲ್ಲಿಸಬಹುದಾಗಿದೆ. ಹೊರನಾಡು ಅನ್ನಪೂರ್ಣೇಶ್ವರಿಗೆ ಪ್ರಪಂಚದಾದ್ಯಂತ ಭಕ್ತರಿದ್ದು, ಭಕ್ತರು ಸಲ್ಲಿಸುವ ಹರಕೆ ಸಾಮಗ್ರಿಗಳ ಮೂಲಕ ನೈವೇದ್ಯ ಮಾಡುವುದು ವಿಶೇಷ ಎಂದರು.


ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಮಾತನಾಡಿ, ಹೊರನಾಡಿನಲ್ಲಿ ನಡೆಯುತ್ತಿರುವ ಬ್ರಹ್ಮಕುಂಭಾಭಿಷೇಕ ಕಾರ್ಯಕ್ರಮದಲ್ಲಿ ಸ್ವಯಂಸೇವಕರು ತಮ್ಮ ಸೇವೆಯನ್ನು ವಿವಿಧ ಹಂತದಲ್ಲಿ ಸಲ್ಲಿಸಬಹುದು. ಈ ಬಾರಿ ಮೈಸೂರಿಂದ ಹೊರಸೇವೆ ಸಲ್ಲಿಸುವ ಭಕ್ತಾದಿಗಳು ನೀಡುವ ಸಾಮಗ್ರಿಗಳನ್ನು ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರಕ್ಕೆ ತಂದುಕೊಡಬಹುದಾಗಿದೆ ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ರಾಘವೇಂದ್ರ ಭಟ್, ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್‌ಶಾಸ್ತ್ರಿ, ವಿಜಯ್‌ಕುಮಾರ್, ವಿದ್ಯಾಶಂಕರ್, ಕಡಕೊಳ ಜಗದೀಶ್, ವಿಶ್ವನಾಥ್, ರಂಗನಾಥ್, ಸುಚೀಂದ್ರ, ಪ್ರಶಾಂತ್, ಲಕ್ಷ್ಮಿ ದೇವಿ, ಸೌಭಾಗ್ಯ ಮೂರ್ತಿ, ಹರೀಶ್, ನಾಗಶ್ರೀ, ಸುಮ, ಇನ್ನಿತರರಿದ್ದರು.



ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಡೆಯಲಿರುವ ಧಾರ್ಮಿಕ ಕಾರ್ಯಕ್ರಮಗಳ ಮಾಹಿತಿ ಭಿತ್ತಿಪತ್ರವನ್ನು ಜಿ.ಭೀಮೇಶ್ವರ ಜೋಷಿ ಬಿಡುಗಡೆ ಮಾಡಿದರು.

ಕುಲಕಸುಬು ಆಧಾರಿತ ಸಮುದಾಯಗಳಿಗೆ ಒಳಮೀಸಲಾತಿ ಕಲ್ಪಿಸಿ

'ಪ್ರವರ್ಗ-2ಎ'ಯಲ್ಲಿ ಆದಾಯ ಮಿತಿ ಕೈಬಿಡಲೂ ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ ಒತ್ತಾಯ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ ಮಾತನಾಡಿದರು.

ಮೈಸೂರು,ಮಾ.27(ಪಿಎಂ)– ಹಿಂದುಳಿದ ವರ್ಗಗಳ 'ಪ್ರವರ್ಗ–2ಎ' ಪಟ್ಟಿಯಲ್ಲಿರುವ ಕುಲಕಸುಬು ಆಧಾರಿತ ಸಣ್ಣ ಸಣ್ಣ ಸಮುದಾಯಗಳಿಗೆ ಒಳಮೀಸಲಾತಿ ನೀಡಬೇಕು. ಈ ನಿಟ್ಟಿನಲ್ಲಿ ಪುನರ್ ವರ್ಗೀಕರಣ ಮಾಡುವ ಜೊತೆಗೆ ಆದಾಯದ ಮಿತಿಯಿಂದ ವಿನಾಯಿತಿ ನೀಡಬೇಕೆಂದು ಕಾಯಕ ಸಮಾಜಗಳ ನಾಯಕರೂ ಆದ ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ (ಮೈಲ್ಯಾಕ್) ಅಧ್ಯಕ್ಷ ಆರ್.ರಘು ಕೌಟಿಲ್ಯ ಸರ್ಕಾರಕ್ಕೆ ಒತ್ತಾಯಪೂರ್ವಕ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಬಹುಜನರ ಬೇಡಿಕೆಗಳನ್ನು ಪರಿಗಣಿಸಿ ಮೀಸಲಾತಿ ಪರಿಷ್ಕರಣೆ ಮಾಡಿದೆ. ಆ ಮೂಲಕ ಕೆಲ ವರ್ಗಗಳ ಬೇಡಿಕೆಗಳನ್ನು ಮಾನ್ಯ ಮಾಡಿದ್ದು, ಇದನ್ನು ಸ್ವಾಗತಿಸುತ್ತೇನೆ. ಅದೇ ರೀತಿಯಲ್ಲಿ 'ಪ್ರವರ್ಗ–2ಎ' ಪಟ್ಟಿಯಲ್ಲಿರುವ ಕುಲಕಸುಬು ಆಧಾರಿತ ಸಣ್ಣ ಸಣ್ಣ ಸಮುದಾಯಗಳಿಗೆ ಒಳಮೀಸಲಾತಿ ನೀಡಬೇಕು ಎಂದು ಆಗ್ರಹಿಸಿದರು.

ಪ್ರವರ್ಗ 2ಎ ಪಟ್ಟಿ ಸಂಬಂಧ ಶೇ.15ರಷ್ಟು ಮೀಸಲಾತಿ ಇದ್ದು, ಪುನರ್ ವರ್ಗೀಕರಣದ ಮೂಲಕ ಒಳಮೀಸಲಾತಿ ನೀಡಿ ಆದಾಯದ ಮಿತಿ ಕೈಬಿಡಬೇಕು. ಅನೇಕ ಕುಲಕಸುಬು ಆಧಾರಿತ ಸಣ್ಣ ಸಮುದಾಯಗಳಿರುವ ಪ್ರವರ್ಗ 1ಕ್ಕೆ ಶೇ.4ರಷ್ಟು ಮೀಸಲಾತಿ ಇದ್ದು, ಇದರ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಬೇಕು. ಈ ಎಲ್ಲದರ ಸಂಬಂಧ ಸರ್ಕಾರ ಕೂಡಲೇ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಸಣ್ಣ ಸಮುದಾಯಗಳಿಗೆ ಮೀಸಲಾತಿ ಕೇವಲ ಇದ್ದಂತೆ ಇದೆ ಹೊರತು ಯಾವುದೇ ಸವಲತ್ತು ದಕ್ಕುತ್ತಿಲ್ಲ. ಪ್ರವರ್ಗ 2ಎ ಪಟ್ಟಿಯಲ್ಲಿ ಸುಮಾರು 202 ಜಾತಿ ಇದ್ದು, ಈ ಪೈಕಿ 150 ಜಾತಿಗಳಿಗೆ ಇಂದಿನವರೆಗೂ ಕೆಪಿಎಸ್‌ಸಿ ಇತಿಹಾಸದಲ್ಲಿ ಒಂದು ಉದ್ಯೋಗ ಸಿಕ್ಕಿಲ್ಲ. ಕೆಲವು ಸಂಘಟಿತ ಜಾತಿಗಳಿಗೆ ಮಾತ್ರ 'ಪ್ರವರ್ಗ 2ಎ' ಪಟ್ಟಿಯ ಶೇ.15ರಷ್ಟು ಮೀಸಲಾತಿಯ ಸಿಂಹಪಾಲು ದೊರೆಯುತ್ತಿದೆ. ಆದರೆ ಸಣ್ಣ ಸಣ್ಣ ಜಾತಿಗಳಿಗೆ ಮೀಸಲಾತಿ ಸೌಲಭ್ಯ ದೊರೆಯುತ್ತಿಲ್ಲ ಎಂದರು.

ಪ್ರಜಾಪ್ರಭುತ್ವ ಜಾರಿಯಾದ ದಿನದಿಂದ ಇಂದಿನವರೆಗೆ ಪ್ರವರ್ಗ 2ಎ ಪಟ್ಟಿಯಲ್ಲಿರುವ 202 ಜಾತಿಗಳಲ್ಲಿ 23 ಜಾತಿಗಳಷ್ಟೇ ವಿಧಾನ ಸೌಧದ ಮುಖ ನೋಡಿವೆ. ಸಂವಿಧಾನದ ಆಶಯ ಈ ಸಣ್ಣ ಜಾತಿಗಳ ವಿಚಾರದಲ್ಲಿ ಈಡೇರಿಲ್ಲ. ತಮ್ಮ ಹಕ್ಕು ಕೇಳುವ ಜಾಗೃತಿ ಕೂಡ ಈ ಸಮುದಾಯಗಳಿಗೆ ಇಲ್ಲ ಎಂದು ಹೇಳಿದರು.

ನಮ್ಮ ಸಣ್ಣ ಸಮುದಾಯಗಳು ತಮ್ಮ ಕುಲಕಸುಬು ಮೂಲಕ ಶತಶತಮಾನದಿಂದ ಇಡೀ ಸಮಾಜದ ಜನಜೀವನಕ್ಕೆ ಸೇವೆ ನೀಡುತ್ತಿವೆ. ತಲತಲಾಂತರದಿಂದ ಕುಲಕಸುಬಿನಿಂದ ಬದುಕು ಮಾಡುತ್ತಿದ್ದ ಸಣ್ಣ ಸಣ್ಣ ಸಮುದಾಯಗಳು ಜಮೀನು ಮಾಡಿಕೊಳ್ಳಲು ಮುಂದಾಗಲಿಲ್ಲ. ಇದೀಗ ಆಧುನಿಕತೆ, ತಂತ್ರಜ್ಞಾನದ ಹೊಡೆತಕ್ಕೆ ಸಿಲುಕಿ ತಮ್ಮ ಕಸುಬು ಕಳೆದುಕೊಳ್ಳುತ್ತಿವೆ. ಉದ್ಯೋಗ, ಶಿಕ್ಷಣ ಇಲ್ಲದೆ ಅನಾಥಪ್ರಜ್ಞೆ ಎದುರಿಸುತ್ತಿವೆ. ಆ ಮೂಲಕ ಸಾಮಾಜಿಕ ನ್ಯಾಯ ಎಂಬುದು ಈ ಸಮುದಾಯಗಳಿಗೆ ಕೇವಲ ಕನಸಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರವರ್ಗ 1ರಲ್ಲಿ 95 ಜಾತಿಗಳಿದ್ದು, ಶೇ.4ರಷ್ಟು ಮೀಸಲಾತಿ ನೀಡಲಾಗಿದೆ. ಇದರಲ್ಲಿ 45 ಅಲೆಮಾರಿ ಸಮುದಾಯಗಳೇ ಇವೆ. ಈ ಸಮುದಾಯಗಳಿಗೆ ಕೇವಲ ಶೇ.4ರಷ್ಟು ಮೀಸಲಾತಿ ಸಿಕ್ಕಿರುವುದು ನ್ಯಾಯವೇ? ಆದಾಗ್ಯೂ ಒಂದು ಅನುಕೂಲವೆಂದರೆ ಇದರಲ್ಲಿ ಕೆನೆಪದರ ಇಲ್ಲ (ವಾರ್ಷಿಕ ಆದಾಯದ ಮಿತಿ ಇಲ್ಲ). ಆದರೆ 'ಪ್ರವರ್ಗ 2ಎ' ಪಟ್ಟಿಗೆ 8 ಲಕ್ಷ ಆದಾಯದ ಮಿತಿ ನಿಗದಿ ಮಾಡಲಾಗಿದೆ. ಇದನ್ನು ಕೈಬಿಡಬೇಕು ಎಂದರು.

ಕುಲಕಸುಬು ಆಧಾರಿತ ಸಮುದಾಯಗಳಿಗೆ ಆರ್ಥಿಕ, ಔದ್ಯೋಗಿಕ, ಶೈಕ್ಷಣಿಕ ಸೇರಿದಂತೆ ಎಲ್ಲದರಲ್ಲೂ ಹಕ್ಕು ಸಿಗಬೇಕು. ಪ್ರವರ್ಗ 2ಎ ಪಟ್ಟಿಯಲ್ಲಿರುವ 202 ಜಾತಿಗಳಲ್ಲಿ 23 ಜಾತಿಗಳು ಮಾತ್ರ ಆಗೊಮ್ಮೆ–ಈಗೊಮ್ಮೆ ವಿಧಾನಸಭೆಯ ಮುಖ ನೋಡಿವೆ. ಮಿಕ್ಕ ಸಮುದಾಯಗಳಲ್ಲಿ ಶಾಸನಸಭೆಯ ಸದಸ್ಯರೇ ಆಗಿಲ್ಲ ಎಂದರು.

ಸಿದ್ದರಾಮಯ್ಯ, ವಿಶ್ವನಾಥ್ ಬೆಂಬಲಿಸಲಿ: ಹಿಂದುಳಿದ ವರ್ಗಗಳ ಚಾಂಪಿಯನ್ ಎಂದು ಹೇಳುವ ವಿಪಕ್ಷ ನಾಯಕ ಸಿದ್ದರಾಮಯ್ಯನವರು ಈ ಬೇಡಿಕೆಗಳನ್ನು ಬೆಂಬಲಿಸಿದರೆ ಮಾತ್ರ ಅವರನ್ನು ಹಿಂದುಳಿದ ವರ್ಗಗಳ ನಾಯಕ ಎಂದು ಹೇಳಲು ಸಾಧ್ಯ ಎಂದರಲ್ಲದೆ, ಒಳಮೀಸಲಾತಿ ಬಗ್ಗೆ ನೀವೇಕೆ ಬಾಯಿ ತೆರೆಯುತ್ತಿಲ್ಲ ಎಂದು ಸಿದ್ದರಾಮಯ್ಯರನ್ನು ಪ್ರಶ್ನಿಸಿದ ಅವರು, ಎಂಎಲ್‌ಸಿ ಎ.ಹೆಚ್. ವಿಶ್ವನಾಥ್ ಅವರಿಗೂ ಈ ಪ್ರಶ್ನೆ ಹಾಕುತ್ತಿದ್ದೇನೆ. ಅವರ ಬೆಂಬಲ ಕೂಡ ಕೋರುತ್ತಿದ್ದೇನೆ ಎಂದು ಹೇಳಿದರು. ಗಾಣಿಗ ಸಮಾಜದ ಮುಖಂಡ ಉಮೇಶ್, ಕುಂಬಾರ ಸಮಾಜದ ಮುಖಂಡರಾದ ನಾಗೇಂದ್ರ, ಮಂಜು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಚಿಕ್ಕ ಮೀನುಗಳಿಗೆ ಬೇಕು ಪ್ರತ್ಯೇಕ ಅಕ್ವೇರಿಯಮ್!

ಹಿಂದುಳಿದ ವರ್ಗ ಎನ್ನುವಂತಹ ಫಿಸ್ ಅಕ್ವೇರಿಯಮ್‌ನಲ್ಲಿ ಸಣ್ಣ ಸಮುದಾಯಗಳು ಕಳೆದು ಹೋಗಿವೆ. ಫಿಸ್ ಅಕ್ವೇರಿಯಮ್‌ನಲ್ಲಿ ದೊಡ್ಡ ಮೀನು ಹಾಗೂ ಚಿಕ್ಕ ಮೀನು ಎರಡೂ ಇರುತ್ತವೆ. ಸ್ವಲ್ಪ ಆಹಾರ ಹಾಕಿದರೆ ಚಿಕ್ಕ ಮೀನುಗಳು (ಸಣ್ಣ ಸಮುದಾಯಗಳು) ತಿನ್ನಲು ಬಿಡದೇ ದೊಡ್ಡ ಮೀನುಗಳೇ ಕಬಳಿಸುತ್ತವೆ. ಎರಡು ದಿನ ಆಹಾರವನ್ನೇ ಹಾಕಿಲ್ಲವೆಂದರೆ ಚಿಕ್ಕ ಮೀನುಗಳೇ ಅವುಗಳಿಗೆ ಆಹಾರವಾಗಿ ಹೋಗುತ್ತವೆ. ಚಿಕ್ಕ ಮೀನುಗಳಿಗೆ ಪ್ರತ್ಯೇಕ ಅಕ್ವೇರಿಯಮ್ ಅಗತ್ಯ.

–ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ

ಅನಧಿಕೃತ ಬಾರ್ ಬಂದ್ ಮಾಡಿಸಲು ಆಗ್ರಹಿಸಿ ಜಿಪಂ ಕಚೇರಿ ಮುಂದೆ ಪ್ರಗತಿಪರರ ಪ್ರತಿಭಟನೆ



ಮೈಸೂರು,ಮಾ.27(ಎಂಟಿವೈ)– ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕು ಹೊಮ್ಮರಗಳ್ಳಿ ಗ್ರಾಮದಲ್ಲಿರುವ ಅನಧಿಕೃತ ಬಾರ್ ಅಂಡ್ ರೆಸ್ಟೋರೆಂಟ್ ಮುಚ್ಚಿಸಲು ಜಿಲ್ಲಾಡಳಿತ ವಿಫಲವಾಗಿದೆ ಎಂದು ಆರೋಪಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾ ಪಂಚಾಯಿತಿ ಕಚೇರಿ ಮುಂಭಾಗ ಸೋಮವಾರ ಬೆಳಗ್ಗೆ ಪ್ರಗತಿಪರ ಸಂಘಟನೆಗಳ ಒಕ್ಕೂಟ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಇನ್ನಿತರ ಸಂಘಟನೆಗಳ ಸದಸ್ಯರು ಪ್ರತಿಭಟನೆ ನಡೆಸಿ, ಅನಧಿಕೃತ ಬಾರ್ ಮುಚ್ಚಿಸಿ, ಗ್ರಾಮಸ್ಥರ ಹಿತ ಕಾಯುವಂತೆ ಆಗ್ರಹಿಸಿದರು.

ಈ ವೇಳೆ ಹಿಂದುಳಿದ ವರ್ಗಗಳ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಹೆಚ್.ಡಿ.ಕೋಟೆ ತಾಲೂಕು ಹೊಮ್ಮರಗಳ್ಳಿ ಗ್ರಾಮದಲ್ಲಿರುವ ಚಾಮುಂಡೇಶ್ವರಿ ಬಾರ್ ಅಂಡ್ ರೆಸ್ಟೋರೆಂಟ್ 16 ವರ್ಷಗಳಿಂದ ಅನಧಿಕೃತವಾಗಿ ನಡೆಸಲಾಗುತ್ತಿದೆ. ಈ ಸಂಬಂಧ ಹಲವು ಬಾರಿ ಗ್ರಾಪಂ, ತಾಪಂ, ಜಿಪಂಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಬಾರ್ ಅನಧಿಕೃತವಾಗಿ ನಡೆಯುತ್ತಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಗೊತ್ತಿದ್ದೂ ಗೊತ್ತಿಲ್ಲದಂತೆ ವರ್ತಿಸುತ್ತಿದ್ದಾರೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಪ್ರಗತಿಪರ ಸಮಾಜ ಸಮಾನ ವೇದಿಕೆ ರಾಜ್ಯಾಧ್ಯಕ್ಷ ಜಿ.ಎಂ.ಅಂದಾನಿ, ಕರ್ನಾಟಕ ರಾಜ್ಯ ನಾಯಕ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ನಾಗೇಶ್, ಮಡಿವಾಳ ಸಂಘದ ಜಿಲ್ಲಾಧ್ಯಕ್ಷ ರವಿನಂದನ್, ವಿಶ್ವಕರ್ಮ ಸಂಘದ ಜಿಲ್ಲಾಧ್ಯಕ್ಷ ಮೊಗಣ್ಣಾಚಾರ್, ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಯೋಗೇಶ್ ಉಪ್ಪಾರ್, ಕುಂಬಾರರ ಸಂಘದ ಜಿಲ್ಲಾಧ್ಯಕ್ಷ ಪ್ರಕಾಶ್, ಅಹಿಂದ ಮುಖಂಡ ಲೋಕೇಶ್ ಕುಮಾರ್, ಮಡಿವಾಳ ಮಾಚಿದೇವ ಕ್ಷೇಮಾಭಿವೃದ್ಧಿ ಸೇವಾ ಸಂಸ್ಥೆ ಅಧ್ಯಕ್ಷ ಸತ್ಯನಾರಾಯಣ ಮತ್ತಿತರರು ಪಾಲ್ಗೊಂಡಿದ್ದರು.




ಜಂಬುಪುರ ಹೋಬಳಿಯ ಮಾವಿನಹಳ್ಳಿ ಗ್ರಾಮದ ಜೈ ಭೀಮ್ ಯುವ ಬ್ರಿಗೇಡ್ ವತಿಯಿಂದ ಆಯೋಜಿಸಲಾಗಿದ್ದ ಚುಟುಕು ಕ್ರಿಕೆಟ್ ಪಂದ್ಯಾವಳಿಯ ಫೈನಲ್‌ನಲ್ಲಿ ವಿಜೇತರಾದ ಹಂಪಾಪುರ ಗ್ರಾಮದ ತಂಡಕ್ಕೆ ಪ್ರಥಮ ಬಹುಮಾನವಾಗಿ ಟ್ರೋಫಿಯ ಜೊತೆಗೆ 25 ಸಾವಿರ ರೂ. ನಗದು ಬಹುಮಾನವನ್ನು ಉದ್ಯಮಿ ಹಾಗೂ ಸಮಾಜ ಸೇವಕ ಎಸ್.ಶ್ರೀಕಾಂತ್ ನೀಡಿದರು. ರನ್ನರ್ ಅಪ್ ಮಾವಿನಹಳ್ಳಿ ತಂಡಕ್ಕೆ 10 ಸಾವಿರ ರೂ. ನಗದು ಮತ್ತು ಟ್ರೋಫಿ, ತೃತೀಯ ಸ್ಥಾನ ಪಡೆದ ಧನಗಹಳ್ಳಿ ತಂಡ 5 ಸಾವಿರ ನಗದು ಬಹುಮಾನ ಮತ್ತು ಟ್ರೋಫಿ ಪಡೆಯಿತು. ಚುಟುಕು ಕ್ರಿಕೆಟ್ ಪಂದ್ಯಾವಳಿಯ ಪ್ರಾಯೋಜಕತ್ವ ವಹಿಸಿ ಒಟ್ಟು 40 ಸಾವಿರ ರೂ. ನಗದು ಬಹುಮಾನಗಳು ಮತ್ತು 25 ಸಾವಿರ ರೂ. ಮೌಲ್ಯದ ಟ್ರೋಫಿಗಳನ್ನು ನೀಡಿದ ಎಸ್.ಶ್ರೀಕಾಂತ್ ಅವರನ್ನು ಜೈ ಭೀಮ್ ಯುವಕರ ತಂಡದ ಸದಸ್ಯರು ಅಭಿನಂದಿಸಿದರು.

ನಾಳೆ ಪ.ಮಲ್ಲೇಶ್ ಸ್ಮರಣಾರ್ಥ ವಿಚಾರ ಸಂಕಿರಣ



ಮೈಸೂರು,ಮಾ.27(ಎಂಟಿವೈ)–ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಮಾ.29ರಂದು ಬೆಳಗ್ಗೆ 10.30ಕ್ಕೆ ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಹಿರಿಯ ಹೋರಾಟಗಾರ ಪ.ಮಲ್ಲೇಶ್ ಸ್ಮರಣಾರ್ಥ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ ಎಂದು ಸಂಘದ ಉಪಾಧ್ಯಕ್ಷ ಸ.ರ.ಸುದರ್ಶನ್ ತಿಳಿಸಿದ್ದಾರೆ.



ಪ.ಮಲ್ಲೇಶ್

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಭಾಗದಲ್ಲಿ ಅನೇಕ ಹೋರಾಟಗಳಲ್ಲಿ ಪಾಲ್ಗೊಂಡು ತನ್ನದೇ ಆದ ಘನತೆಯನ್ನು ಎತ್ತಿ ಹಿಡಿದಿದ್ದ ಪ.ಮಲ್ಲೇಶ್ ಅವರು ಇಂದಿಗೂ ಅನೇಕರಿಗೆ ಸ್ಫೂರ್ತಿಯಾಗಿದ್ದಾರೆ. ಅವರ ನಿಧನದಿಂದಾಗಿ ಚಳುವಳಿಗೆ ಹಿನ್ನಡೆಯಾದಂತಾಗಿದೆ. ಈ ನಿಟ್ಟಿನಲ್ಲಿ ಅಪ್ರತಿಮ ಹೋರಾಟಗಾರರನ್ನು ಸ್ಮರಿಸಲು ವಿಚಾರ ಸಂಕಿರಣ ಆಯೋಜಿಸಲಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ಸವಿತಾ ಮಲ್ಲೇಶ್ ಪ್ರಾಸ್ತಾವಿಕ ಭಾಷಣ ಮಾಡಲಿದ್ದಾರೆ. ಸಂಸ್ಥೆಯ ಕಾರ್ಯದರ್ಶಿ ಪ್ರೊ.ಹೆಚ್.ಜಿ.ಕೃಷ್ಣಪ್ಪ ಅವರು 'ನೃಪತುಂಗ ಶಿಕ್ಷಣ ಸಂಸ್ಥೆ ಮತ್ತು ಪ.ಮಲ್ಲೇಶ್' ವಿಷಯ ಕುರಿತು ಮಾತನಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಪತ್ರಕರ್ತ ಡಿ.ಉಮಾಪತಿ ಸಾಮಾಜಿಕ ಚಳವಳಿಗಳ ವರ್ತಮಾನದ ಸವಾಲುಗಳು' ಹಾಗೂ ದಿನೇಶ್ ಅಮೀನ್ ಮಟ್ಟು ಅವರು 'ನಾ ಕಂಡಂತೆ ಪ.ಮಲ್ಲೇಶ್ ಹೋರಾಟ ಮತ್ತು ಬದುಕು' ವಿಷಯ ಕುರಿತು ಮಾತನಾಡಲಿದ್ದಾರೆ. ಇದೇ ವೇಳೆ ಪ.ಮಲ್ಲೇಶ್– ಒಡನಾಟದ ಕುರಿತು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಿಧಾನಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಪ್ರೊ. ಮುಜಾಫರ್ ಅಸ್ಸಾದಿ, ಅಂಕಣಕಾರ್ತಿ ಪದ್ಮಾ ಶ್ರೀರಾಮ್, ಲೇಖಕ ನಾ.ದಿವಾಕರ ಮಾತನಾಡಲಿದ್ದಾರೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಪ್ರೊ.ಎಚ್.ಜಿ.ಕೃಷ್ಣಪ್ಪ, ಕಾರ್ಯದರ್ಶಿ ಸವಿತಾ ಪಿ.ಮಲ್ಲೇಶ್, ಖಜಾಂಚಿ ನಾ. ದಿವಾಕರ, ಸಹ ಕಾರ್ಯದರ್ಶಿ ಆರ್.ಶೀಲಾ ಉಪಸ್ಥಿತರಿದ್ದರು.

ಏ.5ರಿಂದ ಚಿತ್ರಕಲಾ ಶಿಬಿರ



ಮೈಸೂರು,ಮಾ.27–ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಚಿತ್ರಕಲಾ ಶಿಬಿರವನ್ನು ಏ.5ರಿಂದ 26ರವರೆಗೆ, ಡಾ.ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿರುವ ಜೆಎಸ್‌ಎಸ್ ಬಾಲಜಗತ್‌ನಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 9ರಿಂದ ಮಧ್ಯಾಹ್ನ 1ರ ತನಕ ಮೂರು ವಿಭಾಗಗಳಲ್ಲಿ ನಡೆಯಲಿದ್ದು, 6ರಿಂದ 9 ವರ್ಷ, 10ರಿಂದ 13 ವರ್ಷ ಮತ್ತು 14ರಿಂದ 16 ವರ್ಷದ ಮಕ್ಕಳಿಗೆ ಪ್ರತ್ಯೇಕ ಗುಂಪುಗಳಲ್ಲಿ ತರಬೇತಿ ನೀಡಲಾಗುವುದು. ವಾರಕ್ಕೆ ಒಂದು ದಿನ ಹಿರಿಯ ಕಲಾವಿದರಿಂದ ಪ್ರಾತ್ಯಕ್ಷಿಕೆ ಏರ್ಪಡಿಸಲಾಗುವುದು. ಒಂದು ದಿನ ನಿಸರ್ಗ ಚಿತ್ರ ಬಿಡಿಸುವ ಸಲುವಾಗಿ ಪ್ರವಾಸವನ್ನು ಏರ್ಪಡಿಸಲಾಗುವುದು. ಶಿಬಿರದ ಕೊನೆಯಲ್ಲಿ ಮಕ್ಕಳು ರಚಿಸಿದ ಚಿತ್ರಗಳ ಪ್ರದರ್ಶನ ಏರ್ಪಡಿಸಿ ಉತ್ತಮ ಚಿತ್ರಗಳಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ನೀಡಲಾಗುವುದು ಮತ್ತು ಭಾಗವಹಿಸಿದ ಎಲ್ಲಾ ಶಿಬಿರಾರ್ಥಿಗಳಿಗೆ ಪ್ರಶಂಸಾ ಪತ್ರ ನೀಡಲಾಗುವುದು. ಅರ್ಜಿ ಸಲ್ಲಿಸಲು ಕೊನೆಯ ದಿನ 4.4.2023. ವಿವರಗಳಿಗೆ ಜೆಎಸ್‌ಎಸ್ ಬಾಲಜಗತ್ ಶಾಲೆಯ ಮುಖ್ಯೋಪಾಧ್ಯಾಯಿನಿಯವರಾದ ಹೆಚ್.ಜಿ.ಮಂಜುಳ (ದೂರವಾಣಿ: 2441370 / 9686677503), ಸಂಚಾಲಕರಾದ ಎಸ್.ಎಂ.ಜಂಬುಕೇಶ್ವರ (9886623490), ಎನ್.ಬಿ.ಪಲ್ಲೇದ (9902274832) ಮತ್ತು ಪಿ.ಎಸ್.ಸಲಬಣ್ಣವರನ್ನು (8095440122) ಸಂಪರ್ಕಿಸಲು ಕೋರಲಾಗಿದೆ.

ಅಗ್ನಿವೀರ್ ವಾಯು ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ಮಾ.27–ಭಾರತೀಯ ವಾಯುದಳದಲ್ಲಿ "ಅಗ್ನಿಪತ್" ಯೋಜನೆಯಡಿ ಅಗ್ನಿವೀರ್ ವಾಯು ಪ್ರವೇಶಕ್ಕೆ ಭಾರತೀಯ ಅರ್ಹ ಅವಿವಾಹಿತ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಂದ ತಾಂತ್ರಿಕ ಮತ್ತು ತಾಂತ್ರಿಕೇತರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು https://agnipathvayu.cdac.in ವೆಬ್‌ಸೈಟ್ ಮೂಲಕ ಆನ್‌ಲೈನ್ ಆಯ್ಕೆ ಪರೀಕ್ಷೆಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ಜಿಲ್ಲೆಯ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಮಾ.31 ಕೊನೆಯ ದಿನಾಂಕ. ಮಾಹಿತಿಗೆ ದೂ.ಸಂ:020–25503105/25503106 ಸಂಪರ್ಕಿಸಬಹುದು.

ಭಾರತದ ಚರಿತ್ರೆಯ ವಿಷಯದಲ್ಲಿ ಗೊಂದಲ ಸೃಷ್ಟಿಸುವ ಹುನ್ನಾರ

ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಚಿಂತಕ ರೋಹಿತ್ ಚಕ್ರತೀರ್ಥ ವಿಷಾದ



ಮೈಸೂರಿನ ರೋಟರಿ ಸಭಾಂಗಣದಲ್ಲಿ ಸೋಮವಾರ ಚಿಂತಕ ರೋಹಿತ್ ಚಕ್ರತೀರ್ಥ ಮೂರು ಕೃತಿಗಳನ್ನು ಬಿಡುಗಡೆಗೊಳಿಸಿದರು. ಚಿತ್ರದಲ್ಲಿ ಆಯೋಜಕ ರಾಧಾಕೃಷ್ಣ ಇನ್ನಿತರರನ್ನು ಕಾಣಬಹುದು.

ಮೈಸೂರು, ಮಾ.27(ಎಂಕೆ)– ಭಾರತದ ಚರಿತ್ರೆಯ ಬಗ್ಗೆ ಗೊಂದಲ ಸೃಷ್ಟಿಸಬೇಕು ಎನ್ನುವ ಹೊಸ ತಂತ್ರ, ಹುನ್ನಾರ ನಡೆಯುತ್ತಿದ್ದು, ಅದರಲ್ಲಿ ಧಮ್ಮಪದವೂ ಬಲಿಯಾಗಿದೆ ಎಂದು ಚಿಂತಕ ರೋಹಿತ್ ಚಕ್ರತೀರ್ಥ ವಿಷಾದಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಸಮನ್ವಿತ, ಅಯೋಧ್ಯಾ ಪ್ರಕಾಶನ, ಸ್ವಸ್ತಿ ಪ್ರಕಾಶನ, ವಿವೇಕ ವಿದ್ಯಾವಾಹಿನಿ ಟ್ರಸ್ಟ್, ಅಖಿಲ ಭಾರತ ಸಾಹಿತ್ಯ ಪರಿಷತ್, ಟೀಂ ಮೈಸೂರು ಪ್ರತಿಷ್ಠಾನ, ಚೇತನಾ ಎಜುಕೇಷನ್ ಟ್ರಸ್ಟ್ ಹಾಗೂ ಬ್ರಹ್ಮಶ್ರೀ ಯೋಗ ಮಂದಿರದ ಸಹಯೋಗದೊಂದಿಗೆ ಆಯೋಜಿಸಿದ್ದ ಮೂರು ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಮರಸ್ಯದಿಂದ ಸಾಹಿತ್ಯ ರಚಿಸುವ ಕೆಲಸವನ್ನು ಮಾಡಬೇಕಾಗಿದೆ. ಆದರೆ ತಮ್ಮ ತಮ್ಮ ಸೈದ್ಧಾಂತಿಕ ವಾಗ್ವಾದಗಳಿಂದ ಭಾರತದ ಚರಿತ್ರೆಯಲ್ಲಿ ಗೊಂದಲ ಸೃಷ್ಟಿಸುವ ಕೆಲಸಗಳು ನಡೆಯುತ್ತಿವೆ ಎಂದರು.

ಭಗವಾನ್ ಬುದ್ಧನ ಧಮ್ಮಪದ ಕೆಲ ಸಮುದಾಯಗಳಿಗೆ ಮಾತ್ರ ಸೀಮಿತ ಎಂಬ ಪೂರ್ವಗ್ರಹ ಪೀಡಿತ ಚಿಂತನೆಯಿದೆ. ಹಾಗೆಯೇ ಭಗವದ್ಗೀತೆ ಹಿಂದೂಗಳ ಗ್ರಂಥ, ಬೇರೆ ಬೇರೆ ಧರ್ಮದವರು ನಮ್ಮ ಧರ್ಮ ಗ್ರಂಥಗಳನ್ನು ಮುಟ್ಟಬಾರದೆಂದು ಅಂದುಕೊಳ್ಳುತ್ತಾರೆ. ಇದು ಎಲ್ಲಾ ಜಾತಿ–ಮತಗಳಲ್ಲಿ ನಡೆಯುವಂತದ್ದಾದರೂ ಬದಲಾವಣೆ ಅಗತ್ಯವಾಗಿದೆ. ಬ್ರಿಟಿಷರ ಸಹಾನುಭೂತಿಯಿಂದ ಮೌಲ್ಯ ಪಡೆದ 'ಧಮ್ಮಪದ' ಓದಿದರೆ ಉಪನಿಷತ್ತನ್ನು ಓದಿದಾಗ ದೊರೆಯುವ ಶಾಂತಿ–ನೆಮ್ಮದಿ, ಜ್ಞಾನ ದೊರೆತ ಅನುಭವವಾಗುತ್ತದೆ. ಇಲ್ಲಿ ಯಾವುದೇ ಜಾತಿ–ಮತಗಳ ವಿಷಯವಿಲ್ಲ. ಯಾವುದೇ ಸಂಘರ್ಷಗಳಿಲ್ಲ. ರಕ್ತದ ಕಲೆಯಿಲ್ಲ, ಯಾವುದೇ ಸೈದ್ಧಾಂತಿಕ ವಾಗ್ವಾದಗಳಿಲ್ಲ. ಇದು ಶುದ್ಧವಾಗಿ ಮನುಷ್ಯನಿಗೆ ಬೇಕಾದಂತಹ ಆಧ್ಯಾತ್ಮ ವಿಚಾರಗಳನ್ನು ತಿಳಿಸಲಿದೆ. ಮನುಷ್ಯನ ಉನ್ನತಿಗೆ ಬೇಕಾದ ಸಂಗತಿ ಹಾಗೂ ಅವನತಿಗೆ ಕಾರಣ, ಮನುಷ್ಯನಾಗಿ ನಿನ್ನ ಬದುಕನ್ನು ಕಟ್ಟಿಕೊಳ್ಳುವುದೇಗೆ ಎಂಬುದನ್ನು ಧಮ್ಮಪದ ತಿಳಿಸಿಕೊಡುತ್ತದೆ. ಆದರೆ ಸೀಮಿತ ಸಮಾಜಕ್ಕೆ ಸೇರಿದ್ದು, ಎನ್ನುವ ಗೊಂದಲದ ವಿಚಾರಗಳಿಂದ ಎಲ್ಲರಿಗೂ ತಿಳಿಯದಂತಾಗಿದೆ ಎಂದರು.

ಮೂರು ಕೃತಿಗಳ ಬಿಡುಗಡೆ: ಲೇಖಕರಾದ ಡಾ.ಜಿ.ಬಿ.ಹರೀಶ ರಚಿತ 'ಭಗವಾನ್ ಬುದ್ಧನ ಧಮ್ಮಪದ', ಸದ್ಯೋಜಾತ ರಚಿತ 'ಜಿತ್ವರಿ ಇದು ಕಾಶಿ', ಡಾ.ನವೀನ ಗಂಗೋತ್ರಿ ರಚಿತ 'ಕಥಾನಕ' ಕೃತಿಗಳನ್ನು ಕುಂದೂರು ಮಠದ ಡಾ.ಶರತ್ ಚಂದ್ರ ಸ್ವಾಮೀಜಿ ಬಿಡುಗಡೆಗೊಳಿಸಿದರು. ಆಯೋಜಕ ರಾಧಾಕೃಷ್ಣ ಉಪಸ್ಥಿತರಿದ್ದರು.

ಸಿಎನ್‌ಸಿಯಿಂದ ಹಿರಿಯರಿಗೆ ಪುಷ್ಪ ನಮನ

ಕೊಡವರಿಗೆ ಸಾಂವಿಧಾನಿಕ ಹಕ್ಕು ನೀಡದೆ ವಂಚನೆ: ಎನ್.ಯು. ನಾಚಪ್ಪ



ಮಡಿಕೇರಿ, ಮಾ.27– ಅಂತರ್ರಾಷ್ಟ್ರೀಯ ಜನಾಂಗೀಯ ತಾರತಮ್ಯ ನಿರ್ಮೂಲನೆ ದಿನದ ಅಂಗವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ದೇವಟ್ ಪರಂಬುವಿನಲ್ಲಿ 1785ರಲ್ಲಿ ಹತ್ಯೆಗೀಡಾದ ಹಿರಿಯರಿಗೆ ಪುಷ್ಪ ನಮನ ಸಲ್ಲಿಸಿತು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ, ಕೊಡವ ಜನಾಂಗದ ಮೇಲೆ ಜನಾಂಗೀಯ ತಾರತಮ್ಯ ನಿರಂತರವಾಗುತ್ತಿದೆ. ಸಾಂವಿಧಾನಿಕವಾಗಿ ದೊರೆಯಬೇಕಾದ ಹಕ್ಕುಗಳನ್ನು ನೀಡದೆ ವಂಚಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಟಿಪ್ಪು ಕಾಲದಲ್ಲಿ ದೇವಟ್ ಪರಂಬುವಿನಲ್ಲಿ ವಂಚನೆಯಿಂದ ವೀರ ಬುಡಕಟ್ಟು ಕೊಡವರನ್ನು ಹತ್ಯೆ ಮಾಡಲಾಗಿದೆ. ಧೀರ ಪರಂಪರೆಯ ಅತಿ ಸೂಕ್ಷ್ಮ ಜನಾಂಗದ ಮೇಲೆ ನಡೆದಿರುವ ದಾಳಿಯನ್ನು ಇಡೀ ವಿಶ್ವವೇ ಖಂಡಿಸಬೇಕಾಗಿದೆ. ಸಂಚಿನಿಂದ ಜೀವ ಕಳೆದುಕೊಂಡ ಹಿರಿಯರನ್ನು ಸ್ಮರಿಸಿಕೊಳ್ಳುವುದು ಕೊಡವರ ಕರ್ತವ್ಯವಾಗಿದೆ ಎಂದರು.

ಕೊಡವ ಬುಡಕಟ್ಟು ಜನಾಂಗದ ಸಬಲೀಕರಣಕ್ಕಾಗಿ ಸಿಎನ್‌ಸಿ ಸಂಘಟನೆ ನಡೆಸುತ್ತಿರುವ ಹೋರಾಟಕ್ಕೆ ಅಗಲಿದ ಹಿರಿಯರು ಬೆಂಬಲವಾಗಿ ನಿಂತಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ ನಾಚಪ್ಪ, ಕೊಡವ ಲ್ಯಾಂಡ್ ಜಿಯೋ–ರಾಜಕೀಯ ಸ್ವಾಯತ್ತತೆ ಮತ್ತು ಆಂತರಿಕ–ಸ್ವಯಂ ನಿರ್ಣಯ ಹಕ್ಕುಗಳಿಗಾಗಿ ಶಾಂತಿಯುತ ಹೋರಾಟ ಮುಂದುವರೆಯಲಿದೆ ಎಂದು ತಿಳಿಸಿದರು.

ಕೊಡವ ಸಂಸ್ಕಾರ ಗನ್ ಅನ್ನು ಸಿಖ್ಖರ 'ಕಿರ್ಪಾನ್'ಗೆ ಸಮಾನವಾಗಿ ನೋಡಬೇಕು. ಕೊಡವ ಬುಡಕಟ್ಟು ಜನಾಂಗಕ್ಕೆ ಎಸ್.ಟಿ ಟ್ಯಾಗ್ ನೀಡಬೇಕು. ಕೊಡವ ಭಾಷೆಯನ್ನು 8ನೇ ಶೆಡ್ಯೂಲ್‌ಗೆ ಸೇರಿಸಬೇಕು. ದೇವಟ್ ಪರಂಬು ದುರಂತ ಹತ್ಯಾಕಾಂಡದ ಸ್ಥಳದಲ್ಲಿ, ನಾಲ್ನಾಡ್ ಅರಮನೆ ಮತ್ತು ಮಡಿಕೇರಿ ಕೋಟೆಯಲ್ಲಿ ಅಂತರ್ರಾಷ್ಟ್ರೀಯ ಕೊಡವ ನರಮೇಧದ ಸ್ಮಾರಕವನ್ನು ಸ್ಥಾಪಿಸಬೇಕು. ಕೊಡವರ ಹತ್ಯೆಯ ಘಟನೆಗಳನ್ನು ಅಂತರರಾಷ್ಟ್ರೀಯ ಹತ್ಯಾಕಾಂಡದ ನೆನಪಿನ ಪಟ್ಟಿಯಲ್ಲಿ ಸೇರಿಸಬೇಕು ಎಂದು ಅವರು ಇದೇ ಸಂದರ್ಭ ಒತ್ತಾಯಿಸಿದರು.

ಈ ಸಂದರ್ಭ ಪಟ್ಟಮಾಡ ಕುಶ, ಅರೆಯಡ ಗಿರೀಶ್, ಮಂದಪಂಡ ಮನೋಜ್, ಮಂದಪಂಡ ಸೂರಜ್ ಮತ್ತಿತರರು ಹಾಜರಿದ್ದು ಪುಷ್ಪ ನಮನ ಸಲ್ಲಿಸಿದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕಟ್ಟಡ ಕಾರ್ಮಿಕರ ಪ್ರತಿಭಟನೆ



ಮಡಿಕೇರಿ, ಮಾ.27– ನೆನೆಗುದಿಗೆ ಬಿದ್ದಿರುವ ಕಟ್ಟಡ ಕಾರ್ಮಿಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್‌ನ ಕೊಡಗು ಜಿಲ್ಲಾ ಸಮಿತಿ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಕಟ್ಟಡ ಕಾರ್ಮಿಕರು ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್‌ನ ಜಿಲ್ಲಾ ಸಮಿತಿ ಅಧ್ಯಕ್ಷ ಎ.ಸಿ. ಸಾಬು ಅವರ ನೇತೃತ್ವದಲ್ಲಿ ಕಾರ್ಮಿಕರು ಸಮಾವೇಶಗೊಂಡು ಸರಕಾರ ಹಾಗೂ ಇಲಾಖೆಯ ವಿರುದ್ಧ ಘೋಷಣೆಗಳನ್ನು ಕೂಗಿ ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭ ಸಂಘದ ಜಿಲ್ಲಾಧ್ಯಕ್ಷ ಎ.ಸಿ.ಸಾಬು ಮಾತನಾಡಿ, ಕಟ್ಟಡ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವಂತೆ ಸಂಘಟನೆಯಿಂದ ಹಲವು ಬಾರಿ ಕಾರ್ಮಿಕ ಇಲಾಖೆಯ ಗಮನ ಸೆಳೆಯಲಾಗಿದ್ದರೂ ಇಲ್ಲಿಯವರೆಗೆ ಸೂಕ್ತ ಕ್ರಮ ಕೈಗೊಂಡಿಲ್ಲ. ಆದರೆ ಅನವಶ್ಯಕವಾದ ಹೊಸ ಸಮಸ್ಯೆಗಳನ್ನು ಕಲ್ಯಾಣ ಮಂಡಳಿಗೆ ಹೊರೆಯಾಗುವ ರೀತಿಯಲ್ಲಿ ಘೋಷಣೆ ಮಾಡುತ್ತಿರುವುದು ಬೇಸರದ ಸಂಗತಿ ಎಂದರು.

ಬೇಡಿಕೆಗಳು: ಕಾರ್ಮಿಕ ಕಲ್ಯಾಣ ಮಂಡಳಿಯ ವತಿಯಿಂದ ಸ್ವೀಕಾರಗೊಳ್ಳುತ್ತಿರುವ ಶೈಕ್ಷಣಿಕ ಸಹಾಯ ಧನ ಅರ್ಜಿಯಲ್ಲಿ ಕೆಲವು ಲೋಪದೋಷಗಳಿವೆ. ಇದರಿಂದ ತಂತ್ರಾಂಶದಲ್ಲಿ ಕೆಲ ಬದಲಾವಣೆ ಮಾಡಬೇಕು. ಬಾಕಿ ಇರುವ ಶೈಕ್ಷಣಿಕ ಅರ್ಜಿಗಳಿಗೆ ತ್ವರಿತವಾಗಿ ಹಣ ವರ್ಗಾವಣೆ ಮಾಡಬೇಕು. ಆರೋಗ್ಯ ಸಂಜೀವಿನಿ ಜಾರಿಗೊಳಿಸಬೇಕು. ಕಾರ್ಮಿಕ ಅರ್ಜಿ ಸಲ್ಲಿಕೆಗೆ ಇರುವ ನೂತನ ತಂತ್ರಾಂಶದ ಕುರಿತು ತರಬೇತಿ ನೀಡಬೇಕು. ಕಲ್ಯಾಣ ಮಂಡಳಿಯಿಂದ ಆರಂಭಿಸಲು ಉದ್ದೇಶಿಸಿರುವ ಶಿಶು ವಿಹಾರಗಳನ್ನು ರದ್ದುಗೊಳಿಸಬೇಕು. ನೈಜ ಕಾರ್ಮಿಕರಿಗೆ ಕಲ್ಯಾಣ ಮಂಡಳಿಯಲ್ಲಿ ಪ್ರಾತಿನಿಧ್ಯ ದೊರೆಯಬೇಕು. ಅರ್ಜಿಗಳ ವಿಲೇವಾರಿ ವಿಳಂಬವಾಗದಂತೆ ಕ್ರಮವಹಿಸಬೇಕು. ಕಾರ್ಮಿಕ ಇಲಾಖೆಯಲ್ಲಿರುವ ಹುದ್ದೆಗಳನ್ನು ಶೀಘ್ರ ಭರ್ತಿಗೊಳಿಸಬೇಕು. ಮನೆ ನಿರ್ಮಾಣಕ್ಕೆ 5 ಲಕ್ಷ ರೂ. ಸಹಾಯಧನ ಜಾರಿ ಮಾಡಲು ಕ್ರಮವಹಿಸಬೇಕು. ಕಾರ್ಮಿಕರಿಗೆ ನೀಡುವ ರೇಷನ್, ಟೂಲ್, ಸುರಕ್ಷಾ ಕಿಟ್ ಖರೀದಿಯಲ್ಲಿ ಪಾರದರ್ಶಕತೆ ಕಾಪಾಡಿಕೊಂಡು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಳ್ಳಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು. ಲಕ್ಷಾಂತರ ಕಾರ್ಮಿಕರು ಹಾಗೂ ಅವರ ಅವಲಂಬಿತ ಬದುಕು ಹಾಗೂ ಭವಿಷ್ಯದ ದೃಷ್ಟಿಯಿಂದ ಈ ಬೇಡಿಕೆಗಳನ್ನು ತುರ್ತಾಗಿ ಇತ್ಯರ್ಥಗೊಳಿಸುವಂತೆ ಮನವಿ ಮಾಡಿದರು.

ಈ ಸಂದರ್ಭ ಸಂಘಟನೆಯ ಕಾರ್ಯದರ್ಶಿ ಕೆ.ಎಸ್. ರತೀಶ್, ಖಜಾಂಚಿ ಹಮೀದ್, ಉಪ ಕಾರ್ಯದರ್ಶಿಗಳಾದ ಎಸ್.ರೂಪ, ಕೆ.ಕೆ.ಹರಿದಾಸ್ ಹಾಗೂ ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮಹಿಳೆ ಕಲಿತರೆ ಕುಟುಂಬವೇ ಕಲಿತಂತೆ



ವಿರಾಜಪೇಟೆ, ಮಾ.27– ಮಹಿಳೆ ಕಲಿತರೆ ಕುಟುಂಬವೇ ಕಲಿತಂತೆ, ಇತ್ತೀಚಿನ ದಿನಗಳಲ್ಲಿ ಮಹಿಳೆ ಪುರುಷರಷ್ಟೇ ಸರಿಸಮಾನರಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾಳೆ ಎಂದು ವಿರಾಜಪೇಟೆ ಮಹಿಳಾ ಸಮಾಜದ ಅಧ್ಯಕ್ಷೆ ಪಟ್ರಪಂಡ ಗೀತಾ ಬೆಳ್ಯಪ್ಪ ತಿಳಿಸಿದ್ದಾರೆ.

ಮಹಿಳಾ ದಿನಾಚರಣೆಯ ಅಂಗವಾಗಿ ವಿರಾಜಪೇಟೆಯ ಕೊಡಗು ಮಹಿಳಾ ಸಹಕಾರ ಸಂಘದ ಸಭಾಂಗಣದಲ್ಲಿ ವಿರಾಜಪೇಟೆ ಮಹಿಳಾ ಸಮಾಜದ ವತಿಯಿಂದ ಮಹಿಳಾ ಸದಸ್ಯರಿಗೆ ಆಯೋಜಿಸಿದ್ದ ಆಟೋಟ ಸ್ಪರ್ಧೆ ಹಾಗೂ ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲೆಮರೆಯ ಕಾಯಿಯಂತಿರುವ ಮಹಿಳಾ ಪ್ರತಿಭಾವಂತರು ಮನೆಯಲ್ಲಿಯೇ ಕಾಲ ಕಳೆಯದೆ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವಂತಾಗಬೇಕು. ಮುಂದಿನ ವರ್ಷ ಮಹಿಳಾ ದಿನಾಚರಣೆಗೆ ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದರು

ಈ ಹಿಂದೆ ಮಹಿಳಾ ಸಮಾಜದಲ್ಲಿ ಸೇವೆ ಸಲ್ಲಿಸಿದ ಮಾಜಿ ಅಧ್ಯಕ್ಷರುಗಳಾದ ನಾಟೋಳಂಡ ಆಶಾ ಚಿಣ್ಣಪ್ಪ ಮತ್ತು ಮುಂಡ್ಯೋಳಂಡ ಕುಸುಮ ಸೋಮಣ್ಣ ಅವರುಗಳನ್ನು ಸನ್ಮಾನಿಸಲಾಯಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ಸನ್ಮಾನಿತರು, ಹಿಂದೆ ನಮ್ಮ ಅವಧಿಯಲ್ಲಿ ಸಮಾಜವನ್ನು ನಡೆಸಲು ಅನುದಾನದ ಕೊರತೆ ಇದ್ದರು ಕೂಡ ಮಹಿಳಾ ಸಹಕಾರ ಸಂಘದಲ್ಲಿ ಎಲ್ಲಾ ಸದಸ್ಯರುಗಳು ಒಂದೇ ಕುಟುಂಬದವರಂತೆ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುತ್ತಿದ್ದೆವು ಎಂದರು.

ಮಹಿಳಾ ಸಹಕಾರ ಸಂಘದ ಉಪಾಧ್ಯಕ್ಷೆ ಯು.ಕೆ.ಪೊನ್ನಮ್ಮ, ಕಾರ್ಯದರ್ಶಿ ಬಿ.ಜಿ.ಪುಷ್ಪಲತ, ನಿರ್ದೇಶಕರುಗಳಾದ ಬಿ.ಆರ್.ಸಬೀತ, ಮೆಟಿಲ್ಡಾ ಲೋಬೊ, ಬಿ.ಎನ್.ಭಾರತಿ, ಪಿ.ಕೆ.ನೀಲಮ್ಮ, ಹೆಚ್.ಆರ್. ಪುಷ್ಪ ವಾಸು, ಪ್ರೇಮ ಮಂಜುನಾಥ್, ಬಿ.ಯಶೋಧಬಾಬು, ಪುಷ್ಪ ಐತಪ್ಪ ಉಪಸ್ಥಿತರಿದ್ದರು. ನಿರ್ದೇಶಕರಾದ ಹೆಚ್.ಆರ್. ಪುಷ್ಪ ಸ್ವಾಗತಿಸಿದರು. ಬಿ.ಎ.ಪುಷ್ಪಲತ ನಿರೂಪಿಸಿದರೆ, ಪ್ರೇಮ ವೆಂಕಟೇಶ್ ಪ್ರಾರ್ಥಿಸಿದರು. ಭಾರತಿ ವಂದಿಸಿದರು. ಇದಕ್ಕೂ ಮೊದಲು ಸದಸ್ಯರಿಗೆ ಸಮಾಜದ ಸಭಾಂಗಣದಲ್ಲಿ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ನಾಳೆ ಮೂರ್ನಾಡಿನಲ್ಲಿ 'ರೈತ ಸಮಾವೇಶ'

ಮಡಿಕೇರಿ, ಮಾ.27– ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ರೈತ ಸಮುದಾಯಕ್ಕಾಗಿ ರೂಪಿಸಿರುವ ಕಲ್ಯಾಣ ಕಾರ್ಯಕ್ರಮಗಳ ಮಾಹಿತಿಯನ್ನು ಜನರಿಗೆ ಮುಟ್ಟಿಸುವ ನಿಟ್ಟಿನಲ್ಲಿ ಮಾ.29ರಂದು ಕೊಡಗು ಜಿಲ್ಲಾ ಬಿಜೆಪಿ ರೈತ ಮೋರ್ಚಾ ವತಿಯಿಂದ ಮೂರ್ನಾಡಿನಲ್ಲಿ 'ರೈತ ಸಮಾವೇಶ' ಆಯೋಜಿಸಲಾಗಿದೆ ಎಂದು ಬಿಜೆಪಿ ರೈತ ಮೋರ್ಚಾದ ರಾಜ್ಯ ಕಾರ್ಯಕಾರಿಣಿ ಸಮಿತಿಯ ಸದಸ್ಯರಾದ ಯಮುನಾ ಚಂಗಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ ಸಮುದಾಯವನ್ನು ಸಶಕ್ತಗೊಳಿಸುವ ಮೂಲಕ ರಾಷ್ಟ್ರವನ್ನು ಬಲಿಷ್ಠವಾಗಿ ಕಟ್ಟುವ ಚಿಂತನೆ ಬಿಜೆಪಿಯದ್ದು. ಈ ಹಿನ್ನೆಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರಿಗೆ ಪೂರಕವಾದ ಹತ್ತಾರು ಯೋಜನೆಗಳನ್ನು ಜಾರಿಗೊಳಿಸಿರುವುದಾಗಿ ತಿಳಿಸಿದರು. ಮಡಿಕೇರಿ ಮಂಡಲದ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷರಾದ ಶಿವಚಾಳಿಯಂಡ ಜಗದೀಶ್ ಮಾತನಾಡಿ, ಮಾ.29ರಂದು ಮೂರ್ನಾಡು ಕೊಡವ ಸಮಾಜದಲ್ಲಿ ರೈತ ಸಮಾವೇಶ ನಡೆಯಲಿದೆ. ಇದಕ್ಕೂ ಮುನ್ನ ಪಟ್ಟಣದ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯನ್ನು ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಬಿಜೆಪಿ ರಾಜ್ಯ ರೈತ ಮೋರ್ಚಾ ಅಧ್ಯಕ್ಷರಾದ ಈರಣ್ಣ ಕಡಾಡಿ, ತಮಿಳುನಾಡು ರಾಜ್ಯ ಬಿಜೆಪಿ ಅಧ್ಯಕ್ಷ ಅಣ್ಣಾಮಲೈ, ಜಿಲ್ಲೆಯ ಶಾಸಕರು, ವಿಧಾನಪರಿಷತ್ ಸದಸ್ಯರು, ಪಕ್ಷದ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಸಮಾವೇಶದಲ್ಲಿ ಮಡಿಕೇರಿ ನಗರ, ಗ್ರಾಮಾಂತರ, ಸೋಮವಾರಪೇಟೆ ಮತ್ತು ವಿರಾಜಪೇಟೆ ಮಂಡಲದಿಂದ ತಲಾ ಇಬ್ಬರು ಪ್ರಗತಿಪರ ರೈತರನ್ನು ಸನ್ಮಾನಿಸಿ ಗೌರವಿಸಲಾಗುವುದೆಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕುಂದಳ್ಳಿ ದಿನೇಶ್, ಸೋಮವಾರಪೇಟೆ ಮಂಡಲ ರೈತ ಮೋರ್ಚಾ ಅಧ್ಯಕ್ಷರಾದ ಮಚ್ಚಂಡ ಪ್ರಕಾಶ್ ಉಪಸ್ಥಿತರಿದ್ದರು.

ಕುಶಾಲನಗರ ಡಿವೈಎಸ್ಪಿ ಕಚೇರಿಗೆ ಐಜಿಪಿ ಭೇಟಿ



ಕುಶಾಲನಗರ, ಮಾ.27– ದಕ್ಷಿಣ ವಲಯ ಪೊಲೀಸ್ ಮಹಾ ನಿರೀಕ್ಷಕ ಪ್ರವೀಣ್ ಮಧುಕರ್ ಪವಾರ್ ಸೋಮವಾರ ಕುಶಾಲನಗರಕ್ಕೆ ಭೇಟಿ ನೀಡಿದ್ದರು.

ಕುಶಾಲನಗರ ಡಿವೈಎಸ್ಪಿ ಕಚೇರಿಗೆ ಭೇಟಿ ನೀಡಿದ ಅವರು, ಮುಂಬರುವ ಚುನಾವಣೆ ಸಂಬಂಧ ಅಗತ್ಯ ಮಾಹಿತಿಗಳನ್ನು ಪಡೆದರು. ಕುಶಾಲನಗರಕ್ಕೆ ಆಗಮಿಸಿದ ಐಜಿಪಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಹೂ ಗುಚ್ಛ ನೀಡಿ ಸ್ವಾಗತಿಸಿದರು. ಡಿವೈಎಸ್ಪಿ ಕಚೇರಿಯಲ್ಲಿ ಸೋಮವಾರಪೇಟೆ ಉಪ ವಿಭಾಗದ ವಿವಿಧ ಪೊಲೀಸ್ ಠಾಣೆಗಳ ಠಾಣಾಧಿಕಾರಿಗಳೊಂದಿಗೆ ಸಭೆ ನಡೆಸಿದ ಐಜಿಪಿ ಅಗತ್ಯ ಸಲಹೆ ಸೂಚನೆ ನೀಡಿದರು. ಈ ಸಂದರ್ಭ ಡಿವೈಎಸ್ಪಿ ಗಂಗಾಧರಪ್ಪ, ವೃತ್ತ ನಿರೀಕ್ಷಕರಾದ ಮಹೇಶ್, ಶ್ರೀಕಾಂತ್ ಸೇರಿದಂತೆ ಠಾಣಾಧಿಕಾರಿಗಳು ಇದ್ದರು.

ಕೊಡವರ ಕ್ಷಮೆಯಾಚಿಸಿದ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್‌ಗೌಡ

ದುರುದ್ದೇಶದ ಹೇಳಿಕೆ ಅಲ್ಲ, ಮಾತಿನ ಭರದಲ್ಲಿ ಪ್ರಮಾದವಾಗಿದೆ

ಮಡಿಕೇರಿ, ಮಾ.27– ಕೊಡವ ಜನಾಂಗದ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿದ್ದ ಮಂಡ್ಯ ಜಿಲ್ಲೆಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್ ಗೌಡ ಅವರು ಅಖಿಲ ಕೊಡವ ಸಮಾಜಕ್ಕೆ ಪತ್ರ ಬರೆಯುವ ಮೂಲಕ ಕ್ಷಮೆ ಕೇಳಿದ್ದಾರೆ.

ಅಖಿಲ ಕೊಡವ ಸಮಾಜಕ್ಕೆ ಪತ್ರ ಬರೆದಿರುವ ಪ್ರೊ. ಜಯಪ್ರಕಾಶ್ ಗೌಡರು, ನಾನು ಯಾವುದೇ ದುರುದ್ದೇಶದಿಂದ ಹೇಳಿಕೆ ನೀಡಿಲ್ಲ, ಆದಿಚುಂಚನಗಿರಿ ಶ್ರೀಮಠದ ಪೀಠಾಧ್ಯಕ್ಷರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರಿಗೆ ಉತ್ತರ ನೀಡುವ ಭರದಲ್ಲಿ ಪ್ರಮಾದವಾಗಿದೆಯೇ ಹೊರತು ಜನಾಂಗದ ಬಗ್ಗೆ ಅಪಾರ ಗೌರವವಿದೆ ಎಂದಿದ್ದಾರೆ.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಜನರಲ್ ತಿಮ್ಮಯ್ಯ ಅವರಂತಹ ವೀರರು ಸೇರಿದಂತೆ ಲಕ್ಷಾಂತರ ವೀರ ಯೋಧರನ್ನು ನೀಡಿರುವ ಕೊಡವ ಜನಾಂಗದ ಮೇಲೆ ಇಡೀ ಭಾರತ ದೇಶವೇ ಹೆಮ್ಮೆ ಪಡುತ್ತದೆ. ನನ್ನ ಮಾತಿನಿಂದ ಜನಾಂಗಕ್ಕೆ ನೋವಾಗಿದ್ದಲ್ಲಿ ನಾನು ಕೊಡವ ಜನಾಂಗದ ಕ್ಷಮೆ ಕೇಳುತ್ತೇನೆ. ಇದನ್ನು ಮುಂದುವರೆಸಿಕೊಂಡು ಹೋಗದಂತೆ ಕೇಳಿಕೊಳ್ಳುತ್ತೇನೆ. ಇದು ಕಾರ್ಯಪ್ಪ ಅವರಿಗೆ ಆಡಿದ ಮಾತು ಹೊರತು ಕೊಡವ ಸಮುದಾಯಕ್ಕೆ ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಶನಿವಾರ ವಿವಾದಾತ್ಮಕ ಹೇಳಿಕೆ ಹೊರ ಬೀಳುತ್ತಿದ್ದಂತೆಯೇ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದ್ದ ಅಖಿಲ ಕೊಡವ ಸಮಾಜ ಮತ್ತು ಅಖಿಲ ಕೊಡವ ಸಮಾಜ ಯೂತ್ ವಿಂಗ್, ಪ್ರೊ. ಜಯಪ್ರಕಾಶ್ ಗೌಡರು ತಮ್ಮ ಹೇಳಿಕೆ ಕುರಿತು ಕೊಡವ ಸಮುದಾಯದ ಕ್ಷಮೆ ಕೇಳಬೇಕು, ತಪ್ಪಿದಲ್ಲಿ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿತ್ತು.

ಮಾ.31ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಫೈಲ್ ಚಿತ್ರ



ಚಾಮರಾಜನಗರ, ಮಾ.27– ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾ.31ರಿಂದ ಪ್ರಾರಂಭವಾಗಲಿದೆ. 12,093 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದು, 51 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಮೊದಲ ದಿನವಾದ ಶುಕ್ರವಾರ (ಮಾ.31) ಪ್ರಥಮ ಭಾಷೆಯ ಪರೀಕ್ಷೆಗಳು ನಡೆಯಲಿದ್ದು, ಏಪ್ರಿಲ್ 15ರಂದು ಪರೀಕ್ಷೆ ಮುಕ್ತಾಯವಾಗಲಿದೆ. ಬೆಳಗ್ಗೆ 10.30ರಿಂದ ಮಧ್ಯಾಹ್ನ 1.45ರವರೆಗೆ ಪರೀಕ್ಷೆ ನಡೆಯಲಿದೆ. 11,618 ಹೊಸ ಅಭ್ಯರ್ಥಿಗಳು, 85 ಪುನಾರಾವರ್ತಿತ ಅಭ್ಯರ್ಥಿಗಳು, 6 ಹಳೆ ಪಠ್ಯಕ್ರಮದ ಅಭ್ಯರ್ಥಿಗಳು, 213 ಖಾಸಗಿ ಹೊಸ ಅಭ್ಯರ್ಥಿಗಳು, 171 ಖಾಸಗಿ ಪುನಾರಾವರ್ತಿತ ಅಭ್ಯರ್ಥಿಗಳು ಸೇರಿ ಒಟ್ಟು 12,093 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಚಾಮರಾಜನಗರ ತಾಲೂಕಿನಲ್ಲಿ 4006 ವಿದ್ಯಾರ್ಥಿಗಳು, ಗುಂಡ್ಲುಪೇಟೆಯಲ್ಲಿ 2674, ಹನೂರು 2236, ಕೊಳ್ಳೇಗಾಲ 2158 ಹಾಗೂ ಯಳಂದೂರು ತಾಲೂಕಿನಲ್ಲಿ 1019 ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆ ತೆಗೆದುಕೊಂಡಿದ್ದಾರೆ. ಕಳೆದ ಬಾರಿ ಯಾವುದೇ ಗೊಂದಲಗಳಿಲ್ಲದೇ ಸರಾಗವಾಗಿ ಪರೀಕ್ಷೆ ನಡೆಸಿ ಫಲಿತಾಂಶಗಳನ್ನು ನಿಗದಿತ ಸಮಯದಲ್ಲೇ ನೀಡಲಾಗಿತ್ತು. ಈ ಬಾರಿಯೂ ಅದೇ ರೀತಿ ಕ್ರಮಬದ್ಧವಾಗಿ ಇನ್ನೂ ಹೆಚ್ಚಿನ ಭದ್ರತೆಯಲ್ಲಿ ಪರೀಕ್ಷೆ ನಡೆಯಸಲು ಶಿಕ್ಷಣ ಇಲಾಖೆ ಸಕಲ ಸಿದ್ಧತೆ ಕೈಗೊಂಡಿದ್ದು, ಪರೀಕ್ಷಾ ಕಾರ್ಯಕ್ಕೆ ಒಟ್ಟು 865 ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ಜಿಲ್ಲೆಯ 51 ಪರೀಕ್ಷಾ ಕೇಂದ್ರಗಳಲ್ಲಿಯೂ ಸೂಕ್ತ ಭದ್ರತೆಯನ್ನು ಕೈಗೊಳ್ಳಲಾಗಿದ್ದು, ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ.

ಪರಿಕ್ಷಾ ಕಾರ್ಯವು ಶಾಂತಿ, ಸುವ್ಯವಸ್ಥೆಯಿಂದ ನಡೆಯಬೇಕೆಂಬ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾ ದಿನಗಳಂದು ಕೇಂದ್ರ ವ್ಯಾಪ್ತಿ ನಿಗದಿಪಡಿಸಿರುವ ಪ್ರದೇಶದಲ್ಲಿ ನಿಷೇಧಾಜ್ಞೆ ವಿಧಿಸಲಾಗಿದೆ.

ಮಾ.31ರಂದು ಕನ್ನಡ (ಪ್ರಥಮ ಭಾಷೆ), ಏಪ್ರಿಲ್ 3ರಂದು ಗಣಿತ, ಏಪ್ರಿಲ್ 6ರಂದು ಇಂಗ್ಲಿಷ್ (ದ್ವಿತೀಯ ಭಾಷೆ), ಏಪ್ರಿಲ್ 8ರಂದು ಅರ್ಥಶಾಸ್ತ್ರ, ಏಪ್ರಿಲ್ 10ರಂದು ವಿಜ್ಞಾನ, ಏಪ್ರಿಲ್ 12ರಂದು ಹಿಂದಿ (ತೃತೀಯ ಭಾಷೆ) ಹಾಗೂ ಏಪ್ರಿಲ್ 15ರಂದು ಸಮಾಜ ವಿಜ್ಞಾನ ಪರೀಕ್ಷೆ ನಡೆಯಲಿದ್ದು, ಪರೀಕ್ಷೆ ನಡೆಸುವ ಸಂಬಂಧ ಸಕಲ ಸಿದ್ಧತೆ ಪೂರ್ಣಗೊಂಡಿದೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

> ಜಿಲ್ಲೆಯಲ್ಲಿ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ವಿದ್ಯಾರ್ಥಿಗಳು ಯಾವುದೇ ಭಯ, ಒತ್ತಡ ಇಲ್ಲದೆ ಪರೀಕ್ಷೆ ಬರೆಯಬೇಕು. ಯಾವುದೇ ವದಂತಿಗಳಿಗೆ ಕಿವಿಗೊಡಬೇಡಿ. ಇದುವರೆವಿಗೆ ಓದಿರುವುದನ್ನು ಪುನರ್‌ಮನನ ಮಾಡಿಕೊಂಡು ಖುಷಿಯಿಂದ, ಧೈರ್ಯದಿಂದ ಪರೀಕ್ಷೆ ಎದುರಿಸಿ, ಎಲ್ಲಾ ವಿದ್ಯಾರ್ಥಿಗಳಿಗೂ ಆಲ್ ದಿ ಬೆಸ್ಟ್
>
> 
>
> -ಎಸ್.ಎನ್.ಮಂಜುನಾಥ್, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಚಾಮರಾಜನಗರ ಜಿಲ್ಲೆ.

ಮುಸ್ಲಿಂ ಸಮುದಾಯಕ್ಕೆ ಮೀಸಲಾತಿಗೆ ಒತ್ತಾಯಿಸಿ ಪ್ರತಿಭಟನೆ



ಚಾಮರಾಜನಗರ, ಮಾ.27– ಮುಸ್ಲಿಂ ಸಮುದಾಯಕ್ಕಿದ್ದ ಮೀಸಲಾತಿಯನ್ನು ಪುನರ್ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಎಸ್‌ಡಿಪಿಐ ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಪಕ್ಷದ ಜಿಲ್ಲಾ ಕಚೇರಿಯಿಂದ ಭುವನೇಶ್ವರಿ ವೃತ್ತದವರೆಗೆ ಪ್ರತಿಭಟನೆ ನಡೆಸಿದ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು. ರಾಜ್ಯ ಸರ್ಕಾರ ಇತ್ತೀಚೆಗೆ ಕ್ಯಾಬಿನೆಟ್ ಸಭೆಯಲ್ಲಿ ಮುಸ್ಲಿಂ ಸಮುದಾಯಕ್ಕಿದ್ದ 2(ಬಿ) ಮೀಸಲಾತಿಯನ್ನು ರದ್ದುಗೊಳಿಸಿದೆ. ಇದು ಅಸಂವಿಧಾನಿಕ ಹಾಗೂ ಒಂದು ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡು ಮಾಡಿರುವ ಉದ್ದೇಶಿತ ದಾಳಿಯಾಗಿದೆ ಎಂದು ಪ್ರತಿಭಟನಾಕಾರರು ದೂರಿದರು.

ಸಂವಿಧಾನದಲ್ಲಿ ಧರ್ಮಾಧಾರಿತ ಮೀಸಲಾತಿ ಇಲ್ಲದಿರುವುದರಿಂದ 2(ಬಿ) ಪ್ರವರ್ಗದಡಿಯಲ್ಲಿ ಇತರೆ ಹಿಂದುಳಿದ ವರ್ಗಗಳಂತೆ ಕರ್ನಾಟಕದ ಮುಸ್ಲಿಂ ಸಮುದಾಯ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗವೆಂದು ವೈಜ್ಞಾನಿಕ ಅಧ್ಯಯನದ ಮೂಲಕ ಗುರುತಿಸಿ 2(ಬಿ) ಮೀಸಲಾತಿಯನ್ನು ನೀಡಲಾಗಿತ್ತು. ಮುಸ್ಲಿಂ ಸಮುದಾಯದ ಅಭಿವೃದ್ಧಿಗೆ ತಡೆಯೊಡ್ಡುವ ಹಾಗೂ ಮುಖ್ಯವಾಹಿನಿಗೆ ಬಾರದಂತೆ ನೋಡಿಕೊಳ್ಳುವ ಷಡ್ಯಂತ್ರದ ಮುಂದುವರೆದ ಭಾಗವಾಗಿ 2(ಬಿ) ಮೀಸಲಾತಿಯನ್ನು ರದ್ದುಪಡಿಸಲಾಗಿದೆ ಎಂದು ಆಪಾದಿಸಿದರು.

ಮೀಸಲಾತಿಯನ್ನು ಮರು ಸ್ಥಾಪಿಸುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಅಬ್ರಾರ್ ಅಹಮದ್, ಉಪಾಧ್ಯಕ್ಷ ಸೈಯದ್ ಆಸೀಫ್, ಪ್ರಧಾನ ಕಾರ್ಯದರ್ಶಿ ಮಹೇಶ್, ಕಾರ್ಯದರ್ಶಿ ಜಬೀನೂರ್, ಖಜಾಂಚಿ ಸೈಯದ್ ನಯಾಜ್, ನಗರಸಭಾ ಸದಸ್ಯರಾದ ಮಹಮದ್ ಅಮೀಕ್, ಕಲೀಲ್ ಉಲ್ಲಾ, ಆಫ್ಸರ್‌ಪಾಷ, ಮುಖಂಡರಾದ ಕೆ. ವೆಂಕಟರಾಜು, ಬ್ಯಾಡಮೂಡ್ಲು ಬಸವಣ್ಣ, ಸಂಘಸೇನಾ, ಮೂರ್ತಿ, ಮದೀನ ಮಸೀದಿ ಅಧ್ಯಕ್ಷರಾದ ನಮೀಮ್ ಉಲ್ಲಾಹಕ್, ಮಕ್ಕಾ ಮಸೀದಿ ಅಧ್ಯಕ್ಷರಾದ ಸರ್ದಾರ್ ಸಾಬ್, ಇತರರು ಇದ್ದರು.

ಗಂಡ–ಹೆಂಡತಿ ಜಗಳ ಕೊಲೆಯಲ್ಲಿ ಅಂತ್ಯ

ಚಾಮರಾಜನಗರ, ಮಾ.27– ಗಂಡ–ಹೆಂಡತಿ ನಡುವಿನ ಜಗಳವು ಪತ್ನಿಯ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ತಾಲೂಕಿನ ಮೂಡ್ನಾಕೂಡು ಗ್ರಾಮದಲ್ಲಿ ಸೋಮವಾರ ನಡೆದಿದೆ.

ತಾಲೂಕಿನ ಅದೇ ಗ್ರಾಮದ ಸೌಮ್ಯ (32) ಕೊಲೆಯಾದ ದುರ್ದೈವಿ. ಆಕೆಯ ಪತಿ ಮಹೇಶ್ ಅಲಿಯಾಸ್ ಗುರುಪ್ರಸಾದ್ (38) ಕೊಲೆ ಆರೋಪಿಯಾಗಿದ್ದು, ಇವರಿಗೆ 6 ವರ್ಷದ ಮಗಳಿದ್ದಾಳೆ ಎಂದು ತಿಳಿದುಬಂದಿದೆ. ಗಂಡ ಹೆಂಡತಿ ನಡುವೆ ಸೋಮವಾರ ಮಧ್ಯಾಹ್ನ ಜಗಳ ಶುರುವಾಗಿದೆ. ಜಗಳವು ವಿಕೋಪಕ್ಕೆ ತಿರುಗಿದ್ದು, ಈ ವೇಳೆ ಕುಪಿತಗೊಂಡ ಗಂಡ ಪತ್ನಿಯ ಮೇಲೆ ಹಲ್ಲೆ ಮಾಡಿದ್ದಾನೆ. ಇದರಿಂದ ಕುಸಿದುಬಿದ್ದ ಆಕೆ ಸ್ಥಳದಲ್ಲೇ ಸಾವನ್ನಪ್ಪಿದಳು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೃತಳ ಮೊಬೈಲ್‌ಗೆ ಕರೆ ಮಾಡಿದಾಗ ಕರೆ ಸ್ವೀಕರಿಸದಿದ್ದರಿಂದ ಆತಂಕಗೊಂಡ ಅಕ್ಕಪಕ್ಕದ ಮನೆಯವರು ಬಂದು ನೋಡಿದಾಗ ಘಟನೆ ಬೆಳಕಿಗೆ ಬಂದಿದ್ದು, ತಕ್ಷಣವೇ ನಗರದ ಯಡಪುರದಲ್ಲಿರುವ ಮೆಡಿಕಲ್ ಆಸ್ಪತ್ರೆಗೆ ತಂದಿದ್ದಾರೆ. ಆದರೆ, ಅಷ್ಟೊತ್ತಿಗಾಗಲೇ ಸತ್ತು ಹೋಗಿದ್ದರು ಎಂದು ಹೇಳಲಾಗುತ್ತಿದ್ದು, ಮೃತದೇಹವನ್ನು ಶವಾಗಾರದಲ್ಲಿ ಇರಿಸಲಾಗಿದ್ದು, ಆರೋಪಿ ಮಹೇಶ್ ಅನ್ನು ಗ್ರಾಮಾಂತರ ಠಾಣೆಯ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಶೇಷರಾಜನ್ ಕಡಂಬಿ ನಿಧನ



ಚಾಮರಾಜನಗರ, ಮಾ.27– ತಾಲೂಕಿನ ಪ್ರಸಿದ್ಧ ಹರದನಹಳ್ಳಿ ಶ್ರೀವೇಣು ಗೋಪಾಲಸ್ವಾಮಿ ದೇವಸ್ಥಾನದ ಅರ್ಚಕ ಮನೆತನದ ಶ್ರೀಶೇಷ ರಾಜನ್ ಕಡಂಬಿ (85) ಸೋಮವಾರ ಸಂಜೆ ಹೃದಯಾಘಾತದಿಂದ ಸ್ವಗೃಹದಲ್ಲಿ ನಿಧನರಾಗಿದ್ದಾರೆ.

ಹರದನಹಳ್ಳಿಯಲ್ಲಿ ಮಂಗಳವಾರ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಗ್ರಾಮದ ಪ್ರಮುಖರು ತಿಳಿಸಿದ್ದಾರೆ. ಶೇಷಾದ್ರಿ ಕಡಂಬಿ ಎಂದೇ ಪ್ರಸಿದ್ಧರಾಗಿದ್ದ ಇವರು ರೈಲ್ವೆ ಇಲಾಖೆಯ ನಿವೃತ್ತ ಅಧೀಕ್ಷಕರಾಗಿ ಸೇವೆ ಸಲ್ಲಿಸುವುದರ ಜೊತೆಗೆ ಶ್ರೀವೇಣು ಗೋಪಾಲ ಸ್ವಾಮಿಯ ದೇವಸ್ಥಾನದ ಅರ್ಚಕ ಮನೆತನದವರಾಗಿದ್ದು, ಅಪಾರ ದೈವ ಭಕ್ತಿಯಿಂದ ದೇವಾಲಯದ ಅಭಿವೃದ್ಧಿಗೆ ಶ್ರಮ ವಹಿಸುತ್ತಿದ್ದರು. ಇವರ ನಿಧನಕ್ಕೆ ಹಲವಾರು ಸಂಘ ಸಂಸ್ಥೆಗಳು, ಪ್ರಮುಖರು ಸಂತಾಪ ವ್ಯಕ್ತಪಡಿಸಿದ್ದಾರೆ.

ನಾಗಮ್ಮ



ಚಾಮರಾಜನಗರ, ಮಾ.27– ತಾಲೂಕಿನ ಆಲೂರು ಗ್ರಾಮದ ನಿವಾಸಿ ದಿ. ಸಂಗಾರಾಧ್ಯರ ಪತ್ನಿ ನಾಗಮ್ಮ (91) ಅವರು ವಯೋಸಹಜ ಅನಾರೋಗ್ಯದಿಂದ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಆಲೂರಿನಲ್ಲಿ ನಡೆಯಿತು.

ಹೊಂಗನೂರು ಗ್ರಾಪಂ ಪಿಡಿಓ ವಿರುದ್ಧ ಗ್ರಾಮಸ್ಥರ ಪ್ರತಿಭಟನೆ



ಚಾಮರಾಜನಗರ, ಮಾ.27– ತಾಲೂಕಿನ ಹೊಂಗನೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿರುದ್ಧ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ರವಿರಾಮ್ ಅವರ ನೇತೃತ್ವದಲ್ಲಿ ಬ್ಲಾಕ್‌ನ ನಿವಾಸಿಗಳು ಗ್ರಾಮ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಗ್ರಾಮ ಪಂಚಾಯಿತಿ ಕಚೇರಿ ಮುಂದೆ ಜಮಾಯಿಸಿದ ಪ್ರತಿಭಟನಾನಿರತರು ಪಿಡಿಓ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ್ದ ರವಿರಾಮ್ ಮಾತನಾಡಿ, ಗ್ರಾಮ ಪಂಚಾಯಿತಿ ಪಿಡಿಓ ಚನ್ನಪ್ಪ ಮಲಬಾರ್ ನಿಗದಿತ ವೇಳೆಗೆ ಕಚೇರಿಗೆ ಬರುತ್ತಿಲ್ಲ. ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಸರಿಯಾಗಿ ಮಾಡುತ್ತಿಲ್ಲ. ಗ್ರಾಮ ಪಂಚಾಯಿತಿ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಸ್ವಇಚ್ಛೆಯಂತೆ ಆಡಳಿತ ನಡೆಸುತ್ತಿದ್ದಾರೆ. ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ಕರೆಯದೆ ಏಕಾಏಕಿ ಅಂಗಡಿ ಮಳಿಗೆಗಳಿಗೆ ಬೀಗ ಹಾಕಿದ್ದಾರೆ. ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಂಡು ಗ್ರಾಮ ಪಂಚಾಯಿತಿ ಅಭಿವೃದ್ಧಿ ಮಾಡುವಲ್ಲಿ ವಿಫಲರಾಗಿದ್ದಾರೆ ಎಂದು ದೂರಿದರು.

ಅಂಗಡಿ ಮಳಿಗೆ ಟೆಂಡರ್ ಪಡೆದಿರುವ ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಗ್ರಾಮದ ಬಸ್ ನಿಲ್ದಾಣದ ಹತ್ತಿರ ಇರುವ ಮಳಿಗೆಯನ್ನು ಟೆಂಡರ್ ಪಡೆದು ಪ್ರತಿ ತಿಂಗಳು ಬಾಡಿಗೆಯನ್ನು ಕಟ್ಟಿಕೊಂಡು ಬಂದಿರುತ್ತೇವೆ. ಆದರೂ ಪಿಡಿಓ ಏಕಾಏಕಿ ಅಂಗಡಿಗೆ ಬೀಗ ಹಾಕಿದ್ದು, ಇದರಿಂದ ತುಂಬಾ ತೊಂದರೆಯಾಗಿದೆ. ಈ ಅಂಗಡಿಯನ್ನು ನಂಬಿಕೊಂಡು ಕುಟುಂಬ ನಿರ್ವಹಣೆ ಮಾಡುತ್ತಿದ್ದೇನೆ. ಕೂಡಲೇ ಬೀಗ ತೆಗೆಸಿಕೊಡಬೇಕು. ಇಲ್ಲದಿದ್ದರೆ ಗ್ರಾಮ ಪಂಚಾಯಿತಿ ಮುಂದೆ ಕುಟುಂಬ ಸಮೇತರಾಗಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಅಳಲು ತೋಡಿಕೊಂಡರು. ಗ್ರಾಮಸ್ಥ ಮಹದೇವಪ್ರಸಾದ್ ಮಾತನಾಡಿ, ತಾಲೂಕಿನಲ್ಲಿ ಹೊಂಗನೂರು ಗ್ರಾಮ ಪಂಚಾಯಿತಿ ಹೆಚ್ಚಿನ ಜನಸಂಖ್ಯೆ ಹೊಂದಿದ್ದು, ದೊಡ್ಡ ಗ್ರಾಮ ಪಂಚಾಯಿತಿಯಾಗಿದೆ. ಇಲ್ಲಿ ಒಬ್ಬ ಪೌರಕಾರ್ಮಿಕ ಇಲ್ಲದೆ ಗ್ರಾಮದಲ್ಲಿ ಸ್ವಚ್ಛತೆಯನ್ನು ದುರ್ಬಿನ್ ಹಾಕಿ ಹುಡುಕಿ ನೋಡುವಂತಾಗಿದೆ ಎಂದರು.

ಗ್ರಾಮ ಪಂಚಾಯಿತಿಯ 1ನೇ ಬ್ಲಾಕ್‌ನಲ್ಲಿ ಕುಡಿಯುವ ನೀರು ಸರಿಯಾಗಿ ಬರುತ್ತಿಲ್ಲ. ಇದರಿಂದ ತುಂಬಾ ತೊಂದರೆಯಾಗಿದೆ. ಕುಡಿಯುವ ನೀರಿನ ಸಮಸ್ಯೆ ಹೇಳಿ ಕೊಳ್ಳಲು ಗ್ರಾಪಂಗೆ ಬಂದರೆ ಪಿಡಿಓ ಇರುವುದಿಲ್ಲ. ನಮ್ಮ ಸಮಸ್ಯೆ ಯಾರ ಹತ್ತಿರ ಹೇಳೋಣ, ಕೂಡಲೇ ಬೀದಿಗೆ ನೀರು ಸರಬರಾಜು ಮಾಡಿ ನೀರಿನ ಬವಣೆ ನೀಗಿಸಬೇಕು ಎಂದು ನಿವಾಸಿಗಳಾದ ವೆಂಕಟಮ್ಮ, ಪದ್ಮ, ಮಹ ದೇವಮ್ಮ, ಪುಟ್ಟಮ್ಮ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಮಹದೇವಸ್ವಾಮಿ, ಎಸ್.ರಾಜೇಂದ್ರ, ಭರತ್‌ಕುಮಾರ್, ಭಾಸ್ಕರ್‌ರಾವನ್, ಇತರರು ಭಾಗವಹಿಸಿದ್ದರು.

ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ವಿರುದ್ಧ ರೈತರ ಪ್ರತಿಭಟನೆ



ಚಾಮರಾಜನಗರ, ಮಾ.27– ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯು ರೈತ ವಿರೋಧಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಕಬ್ಬು ಬೆಳೆಗಾರರ ಹೋರಾಟ ಸಮಿತಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ಕೊಳ್ಳೇಗಾಲದ ಉಪವಿಭಾಗಾಧಿಕಾರಿ ಕಚೇರಿ ಮುಂಭಾಗದಿಂದ ಚಾಮರಾಜನಗರ ಜಿಲ್ಲಾಡಳಿತ ಭವನದವರೆಗೆ ಬೈಕ್ ರ್‍ಯಾಲಿ ನಡೆಸಿದ ರೈತರು, ಭವನದ ಮುಂಭಾಗ ಧರಣಿ ನಡೆಸಿದರು. ಜಿಲ್ಲಾಧಿಕಾರಿಗಳ ಮನವಿಗೆ ಸ್ಪಂದಿಸದ ರೈತರು ತಮ್ಮ ಹಕ್ಕೋತ್ತಾಯಗಳನ್ನು ಈಡೇರಿಸಬೇಕು ಎಂದು ಪಟ್ಟು ಹಿಡಿದು ಪ್ರತಿಭಟನೆಯನ್ನು ಮುಂದುವರೆಸಿದರು.

ರೈತರ ಶ್ರಮಕ್ಕೆ ಬೆಲೆ ಕೊಡದ ಬಣ್ಣಾರಿ ಅಮ್ಮನ್ ಆಡಳಿತ ಮಂಡಳಿ ಉಪಾಧ್ಯಕ್ಷ ಶರವಣ ಮತ್ತು ಕಬ್ಬು ಅಭಿವೃದ್ಧಿ ಅಧಿಕಾರಿ ಮಹದೇವಪ್ಪ ಅವರನ್ನು ಕಾರ್ಖಾನೆಯಿಂದ ವರ್ಗಾವಣೆ ಮಾಡಬೇಕು. 14 ತಿಂಗಳ ಅವಧಿ ಮೀರಿದ ಕಬ್ಬಿಗೆ ಆಗಿರುವ ನಷ್ಟವನ್ನು ಕೃಷಿ ಇಲಾಖೆಯಿಂದ ಮಾಹಿತಿ ಪಡೆದು ತುಂಬಿಕೊಡಬೇಕು. ಕಟಾವಾಗಿ ರೈತರ ಜಮೀನಿನಲ್ಲಿ ಒಣಗುತ್ತಿರುವ ಕಬ್ಬಿಗೆ ವೈಜ್ಞಾನಿಕವಾಗಿ ನಷ್ಟ ತುಂಬಿಕೊಡಬೇಕು. ಕಬ್ಬು ಕಟಾವು ವೆಚ್ಚವನ್ನು ವರ್ಷದ ಎಲ್ಲಾ ತಿಂಗಳು ಸಮಾನವಾಗಿ ಬೆಲೆ ನಿಗದಿಪಡಿಸಬೇಕು. ಸರ್ಕಾರ ನಿಗದಿ ಮಾಡಿದ ಟನ್ ಕಬ್ಬಿಗೆ 150 ರೂ. ಬಾಕಿ ಹಣವನ್ನು ಈ ಕೂಡಲೇ ರೈತರಿಗೆ ಪಾವತಿಸಬೇಕು ಎಂದು ಒತ್ತಾಯಿಸಿದರು. ಮುಖಂಡರಾದ ಕುಂತೂರು ನಂಜುಂಡಸ್ವಾಮಿ, ಲೋಕೇಶ್, ಮಹದೇವಸ್ವಾಮಿ, ಶಿವಸ್ವಾಮಿ, ವಿಷಕಂಠೇಗೌಡ, ನಾಗರಾಜು, ಬಾಬುಪಾಷ, ತೇಜಸ್, ಜವರನಾಯ್ಕ, ಸುಬ್ಬಣ್ಣ, ಮಹದೇವಪ್ಪ, ಶ್ರೀಕಂಠಸ್ವಾಮಿ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

40 ಜೊತೆ ಮಟ್ಟಿ ಕುಸ್ತಿ ಪಂದ್ಯಾವಳಿ



ಮೈಸೂರು, ಮಾ.27(ಎಂಕೆ)– ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿರುವ ಸಾಹುಕಾರ್ ಎಸ್.ಚೆನ್ನಯ್ಯ ಕ್ರೀಡಾಂಗಣದಲ್ಲಿ ಮಹಾರಾಜ ಶ್ರೀ ಜಯಚಾಮ ರಾಜ ಒಡೆಯರ್ ಕುಸ್ತಿ ಅಖಾಡ ಲೋಕಾರ್ಪಣೆ ಹಾಗೂ 40 ಜೊತೆ ಮಟ್ಟಿ ಕುಸ್ತಿ ಪಂದ್ಯಾವಳಿ ನಡೆಯಿತು. ಎಚ್.ಎಚ್.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಷನ್ ಅಧ್ಯಕ್ಷರೂ ಆದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಕುಸ್ತಿ ಅಖಾಡ ಉದ್ಘಾಟಿಸಿ, ಪಂದ್ಯಾವಳಿಗೆ ಚಾಲನೆ ನೀಡಿದರು. ಬಳಿಕ ಆರಂಭವಾದ ಕುಸ್ತಿ ಪಂದ್ಯಾವಳಿಯಲ್ಲಿ ಫಕೀರ್ ಅಹಮದ್ ಗರಡಿ ಪೈ.ಮೈಕಲ್‌ರಾಜ್, ಜಯರಾಮರಾಜ ಗರಡಿ ಸಂಘದ ಪೈ.ರವಿಶಂಕರ್, ಹುಲ್ಲಹಳ್ಳಿ ಹತ್ತೂ ಜನಗಳ ಗರಡಿಯ ಪೈ.ಕಿಶೋರ್ ನಾಯಕ್, ಚಾಮುಂಡಿ ವಿಹಾರ ಕ್ರೀಡಾಂಗಣದ ಪೈ.ಹರ್ಷ ಗೆಲುವು ಸಾಧಿಸಿದರು. ಕ್ಯಾತಮಾರನಹಳ್ಳಿ ಹತ್ತೂ ಜನಗಳ ಗರಡಿ ಪೈ.ಅನಿಲ್, ಬನ್ನೂರು ಕುಡಾಲಯ್ಯನ ಗರಡಿ ಪೈ.ಬಿ.ಕೆ.ಚೈತನ್ಯ, ಪೈ.ನಂದಿನಿ, ಎಸ್.ತೇಜಸ್, ನಜರ್‌ಬಾದ್ ಹತ್ತೂ ಜನಗಳ ಗರಡಿಯ ಪೈ.ಧನುಷ್‌ಕುಮಾರ್, ಮಂಡ್ಯ ಜಿಲ್ಲಾ ಹವ್ಯಾಸಿ ಕುಸ್ತಿ ಸಂಘದ ಪೈ.ಸ್ಫೂರ್ತಿ ಮತ್ತಿತರರು ಜಯಭೇರಿ ಭಾರಿಸಿದರೆ, ಹಲವು ಜೋಡಿಗಳ ಕುಸ್ತಿ ಸಮಬಲಗೊಂಡವು. ಹಿರಿಯ ಪೈಲ್ವಾನರು, ಮತ್ತಿತರರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಮಾಡಾಳ್ ವಿರೂಪಾಕ್ಷಪ್ಪ ಬಂಧನ

ಈ ವೇಳೆ ಇನ್ನೆರಡು ದಿನ ಕಳೆದರೆ ಚುನಾವಣಾ ನೀತಿ ಸಂಹಿತೆ ಜಾರಿಯಾಗಬಹುದು. ಹಾಗಾಗಿ ನಮ್ಮ ಅವಧಿಯಲ್ಲಾದ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆಯನ್ನು ಈಗಲೇ ಮಾಡುತ್ತಿದ್ದೇವೆ. ಇದರಲ್ಲಿ ತರಾತುರಿಯೇನೂ ಇಲ್ಲ ಎಂದು ಹೇಳಿದ್ದ ಅವರು, ಚುನಾವಣೆಯ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸದೆ ಸ್ಥಳದಿಂದ ಹೊರಟು ಹೋಗಿದ್ದರು.

■**ಪ್ರಕರಣದ ಹಿನ್ನೆಲೆ:** ಬೆಂಗಳೂರು ಜಲಮಂಡಳಿ ಮತ್ತು ಒಳಚರಂಡಿ ಜಲ ಮಂಡಳಿಯ ಮುಖ್ಯ ಲೆಕ್ಕಾಧಿಕಾರಿಯಾಗಿದ್ದ ಮಾಡಾಳ್ ಪುತ್ರ ಪ್ರಶಾಂತ್, ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆಗೆ ಕಚ್ಚಾ ವಸ್ತುಗಳ ಪೂರೈಸುವ ಟೆಂಡರ್ ನೀಡಲು ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಎಂಬ ಆರೋಪವಿದೆ. ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಮಾಡಾಳ್ ಅವರ ಪುತ್ರ ಪ್ರಶಾಂತ್ ಮಾಡಾಳ್ ಲಂಚ ಸ್ವೀಕರಿಸುತ್ತಿದ್ದ ವೇಳೆ ಬಲೆಗೆ ಕೆಡವಿದ್ದರು. ಬೆಂಗಳೂರಿನ ಕ್ರೆಸೆಂಟ್ ರಸ್ತೆಯಲ್ಲಿರುವ ವಿರೂಪಾಕ್ಷಪ್ಪ ಕಚೇರಿಯಲ್ಲಿ 3 ಬ್ಯಾಗ್‌ಗಳಲ್ಲಿ 2 ಸಾವಿರ ರೂ. ಮತ್ತು 500 ರೂ. ನೋಟುಗಳ ಕಂತೆ ಪತ್ತೆ ಆಗಿದ್ದವು. ನಂತರ ಮಾಡಾಳ್ ವಿರೂಪಾಕ್ಷಪ್ಪರನ್ನು ಪ್ರಮುಖ ಆರೋಪಿಯಾಗಿ ಲೋಕಾಯುಕ್ತ ಎಫ್‌ಐಆರ್ ದಾಖಲಿಸಿದ್ದರು. ನಂತರ ಅವರ ದಾವಣಗೆರೆ ನಿವಾಸದ ಮೇಲೂ ದಾಳಿ ನಡೆಸಿದಾಗಲೂ ಕೋಟ್ಯಂತರ ರೂ. ನಗದು ಪತ್ತೆಯಾಗಿತ್ತು. ಅದರ ನಡುವೆ ನಾಪತ್ತೆಯಾಗಿದ್ದ ಮಾಡಾಳ್ ವಿರೂಪಾಕ್ಷಪ್ಪಗೆ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೆ.ನಟರಾಜನ್ ಅವರು ಮಾ.7ರಂದು ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ್ದರು. ಬಳಿಕ ಕ್ಷೇತ್ರಕ್ಕೆ ವಾಪಸ್ಸಾದ ವಿರೂಪಾಕ್ಷಪ್ಪ ಅವರನ್ನು ಅವರ ಅಭಿಮಾನಿಗಳು ಮೆರವಣಿಗೆ ನಡೆಸಿ ಸಂಭ್ರಮದಿಂದ ಸ್ವಾಗತಿಸಿದ್ದರು. ಈ ವೇಳೆ ನಾನೇನೂ ತಪ್ಪು ಮಾಡಿಲ್ಲ. ಲೋಕಾಯುಕ್ತ ಪೊಲೀಸರು ಮನೆಯಲ್ಲಿ ವಶಪಡಿಸಿಕೊಂಡಿರುವುದು ನನ್ನ ಸ್ವಂತ ಹಣ. ಸೂಕ್ತ ದಾಖಲೆ ನೀಡಿ ಅದನ್ನು ಹಿಂಪಡೆಯುತ್ತೇವೆ ಎಂದಿದ್ದರು.

■**ವಕೀಲರ ಸಂಘ ಸಿಜೆಐಗೆ ಪತ್ರ:** ಮಾಡಾಳ್ ವಿರೂಪಾಕ್ಷಪ್ಪರಿಗೆ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ ಬೆನ್ನಲ್ಲೆ ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಮತ್ತು ಖಜಾಂಚಿ ಎಂ.ಟಿ. ಹರೀಶ್ ನೇತೃತ್ವದಲ್ಲಿ ತುರ್ತು ಸಭೆ ನಡೆಸಿ, ಈ ಸಂಬಂಧ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರಿಗೆ ಗಂಭೀರವಾದ ಕಾಳಜಿಯುಕ್ತ ಪತ್ರ ವೊಂದನ್ನು ಬರೆದು, ಆತಂಕ ವ್ಯಕ್ತಪಡಿಸಿದ್ದರು. ಹೈಕೋರ್ಟ್ ಸಾಮಾನ್ಯ ಪ್ರಕ್ರಿಯೆ ಅನುಸಾರ ಹೊಸ ಪ್ರಕರಣಗಳು ಅದರಲ್ಲೂ ನಿರೀಕ್ಷಣಾ ಜಾಮೀನು ಕೋರಿಕೆಯ ಕ್ರಿಮಿನಲ್ ಅರ್ಜಿಗಳು ದಾಖಲಾದರೆ, ಅವು ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಲು ವಾರಗಟ್ಟಲೆ ಸಮಯ ತೆಗೆದುಕೊಳ್ಳುತ್ತವೆ. ಆದರೆ, ದೊಡ್ಡವರ ಪ್ರಕರಣಗಳನ್ನು ಮಾತ್ರ ದಿನಬೆಳಗಾಗುವುದರೊಳಗೆ ಪುರಸ್ಕರಿಸಲಾಗುತ್ತಿದೆ. ಈ ನಿಲುವನ್ನೇ ಶ್ರೀಸಾಮಾನ್ಯರ ವಿಷಯದಲ್ಲೂ ಅನುಸರಿಸುವಂತಾಗಬೇಕು. ಎಲ್ಲ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ಒಂದೇ ದಿನದಲ್ಲಿ ನ್ಯಾಯಪೀಠದ ಎದುರು ವಿಚಾರಣೆಗೆ ನಿಗದಿಯಾ ಗುವಂತೆ ಪೋಸ್ಟ್ ಮಾಡಲು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ರಿಜಿಸ್ಟ್ರಿ ಕಚೇರಿಗೆ ನಿರ್ದೇಶಿಸುವಂತಾಗಬೇಕು ಎಂದು ಮನವಿ ಮಾಡಲಾಗಿತ್ತು.

■**ಅರ್ಜಿ ವಜಾ:** ಮಾಡಾಳ್ ವಿರೂಪಾಕ್ಷಪ್ಪ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೈಕೋರ್ಟ್ ಇಂದು ವಜಾಗೊಳಿಸಿದೆ. ಮಧ್ಯಂತರ ಆದೇಶ ನೀಡುವ ಸಂದರ್ಭದಲ್ಲಿ ಪ್ರಾಸಿಕ್ಯೂಷನ್ ಬಳಿ ಆರೋಪಿ ವಿರೂಪಾಕ್ಷಪ್ಪ ವಿರುದ್ಧ ಯಾವುದೇ ಸಾಕ್ಷ್ಯ ಇರಲಿಲ್ಲ ಆದರೆ, ಸೂಕ್ತ ಸಾಕ್ಷ್ಯಗಳನ್ನು ಸಂಗ್ರಹಿಸಬೇಕಾದರೆ ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸುವ ಅವಶ್ಯಕತೆ ಇದೆ ಎಂಬುದನ್ನು ಪ್ರಾಸಿಕ್ಯೂಷನ್ ವಿಚಾರಣೆ ವೇಳೆ ನ್ಯಾಯಪೀಠಕ್ಕೆ ಮನದಟ್ಟು ಮಾಡಿಕೊಟ್ಟಿದೆ. ವಿರೂಪಾಕ್ಷಪ್ಪ ಅವರು ಲಂಚಕ್ಕೆ ಬೇಡಿಕೆ ಇರಿಸಿದ್ದರು ಮತ್ತು ಈ ಲಂಚದ ಹಣ ಪಡೆಯುವಲ್ಲಿ ಅವರ ಪುತ್ರ ಪ್ರಶಾಂತ್ ಪಾತ್ರ ವಹಿಸಿದ್ದಾರೆ ಎಂಬುದನ್ನು ಮನವರಿಕೆ ಮಾಡಿದೆ. ಹಾಗಾಗಿ, ಆರೋಪಿಯನ್ನು ಬಂಧಿಸಿಯೇ ವಿಚಾರಣೆ ನಡೆಸುವ ಅಗತ್ಯವಿದೆ ಎಂದು ನ್ಯಾಯಪೀಠ ತನ್ನ 24 ಪುಟಗಳ ಆದೇಶದಲ್ಲಿ ಅಭಿಪ್ರಾಯಪಟ್ಟಿದೆ. ಲೋಕಾಯುಕ್ತ ಪರ ಹಿರಿಯ ವಕೀಲ ಅಶೋಕ ಹಾರನಹಳ್ಳಿ ಮತ್ತು ಬಿ.ಬಿ.ಪಾಟೀಲ್ ವಾದ ಮಂಡಿಸಿದ್ದರು.

ಫೋರ್ಜರಿ ಮಾಡಿ 1.24 ಕೋಟಿಗೆ ಕನ್ನ

ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಎಸ್‌ಬಿಐ ಶಾಖೆಯಲ್ಲಿ ಖಾತೆಯೊಂದನ್ನು ತೆರೆದಿತ್ತು. ಈ ಖಾತೆಯ ಚೆಕ್ ಪುಸ್ತಕದಿಂದ 13 ಚೆಕ್ ಹಾಳೆಗಳನ್ನು ಬಳಸಿಕೊಂಡು ಹಿಂದಿನ ಅಪರ ಜಿಲ್ಲಾಧಿಕಾರಿ ಆನಂದ್ ಅವರ ಸಹಿಯನ್ನು ಫೋರ್ಜರಿ ಮಾಡಿ ರಾಜೇಶ್ ತನ್ನ ಹಾಗೂ ಇನ್ನೊಬ್ಬರ ಖಾತೆಗೆ ಹಣ ವರ್ಗಾವಣೆ ಮಾಡಿಕೊಂಡಿದ್ದಾನೆ ಎಂದು ಆರೋಪಿಸಲಾಗಿದೆ. 100 ಹಾಳೆಯ ಚೆಕ್ ಪುಸ್ತಕದಲ್ಲಿ ಹಿಂಭಾಗದಿಂದ ಹಾಳೆಗಳನ್ನು ತೆಗೆದು ಹಣ ವರ್ಗಾವಣೆ ಮಾಡಲಾಗಿತ್ತು. ಹಿರಿಯ ಅಧಿಕಾರಿಗಳು ಚೆಕ್ ಪುಸ್ತಕವನ್ನು ನೋಡುವ ಸಂದರ್ಭದಲ್ಲಿ ಪುಸ್ತಕದ ಮಧ್ಯದಲ್ಲಿ ಚೆಕ್ ಹಾಳೆಗಳನ್ನು ಹರಿಯಲಾಗಿತ್ತು. ಅನುಮಾನ ಬಂದು ಪರಿಶೀಲಿಸಿದಾಗ, ಬ್ಯಾಂಕ್ ಖಾತೆಯಿಂದ ಹಣ ಬೇರೆಯವರ ಖಾತೆಗೆ ವರ್ಗಾವಣೆ ಆಗಿರುವುದು ಬೆಳಕಿಗೆ ಬಂತು ಎಂದು ಮೂಲಗಳು ತಿಳಿಸಿವೆ.

ಬ್ಯಾಂಕ್ ಸಿಬ್ಬಂದಿ ವಿರುದ್ಧ ದೂರು: ಆನಂದ್ ಅವರು ವರ್ಗಾವಣೆಗೊಂಡು ಎರಡು ವರ್ಷ ಆಗುತ್ತಾ ಬಂದಿದೆ. ಅವರ ನಕಲಿ ಸಹಿಯನ್ನು ಚೆಕ್‌ಗೆ ಹಾಕಲಾಗಿದೆ. ಎಸ್‌ಬಿಐ ಸಿಬ್ಬಂದಿ ಕೂಡ ಇದನ್ನು ಗಮನಿಸಿಲ್ಲ. ಎಡಿಸಿ ಸಹಿ ಇದ್ದ ಕಾರಣಕ್ಕೆ ಹಣ ವರ್ಗಾವಣೆ ಮಾಡಿದ್ದಾರೆ. ಅಲ್ಲಿಯ ಸಿಬ್ಬಂದಿಯಿಂದಲೂ ಲೋಪ ಆಗಿದೆ. ಅವರ ವಿರುದ್ಧವೂ ದೂರು ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಆರೋಪಿಯ ಬಂಧನವನ್ನು ಪೊಲೀಸರು ಖಚಿತಪಡಿಸಿದ್ದು, ತನಿಖೆ ಮುಂದುವರಿದಿದೆ ಎಂದು ಮಾಹಿತಿ ನೀಡಿದ್ದಾರೆ.

ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಪ್ರಕಟ

ಅದರ ಆಧಾರದ ಮೇಲೆ ವರಿಷ್ಠರು ಅಭ್ಯರ್ಥಿಗಳ ಆಯ್ಕೆ ಪೂರ್ಣ ಹೊಣೆಯನ್ನು ಹೊತ್ತಿದ್ದಾರೆ. ಎರಡು ವರದಿ ಗಳನ್ನು ಮುಂದಿಟ್ಟುಕೊಂಡು ಅಭ್ಯರ್ಥಿಗಳ ಆಯ್ಕೆ ನಡೆಯಲಿದ್ದು, ಈ ಬಾರಿ ಕೆಲವು ಹೊಸ ಮುಖಗಳಿಗೆ ಅವ ಕಾಶ ದೊರೆಯುವ ಸಾಧ್ಯತೆ ಇದೆ. ವೈದ್ಯಕೀಯ, ಕಾನೂನು ವಿಭಾಗ, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವವರು, ಉದ್ದಿಮೆದಾರರು, ಕೃಷಿಕರು, ಪತ್ರಕರ್ತರು ಸಾಹಿತಿ, ಕಲಾವಿದರು ಹಾಗೂ ಸರ್ಕಾರಿ ಸೇವಾನುಭವ ಇರುವವರಿಗೆ ಕೆಲ ವೊಂದಷ್ಟು ಸ್ಥಾನಗಳನ್ನು ಬಿಟ್ಟುಕೊಡಲು ಪಕ್ಷ ನಿರ್ಧರಿಸಿದೆ ಎನ್ನಲಾಗಿದೆ. ಕೇವಲ ರಾಜಕೀಯ ರಂಗದಿಂದ ಬಂದವರಿಗೆ ಅಷ್ಟೇ ಅಲ್ಲದೆ, ಸಮಾಜದ ವಿವಿಧ ಕ್ಷೇತ್ರ ಗಳಲ್ಲಿ ಸೇವೆ ಸಲ್ಲಿಸಿರುವವರನ್ನು ಗುರುತಿಸಿ, ಟಿಕೆಟ್ ನೀಡಿದ್ದೇವೆ ಎಂಬುದನ್ನು ತೋರಿಸುವ ಉದ್ದೇಶ ಪಕ್ಷಕ್ಕಿದೆ.

ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳ ಪೂರ್ಣ ಚಿತ್ರಣವನ್ನು ಮುಂದಿಟ್ಟುಕೊಂಡೇ ವರಿಷ್ಠರು ಅಭ್ಯರ್ಥಿಗಳ ಆಯ್ಕೆ ಕಸರತ್ತು ನಡೆಸಿದ್ದಾರೆ. ಈಗಾಗಲೇ ಜೆಡಿಎಸ್ ಮತ್ತು ಕಾಂಗ್ರೆಸ್ ಮೊದಲ ಪಟ್ಟಿ ಬಿಡುಗಡೆಗೊಳಿಸಿ, ಎರಡನೇ ಪಟ್ಟಿ ಬಿಡುಗಡೆಗೆ ಆ ಪಕ್ಷಗಳು ಸಿದ್ಧತೆ ಮಾಡಿಕೊಂಡಿವೆ. ಇಷ್ಟಾದರೂ ಬಿಜೆಪಿಯಲ್ಲಿ ಪಟ್ಟಿಯ ಬಗ್ಗೆ, ರಾಜ್ಯ ನಾಯಕರಿಗೆ ಯಾವುದೇ ಮಾಹಿತಿ ಇಲ್ಲ. ವರಿಷ್ಠರು ಹೇಳಿದಂತೆ ಸಂಘಟನೆಯಲ್ಲಿ ಇಲ್ಲಿನ ನಾಯಕರು ತೊಡಗಿಸಿಕೊಂಡಿದ್ದಾರೆ. ತಮಗೆ ಟಿಕೆಟ್ ದೊರಕುವುದಿಲ್ಲ ಎಂಬ ಮಾಹಿತಿ ಕೆಲವರಿಗೆ ದೊರೆಯುತ್ತಿದ್ದಂತೆ ಬಿಜೆಪಿ ತೊರೆದು, ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ. ವರ್ಚಸ್ಸು ಮತ್ತು ಪ್ರಭಾವಿಗಳು ಪಕ್ಷ ತೊರೆಯಲು ಮುಂದಾಗುತ್ತಿದ್ದಾರೆ ಎಂಬ ಮಾಹಿತಿ ದೊರೆಯುತ್ತಿದ್ದಂತೆ ಪಕ್ಷದ ವರಿಷ್ಠರು ಮಧ್ಯೆ ಪ್ರವೇಶಿಸಿ ಅವರನ್ನು ಉಳಿಸಿಕೊಳ್ಳುವ ಕಾರ್ಯ ನಿರಂತರವಾಗಿ ನಡೆದಿದೆ. ಸರ್ಕಾರದ ಉನ್ನತ ಮೂಲಗಳ ಪ್ರಕಾರ ಏಪ್ರಿಲ್ 3 ರಂದು ಚುನಾವಣಾ ವೇಳಾಪಟ್ಟಿ ಪ್ರಕಟಗೊಳ್ಳ ಬಹುದೆಂಬ ನಿರೀಕ್ಷೆ ಇದೆ. ಇದಾದ ನಂತರವೇ ಬಿಜೆಪಿ ಪಟ್ಟಿ ಹೊರಬರಲಿದೆ.

ಒಕ್ಕಲಿಗರು, ಲಿಂಗಾಯತರಿಗೆ ಮೀಸಲಾತಿ ಮರುಹಂಚಿಕೆ ರಾಜಕೀಯ ಸ್ಟಂಟ್ ಅಷ್ಟೇ

●ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ವಾಗ್ದಾಳಿ ●ಸಮುದಾಯಗಳ ನಡುವೆ ಸಂಘರ್ಷ ತಂದು ರಾಜಕೀಯ ಲಾಭ ಗಳಿಸುವ ಷಡ್ಯಂತರ ●ಅದೂ ಚುನಾವಣೆ ಸಂದರ್ಭದಲ್ಲಿ ಈ ನಿರ್ಧಾರ ಕೈಗೊಂಡ ಔಚಿತ್ಯವೇನು?



ಮೈಸೂರು,ಮಾ.27(ಎಂಟಿವೈ)– ವಿಧಾನಸಭಾ ಚುನಾವಣೆ ಹೊಸ್ತಿಲಲ್ಲಿ ಸರ್ಕಾರ ಮೀಸಲಾತಿ ಮರು ಹಂಚಿಕೆಯ ಮೂಲಕ ಒಕ್ಕಲಿಗರು, ಲಿಂಗಾಯತ ಸಮುದಾಯದ ಜನರ ಕಿವಿ ಮೇಲೆ ಹೂವು ಇಟ್ಟು, ಬಿಜೆಪಿ ರಾಜಕೀಯ ಲಾಭ ಮಾಡಿಕೊಳ್ಳಲು ಮುಂದಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

ಮೈಸೂರಿನ ಶಾಸಕ ಸಾ.ರಾ.ಮಹೇಶ್ ಕಚೇರಿ ಆವರಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದು, ನೀತಿ ಸಂಹಿತೆ ಜಾರಿಗೊಳ್ಳಲು ದಿನಗಣನೆ ಆರಂಭವಾಗಿರುವ ಬೆನ್ನಲ್ಲೇ ಬಿಜೆಪಿ ಸರ್ಕಾರಕ್ಕೆ ಮೀಸಲಾತಿ ಹೆಚ್ಚಳದ ಬಗ್ಗೆ ಪ್ರೇಮ ಉಕ್ಕಿ ಹರಿದಿದೆ. ಮೀಸಲಾತಿ ಅಸ್ತ್ರವನ್ನು ಮುಂದಿಟ್ಟುಕೊಂಡು ರಾಜಕೀಯ ಲಾಭ ಮಾಡಿಕೊಳ್ಳಲು ಮುಂದಾಗಿದೆ. ಅಲ್ಲದೆ, ಮೀಸಲಾತಿ ಹೆಸರೇಳಿ ಜನರನ್ನು ವಂಚಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕಳೆದ 3–4 ತಿಂಗಳ ಹಿಂದೆ ಘೋಷಿಸಿರುವ ಎಸ್‌ಸಿ–ಎಸ್‌ಟಿ ಸಮುದಾಯದ ಮೀಸಲಾತಿ ಹೆಚ್ಚಳವೇ ಇನ್ನೂ ಜಾರಿಗೆ ಬಂದಿಲ್ಲ. ಈಗ ಮತ್ತೆ ಲಿಂಗಾಯತ, ಒಕ್ಕಲಿಗರ ಮೀಸಲಾತಿ ಮರುಹಂಚಿಕೆ ಮಾಡಿರುವುದು ಅನುಷ್ಠಾನಕ್ಕೆ ಬರುತ್ತದೆಯೇ? ಕಳೆದ 3 ವರ್ಷದಿಂದ ಏನೂ ಮಾಡಲಿಲ್ಲ. ಚುನಾವಣೆ ಘೋಷಣೆಯಾದರೆ, ಇದು ಯಾವುದೂ ಕಾರ್ಯರೂಪಕ್ಕೆ ಬರುವುದಿಲ್ಲ. ಮೀಸಲಾತಿ ಎಂಬುದು ಬಿಜೆಪಿಗೆ ಮಕ್ಕಳ ಆಟಿಕೆಯಾಗಿದೆ. ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸು ಹಾಗೂ ಸಲಹೆಯನ್ನೂ ತೆಗೆದುಕೊಳ್ಳದೇ ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡಿದ್ದಾರೆ. ಇದಕ್ಕೆ ಕಾನೂನಾತ್ಮಕ, ವೈಜ್ಞಾನಿಕ ಆಧಾರಗಳೂ ಇಲ್ಲ. ಹೀಗಾದರೆ, ಇದೆಲ್ಲ ಕಾಗದದಲ್ಲೇ ಉಳಿದುಕೊಳ್ಳಲಿದೆ ಎಂದರು.

ಮಮತಾ ಬ್ಯಾನರ್ಜಿ ಜೆಡಿಎಸ್ ಪರ ಪ್ರಚಾರ

ಮುಂದಿನ ಎರಡ್ಮೂರು ದಿನಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳ 2ನೇ ಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು. ಜತೆಗೆ, ಮತಪ್ರಚಾರಕ್ಕಾಗಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ರಾಜ್ಯಕ್ಕೆ ಎರಡ್ಮೂರು ಸಲ ಬರಲಿದ್ದಾರೆ ಎಂದು ತಿಳಿಸಿದರು.

ಪಂಚರತ್ನ ಯಾತ್ರೆ ಮುಂದುವರಿಕೆ

ಸಮಾರೋಪಗೊಂಡಿದ್ದರೂ ಜೆಡಿಎಸ್ ಪಂಚರತ್ನ ಯಾತ್ರೆ ಮುಕ್ತಾಯಗೊಂಡಿಲ್ಲ. ಇದು ಏಪ್ರಿಲ್ 10ರ ವರೆಗೂ ಮುಂದುವರಿಯಲಿದೆ. ನಾಳೆಯಿಂದ(ಮಾ.28) ಬೆಂಗಳೂರಿನ ವಿವಿಧ ಕ್ಷೇತ್ರದಲ್ಲಿ ರಥಯಾತ್ರೆ ನಡೆಯಲಿದೆ ಏ.3ಕ್ಕೆ ಕೊಳ್ಳೇಗಾಲ, ಏ.4–5ಕ್ಕೆ ಹನೂರು, ಏ.6ಕ್ಕೆ ಪಿರಿಯಾಪಟ್ಟಣ, ಏ.7ಕ್ಕೆ ಕೆ.ಆರ್.ನಗರದಲ್ಲಿ ಕಾರ್ಯಕ್ರಮ ನಿಗದಿಯಾಗಿದೆ ಎಂದರು.

ಒಡೆದು ಆಳುವ ನೀತಿ: ಹಿಂದುಳಿದ ವರ್ಗಗಳ ಪ್ರವರ್ಗ 2ಬಿ ಅಡಿಯಲ್ಲಿ ಮುಸ್ಲಿಮರಿಗೆ ನೀಡಿದ್ದ ಮೀಸಲಾತಿಯನ್ನು ಕಿತ್ತು ಲಿಂಗಾಯತರು, ಒಕ್ಕಲಿಗರಿಗೆ ಹಂಚಿಕೆ ಮಾಡಿರುವ ಬಿಜೆಪಿ ಸರ್ಕಾರದ ಕ್ರಮ ಸಮಾಜವನ್ನು ಒಡೆದು ಆಳುವ ನೀತಿಯಾಗಿದೆ. ಸರ್ಕಾರದ ನಡೆ ಖಂಡಿಸಿ, ಮುಸ್ಲಿಮರು ಬೀದಿಗಿಳಿದು ಹೋರಾಟ ಮಾಡಿದರೆ, ಅದನ್ನೇ ಮುಂದಿಟ್ಟುಕೊಂಡು ಒಕ್ಕಲಿಗ ಹಾಗೂ ಲಿಂಗಾಯಿತರನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟಲು ಸಂಚು ನಡೆಸಲಾಗಿದೆ. ಚುನಾವಣೆಯಲ್ಲಿ ಬೀದಿ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟು ಮತ ಗಳಿಸುವ ಷಡ್ಯಂತ್ರವಾಗಿದೆ. ಇದು ರಾಜ್ಯದಲ್ಲಿ ಬೆಂಕಿ ಹಚ್ಚುವ ಕೆಲಸ ಎಂದು ಆರೋಪಿಸಿದರು.

ಪಿಎಂ ಸ್ಥಾನಕ್ಕೆ ಅಗೌರವ: ನನ್ನನ್ನು ಸಮಾಧಿ ಮಾಡಲು ಹೊರಟಿದ್ದಾರೆ ಎಂಬ ಹೇಳಿಕೆಯಿಂದ ಪ್ರಧಾನಿ ತಮ್ಮ ಸ್ಥಾನದ ಗೌರವ ಕಳೆಯುತ್ತಿದ್ದಾರೆ. ಜನರ ಮುಂದೆ ಈ ರೀತಿ ಪದ ಬಳಕೆಯಿಂದ ಯಾರ ಸಮಾಧಿ ಮಾಡಲು ಮುಂದಾಗಿದ್ದೀರಿ? ಬಿಜೆಪಿ ಇಡೀ ಸಂವಿಧಾನವನ್ನೇ ಸಮಾಧಿ ಮಾಡಲು ಹುನ್ನಾರ ನಡೆಸಿದೆ. ರಾಜ್ಯದಲ್ಲಿ ಪ್ರವಾಹದಿಂದ ಜನರ ಜಲಸಮಾಧಿಯಾದಾಗಲೂ ಇವರು ಅನುಕಂಪ ತೋರಿಸಲಿಲ್ಲ. ರೈತರು ಆತ್ಮಹತ್ಯೆ ಮಾಡಿಕೊಂಡರೂ ಸಾಂತ್ವನ ಹೇಳಲಿಲ್ಲ. ಮಹಾರಾಷ್ಟ್ರದಲ್ಲಿ ಕನ್ನಡಿಗರ ಮೇಲೆ ದಬ್ಬಾಳಿಕೆ ನಡೆದರೂ ನ್ಯಾಯ ಕೊಡಿಸುವ ಸೌಜನ್ಯ ತೋರಲಿಲ್ಲ. ಆದರೀಗ ಚುನಾವಣೆ ಸಂದರ್ಭದಲ್ಲಿ ತಮ್ಮ ಸಮಾಧಿ ಕುರಿತು ಅವರೇ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ಜಾಹೀರಾತಿನಲ್ಲಿ ಸಾಧನೆ: ಬಿಜೆಪಿ ಸರ್ಕಾರದ ಅಭಿವೃದ್ಧಿ ಬರೀ ಬಣ್ಣ ಬಣ್ಣದ ಜಾಹೀರಾತಿಗೆ ಸೀಮಿತವಾಗಿದೆ. ಚುನಾವಣೆಯ ಹೊತ್ತಿನಲ್ಲಿ ಸರ್ಕಾರವು ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಮಾಡುತ್ತಿರುವುದು ಯಾವ ಪುರುಷಾರ್ಥಕ್ಕೆ? ಇದಕ್ಕಾಗಿ ಬಜೆಟ್‌ನಲ್ಲಿ ಹಣ ಇಟ್ಟಿಲ್ಲ. ಇದು ಜನರಿಗೆ ಟೋಪಿ ಹಾಕುವ ಕೆಲಸ. ಉತ್ತರ ಪ್ರದೇಶದಂತೆ ಕರ್ನಾಟಕದಲ್ಲಿ ಇವರ ಆಟ ನಡೆಯಲ್ಲ ಎಂದರು.

ಆತ್ಮವಿಶ್ವಾಸವಿಲ್ಲ: ಸಿದ್ದರಾಮಯ್ಯ ಕ್ಷೇತ್ರ ಆಯ್ಕೆ ಅವರ ಮನೆಯ ಹೈಕಮಾಂಡ್ ಕೈಯ್ಯಲ್ಲಿದೆ. ಅವರ ಹೇಳಿಕೆಯಿಂದಲೇ ಅದು ಸಾಬೀತಾಗುತ್ತದೆ. ಅವರಿಗೆ ಆತ್ಮ ವಿಶ್ವಾಸ ಇಲ್ಲ. ಸೋಲುವ ಭಯವಿದೆಯೋ ಗೊತ್ತಿಲ್ಲ. 5 ವರ್ಷ ಸಿಎಂ ಆಗಿದ್ದವರಿಗೆ ಈ ರೀತಿ ದಯನೀಯ ಸ್ಥಿತಿ ಬರಬಾರದು. ಅವರು ಎರಡು ಅಲ್ಲ, 3 ಕ್ಷೇತ್ರದಲ್ಲೂ ಸ್ಪರ್ಧೆ ಮಾಡಬಹುದು ಎಂದರು.

ಕಾಂಗ್ರೆಸ್ ನಾಯಕರು ಮುಂಬರುವ ಚುನಾವಣೆಯಲ್ಲಿ 125, 130, 140 ಹಾಗೂ 150 ಸ್ಥಾನ ಗೆಲ್ಲುತ್ತೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಅವರು ಮಾಡಿಸಿರುವ ಸಮೀಕ್ಷೆ ವರದಿಯ ಅಂಕಿಅಂಶದ ಫೋಟೋಗೆ ಕಟ್(ಫ್ರೇಮ್) ಹಾಕಿಸಿಕೊಂಡು ಪಕ್ಷದ ಕಚೇರಿಯಲ್ಲಿ ಇಟ್ಟುಕೊಳ್ಳಲಿ. ಈ ಬಾರಿ ಕಾಂಗ್ರೆಸ್ 70–75 ಸ್ಥಾನವನ್ನು ದಾಟಲ್ಲ ಎಂದು ಲೇವಡಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಜಿ.ಟಿ. ದೇವೇಗೌಡ, ಸಾ.ರಾ.ಮಹೇಶ್, ಅಶ್ವಿನ್ ಕುಮಾರ್, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸೇರಿದಂತೆ ಇನ್ನಿತರರು ಇದ್ದರು.

ಸಿಎಂ ಕ್ಷೇತ್ರದಲ್ಲೇ ಕಡುಬಡತನ, ಅಪೌಷ್ಟಿಕತೆ ತಾಂಡವ

ಮುಖ್ಯಮಂತ್ರಿ ಪ್ರತಿನಿಧಿಸುವ ಹಾವೇರಿ ಸೇರಿದಂತೆ ರಾಜ್ಯದ 10 ಜಿಲ್ಲೆಗಳಲ್ಲಿ ಬಡ ಜನರು ಮತ್ತು ಅಪೌಷ್ಟಿಕತೆಯಿಂದ ಮಕ್ಕಳು ನರಳುತ್ತಿದ್ದಾರೆ ಎಂಬುದು ಕೇಂದ್ರ ಸರ್ಕಾರದ ವರದಿಯಿಂದ ಬಹಿರಂಗವಾಗಿದೆ. ಇದು ಡಬಲ್ ಇಂಜಿನ್ ಸರ್ಕಾರದ ಸಾಧನೆ. ವರದಿ ಪ್ರಕಾರ ಈ ಜಿಲ್ಲೆಗಳಲ್ಲಿ ಶೇ.35 ರಷ್ಟು ಕುಟುಂಬಗಳು ಬಡತನದ ಬೇಗೆಯಲ್ಲಿವೆ. 5ರಿಂದ 8 ವರ್ಷದ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ವಾರಕ್ಕೆ ಒಮ್ಮೆ ರಾಜ್ಯಕ್ಕೆ ಬರುತ್ತಿರುವ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರಿಗೆ ಇದು ಕಾಣುತ್ತಿಲ್ಲವೇ? ಈ ವಿಷಯದಲ್ಲಿ ಕೇಂದ್ರ, ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿವೆ.

—— ವಿಧಾನಸಭಾ ಚುನಾವಣೆ ಕ್ಷಣಗಣನೆ ——

ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ



ಮೈಸೂರು,ಮಾ.27(ಎಂಟಿವೈ)– ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರಲ್ಲಿ ಚುನಾವಣಾ ಅಕ್ರಮ ತಡೆಗಟ್ಟಲು ತಪಾಸಣೆ ಚುರುಕುಗೊಳಿಸಲಾಗಿದ್ದು, ಪ್ರತಿಯೊಂದು ವಾಹನದ ಮೇಲೂ ಪೊಲೀಸರು ಹದ್ದಿನ ಕಣ್ಣಿಟ್ಟು, ತಪಾಸಣೆ ನಡೆಸುತ್ತಿದ್ದಾರೆ.

ಚುನಾವಣಾ ನೀತಿ ಸಂಹಿತೆ ಜಾರಿಗೊಳಿಸುವ ಮುನ್ನವೇ ಮೈಸೂರಲ್ಲಿ ಕಟ್ಟುನಿಟ್ಟಿನ ತಪಾಸಣಾ ಕಾರ್ಯ ಆರಂಭಿಸಲಾಗಿತ್ತು. ಮೈಸೂರು ನಗರ ವ್ಯಾಪ್ತಿಯಲ್ಲೇ 30ಕ್ಕೂ ಹೆಚ್ಚು ಹಾಗೂ ತಾಲೂಕು ಕೇಂದ್ರಗಳಲ್ಲಿ 45ಕ್ಕೂ ಹೆಚ್ಚು ಚೆಕ್‌ಪೋಸ್ಟ್ ತೆರೆಯಲಾಗಿದ್ದು, ವಾಹನಗಳ ತಪಾಸಣೆ ಬಿಗಿಗೊಳಿಸಲಾಗಿದೆ. ಮತದಾರರಿಗೆ ಹಂಚಲು ವಿವಿಧ ವಸ್ತುಗಳನ್ನು ಸಾಗಿಸುವ ಸಾಧ್ಯತೆ ಹಿನ್ನೆಲೆಯಲ್ಲಿ ಪೊಲೀಸರು ಹದ್ದಿನ ಕಣ್ಣಿಟ್ಟು ತಪಾಸಣೆ ಮುಂದುವರೆಸಿದ್ದಾರೆ.

ಪ್ರತಿ ನಗದು ವಸ್ತುವಿಗೆ ದಾಖಲೆ ಇಟ್ಟುಕೊಳ್ಳುವುದು ಕಡ್ಡಾಯವಾಗಿದ್ದು, ದಾಖಲೆ ಇಲ್ಲದೆ ವಸ್ತುಗಳ ಸಾಗಾಟಕ್ಕೆ ಕಡಿವಾಣ ಹಾಕಲಾಗಿದೆ. ಅಲ್ಲದೆ 49 ಸಾವಿರ ರೂ.ಗಿಂತ ಹೆಚ್ಚು ಮೊತ್ತದ ಹಣ ಸಾಗಾಟಕ್ಕೂ ಕಡಿವಾಣ ಹಾಕಲಾಗಿದ್ದು, ವಾಹನಗಳನ್ನು ಕಟ್ಟುನಿಟ್ಟಿನಿಂದ ತಪಾಸಣೆ ನಡೆಸಲಾಗುತ್ತಿದೆ. ದಿನದ 24 ಗಂಟೆಯೂ ತಪಾಸಣಾ ಕಾರ್ಯ ನಡೆಸಲಾಗುತ್ತಿದೆ. ಒಂದೊಂದು ವಿಧಾನಸಭಾ ಕ್ಷೇತ್ರದಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ಸಂಪರ್ಕ ಕಲ್ಪಿಸುವ ರಸ್ತೆ, ಅಂತರ ಜಿಲ್ಲೆಗಳ ಸಂಪರ್ಕ ರಸ್ತೆ, ಅಂತರರಾಜ್ಯದ ಹೆದ್ದಾರಿಗಳಲ್ಲಿ ತಪಾಸಣೆ ನಡೆಸಲಾಗುತ್ತಿದೆ.

ಸಮಾಜವಾದಿ ಜನತಾ ಪಾರ್ಟಿಗೆ ಮೆಹುಲ್ ಜೆ. ಪಟೇಲ್ ನೇಮಕ



ಮೈಸೂರು, ಮಾ. 27– ಸಮಾಜವಾದಿ ಜನತಾ ಪಾರ್ಟಿಯ ಮೈಸೂರು ನಗರ (ಜಿಲ್ಲಾ) ಅಧ್ಯಕ್ಷರಾಗಿ ಮೈಸೂರಿನ ಉದ್ಯಮಿ ಮೆಹುಲ್ ಜೆ. ಪಟೇಲ್ ಅವರನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯಾಧ್ಯಕ್ಷ ಜೆ.ಎಂ. ಗಾಡ್ಕರ್ ತಿಳಿಸಿದ್ದಾರೆ. ಮೆಹುಲ್ ಜೆ. ಪಟೇಲ್ ಅವರು ಈ ಹಿಂದೆ ಭಾರತೀಯ ಜನತಾ ಪಕ್ಷ ಮತ್ತು ಕಾಂಗ್ರೆಸ್ ಪಕ್ಷ ಸೇರಿದಂತೆ ಹಲವಾರು ಪಕ್ಷಗಳಲ್ಲಿ ಗುರುತಿಸಿಕೊಂಡಿದ್ದು, ಕೆಲಕಾಲದಿಂದ ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದರು. ಇದೀಗ ಮತ್ತೆ ಸಮಾಜವಾದಿ ಜನತಾ ಪಾರ್ಟಿ ಸೇರಿ ಸಕ್ರಿಯ ರಾಜಕಾರಣಕ್ಕೆ ಮರಳಿದ್ದಾರೆ.

ನಕಲಿ ದಾಖಲೆ ಸೃಷ್ಟಿಸಿ ಕಂಡವರ ನಿವೇಶನದ ಮೇಲೆ ಸಾಲ: ಮಹಿಳೆಯ ಕುಟುಂಬ ಧರಣಿ

ದಿ ಸಿಟಿ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ಸಾಲ ಪಡೆದಿರುವ ಆರೋಪ



ಮೈಸೂರು,ಮಾ.27(ಎಂಟಿವೈ)– ಕೆಲವರು ನಕಲಿ ದಾಖಲೆಗಳನ್ನು ಸೃಷ್ಟಿಸಿ, ನನ್ನ ತಂದೆಗೆ ಸೇರಿದ ನಿವೇಶನದ ಮೇಲೆ ಬ್ಯಾಂಕ್‌ನಲ್ಲಿ 40 ಲಕ್ಷ ರೂ. ಸಾಲ ಪಡೆದು ವಂಚಿಸಿದ್ದಾರೆ ಎಂದು ಆರೋಪಿಸಿ ಕುರುಬಾರಹಳ್ಳಿ ನಿವಾಸಿ ವೀರಮ್ಮ ಕುಟುಂಬದ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿ, ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್‌ನಲ್ಲಿ ಸಾಲ ಪಡೆದು ವಂಚಿಸಿರುವವರ ವಿರುದ್ಧ ಕ್ರಮ ಕೈಗೊಂಡು, ತಮಗೆ ನ್ಯಾಯ ಒದಗಿಸುವಂತೆ ಮನವಿ ಮಾಡಿದರು. ನನ್ನ ತಂದೆ ಬಿ.ಚಿಕ್ಕವೀರಯ್ಯ ಸರ್ಕಾರಿ ಪಠ್ಯಪುಸ್ತಕ ಮುದ್ರಾಲಯದ ನಿವೃತ್ತ ಉದ್ಯೋಗಿಯಾಗಿದ್ದು, ಅವರಿಗೆ ತಾನೊಬ್ಬಳೆ ಮಗಳು. ನನ್ನ ತಂದೆಗೆ ತೊಣಚಿಕೊಪ್ಪಲು ಬಡಾವಣೆಯಲ್ಲಿ 122x110 ಅಡಿ ನಿವೇಶನವಿದೆ. ಈ ಆಸ್ತಿಗೆ ಸಂಬಂಧಿಸಿದಂತೆ ಕುರುಬಾರಹಳ್ಳಿಯಲ್ಲಿಯೇ ವಾಸವಿರುವ ಕೆಲವರು ಸ್ಟ್ಯಾಂಪ್ ವೆಂಡರ್‌ರೊಬ್ಬರ ಸಹಕಾರ ಪಡೆದು ಆಸ್ತಿಗೆ ಸಂಬಂಧಿಸಿದಂತೆ ಸುಳ್ಳು ದಾಖಲೆ ಸೃಷ್ಟಿಸಿದ್ದಾರೆ. ಅಲ್ಲದೇ, ಸಬ್ ರಿಜಿಸ್ಟ್ರಾರ್ ಸೀಲು ಮತ್ತು ಸಹಿಯನ್ನು ನಕಲು ಮಾಡಿಕೊಂಡು ವಂಚಿಸಿದ್ದಾರೆ. ನಕಲಿ ದಾಖಲೆಗಳ ಮೂಲಕ ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ 40 ಲಕ್ಷ ರೂ. ಸಾಲ ಪಡೆದಿದ್ದಾರೆ. ಇವರ ಜೊತೆಗೆ ಬ್ಯಾಂಕ್‌ನ ಅಧಿಕಾರಿಗಳೂ ಶಾಮೀಲಾಗಿದ್ದಾರೆ. ಈ ಸಂಬಂಧ ದೂರು ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಈಗಲಾದರೂ ನನಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಅವರು ಆಗ್ರಹಿಸಿದರು.

ಮೈಸೂರು ಜಿಲ್ಲೆಯಲ್ಲಿ 52 ಕಂದಾಯ ಗ್ರಾಮ ; 2,364 ಮಂದಿಗೆ ಹಕ್ಕುಪತ್ರ

ಸಾಂಕೇತಿಕವಾಗಿ ಹಕ್ಕುಪತ್ರ ವಿತರಿಸಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ



ಮೈಸೂರು,ಮಾ.27(ಪಿಎಂ)– ಮೈಸೂರು ಜಿಲ್ಲೆಯಲ್ಲಿ ಲಂಬಾಣಿ ತಾಂಡ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ನಾಯಕರ ಹಟ್ಟಿ, ಕುರುಬರ ಹಟ್ಟಿ, ಹಾಡಿ, ಮಜರೆ, ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲೋನಿ ಇತ್ಯಾದಿ ಜನವಸತಿ ಪ್ರದೇಶ ಸೇರಿದಂತೆ ಒಟ್ಟು 52 ಕಂದಾಯ ಗ್ರಾಮಗಳನ್ನು ಹೊಸದಾಗಿ ರಚಿಸಲಾಗಿದ್ದು, ಸದರಿ ಗ್ರಾಮಗಳಲ್ಲಿ ಸರ್ಕಾರಿ ಭೂಮಿಯಲ್ಲಿ ವಾಸವಿರುವ 2,364 ಫಲಾನುಭವಿಗಳಿಗೆ ಹಕ್ಕುಪತ್ರ (ಕಂದಾಯ ಗ್ರಾಮ ನಿವೇಶನ ಮಂಜೂರಾತಿ ಪ್ರಮಾಣ ಪತ್ರ) ವಿತರಣೆಗೆ ಸೋಮವಾರ ಚಾಲನೆ ನೀಡಲಾಯಿತು.

ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮೈಸೂರು ಉಪವಿಭಾಗಕ್ಕೆ ಸಂಬಂಧಿಸಿದಂತೆ ಮೈಸೂರು, ನಂಜನಗೂಡು, ತಿ.ನರಸೀಪುರ ತಾಲೂಕುಗಳ ಹಲವು ಫಲಾನುಭವಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಹಕ್ಕುಪತ್ರ ವಿತರಿಸಿದರು. ಆ ಮೂಲಕ ಜಿಲ್ಲೆಯಾದ್ಯಂತ ಹಕ್ಕುಪತ್ರ ವಿತರಣೆಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲೆಯಲ್ಲಿ ಹೊಸದಾಗಿ ರಚಿಸಿರುವ 52 ಕಂದಾಯ ಗ್ರಾಮಗಳಿಗೆ ಅಂತಿಮ ಅಧಿಸೂಚನೆ ದೊರೆತಿದೆ. ಕಂದಾಯ ಗ್ರಾಮಗಳ ರಚನೆ ಪ್ರಕ್ರಿಯೆಯನ್ನು ಬಹಳ ಹಿಂದೆಯೇ ಪ್ರಾರಂಭಿಸಲಾಗಿತ್ತು. ಕಂದಾಯ ಗ್ರಾಮ ಘೋಷಣೆಗೆ ಬೇಸಿಕ್ ಪ್ಯಾರಾಮೀಟರ್ಸ್ ಇರುತ್ತವೆ. ಈ ಸಂಬಂಧ ಕೆಲ ಅಂಶಗಳನ್ನು ಕೆಲವು ಅಧಿಕಾರಿಗಳು ಬಿಟ್ಟಿದ್ದಾರೆ ಎಂದು ಬಂದಿರುವ ದೂರನ್ನು ಪರಿಗಣಿಸಲಾಗಿದೆ ಎಂದು ತಿಳಿಸಿದರು.

ತಾಲೂಕುವಾರು ನೂತನ ಕಂದಾಯ ಗ್ರಾಮ, ಫಲಾನುಭವಿಗಳ ವಿವರ

ಮೈಸೂರು ತಾಲೂಕಿನಲ್ಲಿ 3 ಕಂದಾಯ ಗ್ರಾಮಗಳನ್ನು ರಚಿಸಿದ್ದು, ಈ ಪೈಕಿ ಸರ್ಕಾರಿ ಭೂಮಿಯಲ್ಲಿ ವಾಸವಿರುವ 4 ಮಂದಿ (ತಹಸೀಲ್ದಾರ್ ಅವರಿಂದ ಸ್ವೀಕೃತವಾದ ಹಕ್ಕುಪತ್ರ ವಿತರಿಸಬೇಕಾದ ಫಲಾನುಭವಿಗಳು) ಹಕ್ಕುಪತ್ರ ಪಡೆಯಲು ಅರ್ಹರಾಗಿದ್ದಾರೆ.

ಅದೇ ರೀತಿ ನಂಜನಗೂಡು ತಾಲೂಕಿನಲ್ಲಿ 6 ಕಂದಾಯ ಗ್ರಾಮ, 44 ಫಲಾನುಭವಿಗಳು, ತಿ.ನರಸೀಪುರದಲ್ಲಿ 16 ಕಂದಾಯ ಗ್ರಾಮ, 323 ಫಲಾನುಭವಿಗಳು, ಹುಣಸೂರು ತಾಲೂಕಿನಲ್ಲಿ 6 ಕಂದಾಯ ಗ್ರಾಮಗಳು, 83 ಫಲಾನುಭವಿಗಳು, ಹೆಚ್.ಡಿ.ಕೋಟೆ ತಾಲೂಕಿನಲ್ಲಿ 2 ಕಂದಾಯ ಗ್ರಾಮಗಳು, 248 ಫಲಾನುಭವಿಗಳು, ಸರಗೂರು ತಾಲೂಕಿನಲ್ಲಿ 6 ಕಂದಾಯ ಗ್ರಾಮಗಳು, 646 ಫಲಾನುಭವಿಗಳು, ಪಿರಿಯಾಪಟ್ಟಣ ತಾಲೂಕಿನಲ್ಲಿ 11 ಕಂದಾಯ ಗ್ರಾಮಗಳು, 1,016 ಫಲಾನುಭವಿಗಳು, ಕೆ.ಆರ್.ನಗರ ಮತ್ತು ಸಾಲಿಗ್ರಾಮದಲ್ಲಿ ತಲಾ ಒಂದು ಕಂದಾಯ ಗ್ರಾಮ, ಆದರೆ ಫಲಾನುಭವಿಗಳು ಇಲ್ಲ.

ಇನ್ನು 58 ಕಂದಾಯ ಗ್ರಾಮ ರಚನೆ: ಜಿಲ್ಲೆಯಲ್ಲಿ ಒಟ್ಟು 110 ಕಂದಾಯ ಗ್ರಾಮಗಳನ್ನು ರಚಿಸಬೇಕಿದ್ದು, ಈ ಪೈಕಿ ಈಗ 52ಕ್ಕೆ ಅಂತಿಮ ಅಧಿಸೂಚನೆ ದೊರೆತಿದೆ. ಇನ್ನು 58 ಬಾಕಿ ಉಳಿದಿದ್ದು, ಆದಷ್ಟು ಶೀಘ್ರದಲ್ಲಿ ಅವುಗಳಿಗೂ ಕಂದಾಯ ಗ್ರಾಮದ ಸ್ಥಾನಮಾನ ಕಲ್ಪಿಸಿ ಕೊಡುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು. 6 ತಿಂಗಳ ಒಳಗೆ ಇದನ್ನು ಸಾಧಿಸುವ ಉದ್ದೇಶ ಹೊಂದಲಾಗಿದೆ ಎಂದರು.

ಹೆಸರು ನಾಮಕರಣಕ್ಕೂ ಅವಕಾಶ: ನೂತನವಾಗಿ ರಚಿಸಿರುವ ಕಂದಾಯ ಗ್ರಾಮಗಳನ್ನು ಯಾವುದೋ ಊರಿನ ಹೆಸರಿನಲ್ಲಿ ಗುರುತಿಸಲಾಗುತ್ತಿದೆ. ಹೀಗಾಗಿ ಪ್ರದೇಶದ ಎಲ್ಲರೂ ಚರ್ಚಿಸಿ ಒಕ್ಕೊರಲ ತೀರ್ಮಾನದ ಮೂಲಕ ತಮ್ಮ ನೂತನ ಕಂದಾಯ ಗ್ರಾಮಕ್ಕೆ ಹೆಸರು ನಾಮಕರಣ ಮಾಡಿಕೊಳ್ಳಲು ಸರ್ಕಾರ ಅವಕಾಶ ಕಲ್ಪಿಸಿದೆ. ಈ ನೂತನ ಕಂದಾಯ ಗ್ರಾಮಗಳಲ್ಲಿ ಖಾಸಗಿ ಭೂಮಿಯ ವಾಸಸ್ಥಳಕ್ಕೂ ಮೂಲಭೂತ ಸೌಲಭ್ಯ ಕಲ್ಪಿಸಲು ಯಾವುದೇ ಅಡೆತಡೆ ಇಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ 10 ಮಂದಿಗೆ ಹಕ್ಕುಪತ್ರ ವಿತರಿಸಲಾಯಿತು. ಬಳಿಕ 400ಕ್ಕೂ ಹೆಚ್ಚು ಮಂದಿಗೆ ಹಕ್ಕುಪತ್ರ ವಿತರಿಸಿದ್ದು, ಆಯಾಯ ತಾಲೂಕು ಮಟ್ಟದಲ್ಲೂ ಹಕ್ಕುಪತ್ರ ವಿತರಣೆ ಮಾಡಲಾಗಿದೆ. ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಂ, ಮೈಸೂರು ಉಪವಿಭಾಗಾಧಿಕಾರಿ ಕಮಲಾಬಾಯಿ, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ (ಡಿಡಿಎಲ್‌ಆರ್) ಉಪ ನಿರ್ದೇಶಕಿ ಶ್ರೀಮಂತಿನಿ, ಮೈಸೂರು ತಹಸೀಲ್ದಾರ್ ಗಿರೀಶ್ ಮತ್ತಿತರು ಹಾಜರಿದ್ದರು.

ಒಳ ಮೀಸಲಾತಿ ಕ್ರಾಂತಿಕಾರಿ ನಿರ್ಧಾರ; ಈ ವಿಚಾರದಲ್ಲಿ ಯಾರಿಗೂ ತಪ್ಪು ಗ್ರಹಿಕೆ ಬೇಡ

ಮೈಸೂರಿನ ಖ್ಯಾತ ವಕೀಲ ಅರುಣ್ ಕುಮಾರ್ ಮನವಿ



ಮೈಸೂರು, ಮಾ.27– ಪರಿಶಿಷ್ಟ ಸಮುದಾಯಗಳಲ್ಲಿ ಒಳಮೀಸಲಾತಿ ನೀಡಿದ್ದು ಒಂದು ಐತಿಹಾಸಿಕ ನಿರ್ಧಾರ ಎಂದು ಬಿಜೆಪಿ ಮುಖಂಡರೂ ಆದ ಮೈಸೂರಿನ ಖ್ಯಾತ ವಕೀಲ ಅರುಣ್ ಕುಮಾರ್ ಅಭಿಪ್ರಾಯಿಸಿದ್ದಾರೆ.

ಒಳ ಮೀಸಲಾತಿ ಪ್ರಕ್ರಿಯೆ ಆರಂಭಿಸಿದ್ದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು. ಆದರೆ ಅದನ್ನು ಸಾಕಾರಗೊಳಿಸಿದ್ದು ಬಿಜೆಪಿ ಸರ್ಕಾರ. ಇದೊಂದು ಎದೆಗಾರಿಕೆಯ ನಿರ್ಧಾರ. ರಾಜಕೀಯವಾಗಿ ಏನೆಲ್ಲಾ ಹೇಳಿಕೆ ನೀಡಬಹುದು. ಆದರೆ ಸಾಮಾಜಿಕ ನ್ಯಾಯದಡಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೈಗೊಂಡಿರುವ ಈ ಕ್ರಾಂತಿಕಾರಿ ನಿರ್ಧಾರವನ್ನು ಎಲ್ಲರೂ ಒಪ್ಪಲೇಬೇಕು ಎಂದು ತಿಳಿಸಿದ್ದಾರೆ.

ಒಳಮೀಸಲಾತಿ ವಿರೋಧಿಸಿ ಶಿಕಾರಿಪುರದಲ್ಲಿ ಪ್ರತಿಭಟನೆ ನಡೆಸಲಾಗಿದೆ. ಪ್ರತಿಭಟಿಸುವುದು ಸಾಂವಿಧಾನಿಕ ಹಕ್ಕು. ಆದರೆ ಹಿಂಸಾಚಾರ ನಡೆಸಿರುವುದು ಖಂಡನೀಯ. ಪರಿಶಿಷ್ಟರ ಅಭಿವೃದ್ಧಿಗಾಗಿ ಶ್ರಮಿಸಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ನಿವಾಸದ ಮೇಲೆ ಕಲ್ಲು ತೂರಿ, ಒಳಗೆ ನುಗ್ಗಲು ಯತ್ನಿಸಿರುವುದು ನಾಗರಿಕ ನಡೆಯಲ್ಲ. ರಸ್ತೆಯಲ್ಲಿ ಟೈರ್, ವಸ್ತ್ರಗಳಿಗೆ ಬೆಂಕಿ ಹಚ್ಚಿದ್ದನ್ನು ಯಾರೂ ಒಪ್ಪುವುದಿಲ್ಲ. ಯಾರೂ ಪ್ರಚೋದನೆಗೆ ಒಳಗಾಗಿ ಈ ರೀತಿ ವರ್ತಿಸಬಾರದು. ತಿಳಿದವರು ಒಳ ಮೀಸಲಾತಿ ಬಗ್ಗೆ ಜನರಿಗೆ ಅರ್ಥ ಮಾಡಿಸಬೇಕು. ಇಲ್ಲವೇ ಸುಮ್ಮನಿರಬೇಕು. ಆದರೆ ಈ ರೀತಿ ಅವರಿಗೆ ತಪ್ಪು ತಿಳುವಳಿಕೆ ನೀಡಿ, ದಾರಿ ತಪ್ಪಿಸುವ ಕೃತ್ಯವೆಸಗಬಾರದು ಎಂದು ಅವರು ಮನವಿ ಮಾಡಿದ್ದಾರೆ.

ಇಂದು ಸ್ವಾ–ನಿಧಿ ಮಹೋತ್ಸವ

ಮೈಸೂರು, ಮಾ.27– ಮೈಸೂರು ಮಹಾನಗರ ಪಾಲಿಕೆ, ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಪಟ್ಟಣ ವ್ಯಾಪಾರ ಸಮಿತಿ ಸಹಯೋಗದಲ್ಲಿ ಸ್ವಾ–ನಿಧಿ ಮಹೋತ್ಸವ ಕಾರ್ಯಕ್ರಮವನ್ನು ಮಾ.28 ರಂದು ಮಧ್ಯಾಹ್ನ 12 ಗಂಟೆಗೆ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಹಕಾರ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಉನ್ನತ ಶಿಕ್ಷಣ ಮತ್ತು ತಂತ್ರಜ್ಞಾನ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವ ಡಾ.ಎನ್. ಅಶ್ವಥ್ ನಾರಾಯಣ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸುವರು.

ಶಾಸಕರಾದ ತನ್ವೀರ್ ಸೇಠ್, ಸಾ.ರಾ.ಮಹೇಶ್, ಜಿ.ಟಿ. ದೇವೇಗೌಡ, ಕೆ.ಮಹದೇವ್, ಹರ್ಷವರ್ಧನ್, ಅಶ್ವಿನ್‌ಕುಮಾರ್, ಹೆಚ್.ಪಿ.ಮಂಜುನಾಥ್, ಎಲ್.ನಾಗೇಂದ್ರ, ಡಾ.ಯತೀಂದ್ರ ಎಸ್, ಅನಿಲ್‌ಕುಮಾರ್.ಸಿ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾದ ಡಾ.ಡಿ. ತಿಮ್ಮಯ್ಯ, ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ಎಚ್.ವಿಶ್ವನಾಥ್ ಹಾಗೂ ಮಧು ಜಿ.ಮಾದೇಗೌಡ ಒಳಗೊಂಡಂತೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿರುವರು.

ಬೀದಿಬದಿ ವ್ಯಾಪಾರಿಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು, ಗೌರವಿಸುವುದು ಹಾಗೂ ಸ್ವಚ್ಛತೆ ಕುರಿತು ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಕಾರ್ಯಕ್ರಮದಲ್ಲಿ ಬೀದಿಬದಿ ವ್ಯಾಪಾರಿಗಳು ಮತ್ತು ಅವರ ಕುಟುಂಬದ ಸದಸ್ಯರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಕ್ರೀಡಾ ಚಟುವಟಿಕೆಗಳು, ವಿವಿಧ ಸ್ಪರ್ಧೆ, ಡೇ–ನಲ್ಮ್ ಕುರಿತು ಕಿರು ಚಿತ್ರ ಪ್ರದರ್ಶನ, ಉತ್ತಮ ಡಿಜಿಟಲ್ ವಹಿವಾಟು ಬಗ್ಗೆ ಬ್ಯಾಂಕ್‌ರವರಿಂದ ತರಬೇತಿ, ಪಿಎಂ ಸ್ವಾ–ನಿಧಿ ಯಶಸ್ಸಿನ ಕಥೆಗಳನ್ನು ಹಂಚಿಕೊಳ್ಳುವುದು, ಆಹಾರ ಮೇಳ, ಸ್ವ–ಸಹಾಯ ಸಂಘಗಳ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸಾಂಸ್ಕೃತಿಕ ಕಾರ್ಯಕ್ರಮ, ಬ್ಯಾಂಕುಗಳ ಸೌಲಭ್ಯದ ಬಗ್ಗೆ ತಿಳಿಸಲಾಗುವುದು. ಬೀದಿಬದಿ ವ್ಯಾಪಾರಸ್ಥರ ಕುಟುಂಬದ ವಿದ್ಯಾವಂತ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.85ರಷ್ಟು, ಪಿಯುಸಿ ಮತ್ತು ಪದವಿಯಲ್ಲಿ ಶೇ.75ರಷ್ಟು ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವುದು ಹಾಗೂ ಬೀದಿಬದಿ ವ್ಯಾಪಾರಸ್ಥರಿಗೆ ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರ ವಿತರಿಸಲಾಗುವುದು. ಬೆಳಿಗ್ಗೆ 8 ಗಂಟೆಗೆ ಬೀದಿಬದಿ ವ್ಯಾಪಾರಿಗಳಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದ್ದು, 10 ಗಂಟೆಗೆ ಅರಮನೆ ಆವರಣದಿಂದ ಜಾಥಾ ಹೊರಡಲಿದೆ ಎಂದು ಮೈಸೂರು ನಗರಪಾಲಿಕೆಯ ಹೆಚ್ಚುವರಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷ್ಣರಾಜ, ಚಾಮರಾಜ 'ಕೈ' ಟಿಕೆಟ್‌ಗೆ ಕಸರತ್ತು

ನನಗೇ ಟಿಕೆಟ್, ನನ್ನದೇ ಗೆಲುವು; ಆಕಾಂಕ್ಷಿಗಳ ಲೆಕ್ಕಾಚಾರ


ಮೈಸೂರು, ಮಾ.27(ಎಂಕೆ)– ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಟಿಕೆಟ್ ಆಕಾಂಕ್ಷಿಗಳಲ್ಲಿ ಪೈಪೋಟಿ ಹೆಚ್ಚಾಗಿದ್ದು, ಕೃಷ್ಣರಾಜ (ಕೆ.ಆರ್) ಹಾಗೂ ಚಾಮರಾಜ ವಿಧಾನ ಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆ ಕಗ್ಗಂಟಾಗಿದೆ.

ಎರಡೂ ಕ್ಷೇತ್ರಗಳಲ್ಲಿ ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್ ಹಾಗೂ ವಾಸು ಮತ್ತೊಂದು ಅವಕಾಶಕ್ಕಾಗಿ ಪ್ರಯತ್ನಿಸುತ್ತಿದ್ದರೆ, ಕೆ.ಆರ್.ಕ್ಷೇತ್ರದಲ್ಲಿ ಮಾಜಿ ಕಾರ್ಪೊರೇಟರ್ ಪ್ರದೀಪ್‌ಕುಮಾರ್, ಮುಖಂಡ ಎನ್.ಎಂ.ನವೀನ್ ಕುಮಾರ್ ಹಾಗೂ ಚಾಮರಾಜ ಕ್ಷೇತ್ರದಲ್ಲಿ ಕೆ.ಹರೀಶ್‌ಗೌಡ ಮೊದಲ ಅವಕಾಶಕ್ಕಾಗಿ ಕಸರತ್ತು ನಡೆಸುತ್ತಿದ್ದಾರೆ. ಈಗಾಗಲೇ ಕಾಂಗ್ರೆಸ್ 124 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆಯಾಗಿದ್ದು, 2ನೇ ಪಟ್ಟಿ ಯಾವಾಗ ಬಿಡುಗಡೆಯಾಗಲಿದೆ. ಯಾರಿಗೆ ಸ್ಪರ್ಧಿಸುವ ಅವಕಾಶ ದೊರೆಯಲಿದೆ ಎಂಬ ಕದನ ಕುತೂಹಲ ಕೆರಳಿಸಿದೆ.

ಐದು ಬಾರಿ ವಿಧಾನಸಭೆಗೆ ಸ್ಪರ್ಧಿಸುವ ಅವಕಾಶ ಪಡೆದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, 2 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಶಾಸಕ ಎಸ್.ಎ.ರಾಮದಾಸ್ ವಿರುದ್ಧ ಪರಾಭವಗೊಂಡಿದ್ದು, ಈ ಬಾರಿ ಗೆಲುವಿನ ವಿಶ್ವಾಸದೊಂದಿಗೆ ಮತ್ತೆ ಕಣಕ್ಕಿಳಿಯುವ ಇಂಗಿತ ವ್ಯಕ್ತಪಡಿಸಿದ್ದಾರೆ. ಇದರ ನಡುವೆ ನಗರ ಪಾಲಿಕೆ ಸದಸ್ಯನಾಗಿ, ಲಿಂಗಾಯಿತ ಸಮುದಾಯ ಸಂಘಟನೆಗಳ ಬೆಂಬಲದೊಂದಿಗೆ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವ ಪ್ರದೀಪ್‌ಕುಮಾರ್ ಹಾಗೂ ಬ್ರಾಹ್ಮಣ ಸಮುದಾಯದ ಮುಖಂಡರಾಗಿ ಹಾಗೂ ವಿದ್ಯಾರ್ಥಿ ಕಾಂಗ್ರೆಸ್, ಯೂತ್ ಕಾಂಗ್ರೆಸ್ ಮೂಲಕ ಗುರ್ತಿಸಿಕೊಂಡಿರುವ ಎನ್.ಎಂ. ನವೀನ್ ಕುಮಾರ್, ಅವಕಾಶ ನೀಡಿದರೆ ಮೊದಲ ಚುನಾವಣೆಯಲ್ಲಿಯೇ ಗೆಲ್ಲುವ ವಿಶ್ವಾಸದಲ್ಲಿದ್ದಾರೆ.

ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಶಾಸಕ ವಾಸು, ಕಳೆದ ಚುನಾವಣೆಯಲ್ಲಿ ಬಿಜೆಪಿ ಶಾಸಕ ಎಲ್.ನಾಗೇಂದ್ರ ವಿರುದ್ಧ ಸೋಲು ಅನುಭವಿಸಿದ್ದರೂ ಮತ್ತೊಮ್ಮೆ ಗೆದ್ದು ಕ್ಷೇತ್ರದ ಅಭಿವೃದ್ಧಿಗೆ ಕೆಲಸ ಮಾಡುವ ನಿಟ್ಟಿನಲ್ಲಿದ್ದಾರೆ. ಇವರಿಗೆ ಪೈಪೋಟಿಯಾಗಿ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಟಿಕೆಟ್ ಆಕಾಂಕ್ಷಿಯಾಗಿದ್ದು, ಟಿಕೆಟ್ ಸಿಗುವ ಭರವಸೆಯಲ್ಲಿದ್ದಾರೆ. ಒಟ್ಟಾರೆ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಪೈಪೋಟಿ ಜೋರಾಗಿದ್ದು, ಅಂತಿಮವಾಗಿ ಯಾರಿಗೆ ಪಕ್ಷ ಸ್ಪರ್ಧಿಸುವ ಅವಕಾಶ ನೀಡಲಿದೆ ಎಂಬುದೇ ಗೊಂದಲವಾಗಿದೆ. ಕೆ.ಆರ್ ಹಾಗೂ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳು ಟಿಕೆಟ್‌ಗಾಗಿ ಸರ್ವ ಪ್ರಯತ್ನ ನಡೆಸುತ್ತಿದ್ದು, ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ನನಗೆ ದೊರೆಯಲಿದೆ ಎಂಬ ವಿಶ್ವಾಸ ಮತ್ತು ಗೆಲುವಿನ ಲೆಕ್ಕಾಚಾರವನ್ನು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡಿದ್ದಾರೆ.

ಟಿಕೆಟ್ ಖಂಡಿತ ಸಿಗುತ್ತೆ ಇದರಲ್ಲಿ ಯಾವುದೇ ಸಂಶಯವಿಲ್ಲ...



ಕೆ.ಆರ್ ಕ್ಷೇತ್ರದಿಂದ ಮತ್ತೊಮ್ಮೆ ನನಗೆ ಟಿಕೆಟ್ ಖಂಡಿತ ಸಿಗುತ್ತೆ. ಇದರಲ್ಲಿ ಯಾವುದೇ ಸಂಶಯ ಹಾಗೂ ಗೊಂದಲವಿಲ್ಲ ಎಂದು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅರ್ಜಿ ಸಲ್ಲಿಸಿದವರಿಗೆಲ್ಲಾ ಟಿಕೆಟ್ ಕೊಡಲು ಸಾಧ್ಯವಿಲ್ಲ. ಗೆಲ್ಲುವ ಅರ್ಹತೆ ಇದ್ದವರಿಗೆ ಪಕ್ಷ ಆದ್ಯತೆ ನೀಡಲಿದೆ. ಹಾಗೆಯೇ ನಾನು 2 ಬಾರಿ ಶಾಸಕನಾಗಿ ಆಯ್ಕೆಯಾಗಿದ್ದು, ಕೆ.ಆರ್.ಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ಕೈಗೊಂಡಿದ್ದೇನೆ. ಇದೆಲ್ಲರ ಫಲವಾಗಿ ಮತ್ತೊಂದು ಅವಕಾಶ ಲಭಿಸುವ ವಿಶ್ವಾಸವಿದೆ. ಪಕ್ಷದ ವರಿಷ್ಠರ ಗಮನವೂ ನನ್ನ ಮೇಲಿದ್ದು ಟಿಕೆಟ್ ನೀಡುತ್ತಾರೆಂಬ ಭರವಸೆಯಿದೆ ಎಂದಿದ್ದಾರೆ.

ಚಾಮರಾಜದಲ್ಲಿ ನನಗೆ ಟಿಕೆಟ್ ಎಂಬುದು ಕ್ಲಿಯರ್ ಆಗಿದೆ...



ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ನನಗೆ ಟಿಕೆಟ್ ಎನ್ನುವುದು ಕ್ಲಿಯರ್ ಆಗಿದೆ ಎಂದು ಕಾಂಗ್ರೆಸ್ ಮುಖಂಡ ಹಾಗೂ ಟಿಕೆಟ್ ಆಕಾಂಕ್ಷಿ ಕೆ.ಹರೀಶ್‌ಗೌಡ ತಿಳಿಸಿದ್ದಾರೆ. ಇನ್ನೊಂದು ವಾರದಲ್ಲಿ ಅಭ್ಯರ್ಥಿಗಳ 2ನೇ ಪಟ್ಟಿ ಬಿಡುಗಡೆಯಾಗಲಿದೆ. ಸರ್ವೆ ರಿಪೋರ್ಟ್ ಪ್ರಕಾರ ನನ್ನ ಹೆಸರು ಮುಂಚೂಣಿಯಲ್ಲಿದೆ. ಕಳೆದ ವಿಧಾನಸಭಾ ಚುನಾವಣೆ ಫಲಿತಾಂಶ ಸೇರಿ ಎಲ್ಲವನ್ನು ಲೆಕ್ಕಾಚಾರ ಮಾಡಿ ಟಿಕೆಟ್ ನೀಡುವುದು ಗ್ಯಾರಂಟಿಯಾಗಿದೆ. ಇದಕ್ಕೆ ಪೂರಕವಾಗಿ ಕ್ಷೇತ್ರದಾದ್ಯಂತ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿದ್ದೇನೆ. ಮೊದಲ ಅವಕಾಶದಲ್ಲೇ ಗೆಲ್ಲುವ ವಿಶ್ವಾಸವಿದೆ ಎಂದಿದ್ದಾರೆ.

ಆಂತರಿಕ ಸರ್ವೆ, ಸಾಮಾಜಿಕ ನ್ಯಾಯದಡಿ ನನಗೆ ಟಿಕೆಟ್...



ಕೆ.ಆರ್.ಕ್ಷೇತ್ರದಲ್ಲಿ ನಡೆದ ಆಂತರಿಕ ಸರ್ವೆ ರಿಪೋರ್ಟ್ ಹಾಗೂ ಸಾಮಾಜಿಕ ನ್ಯಾಯದಡಿ ಲಿಂಗಾಯಿತ ಸಮುದಾಯ ನನಗೆ ಈ ಬಾರಿ ಟಿಕೆಟ್ ದೊರೆಯುವ ಎಲ್ಲಾ ಸಾಧ್ಯತೆಗಳಿವೆ ಎಂದು ನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಕೆ.ಆರ್.ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಪ್ರದೀಪ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ನ್ಯಾಯದ ಪರಿಕಲ್ಪನೆಯಡಿ ಮೈಸೂರು ಜಿಲ್ಲೆಯಲ್ಲಿ ಲಿಂಗಾಯಿತ ಸಮುದಾಯದ ಒಬ್ಬರಿಗಾದರೂ ಟಿಕೆಟ್ ಕೊಡಬೇಕು. ಜಿಲ್ಲೆಯಲ್ಲಿ 3.75 ಲಕ್ಷ ಲಿಂಗಾಯಿತ ಮತದಾರರಿದ್ದು, ಕೆ.ಆರ್.ಕ್ಷೇತ್ರದಲ್ಲಿಯೇ ಸುಮಾರು 40 ಸಾವಿರಕ್ಕೂ ಹೆಚ್ಚು ಮತದಾರರಿದ್ದಾರೆ. ಎಲ್ಲಾ ವೀರಶೈವ ಲಿಂಗಾಯಿತ ಸಂಘಟನೆಗಳು ನನ್ನ ಪರವಾಗಿ ಕಾಂಗ್ರೆಸ್ ವರಿಷ್ಠರಿಗೆ ಮನವಿ ಮಾಡಿದ್ದು, ಗೆಲ್ಲಿಸಿಕೊಂಡು ಬರುವ ಭರವಸೆಯನ್ನು ನೀಡಿದ್ದಾರೆ. ಒಮ್ಮೆ ನಗರ ಪಾಲಿಕೆ ಸದಸ್ಯನಾಗಿ ಯೂ ಜನ ಸೇವೆ ಮಾಡಿದ್ದು, ಈ ಬಾರೀ ಶೇ.100ಕ್ಕೆ 100ರಷ್ಟೂ ಟಿಕೆಟ್ ಸಿಗುವ ನಂಬಿಕೆಯಿದೆ ಎಂದಿದ್ದಾರೆ.

ಕೆ.ಆರ್ ಕ್ಷೇತ್ರದಲ್ಲಿ ಬದಲಾವಣೆ ಬಯಸಿದ್ದಾರೆ




ಕ್ಷೇತ್ರದ ಮತದಾರರು ಬದಲಾವಣೆ ಬಯಸಿದ್ದು, ಮೊದಲ ಅವಕಾಶ ದೊರೆಯುವ ಸಂಪೂರ್ಣ ಭರವಸೆ ಇದೆ ಎಂದು ಕಾಂಗ್ರೆಸ್ ಮುಖಂಡ ಹಾಗೂ ಕೆ.ಆರ್ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಎನ್.ಎಂ.ನವೀನ್ ಕುಮಾರ್ ತಿಳಿಸಿದ್ದಾರೆ.

ಬ್ರಾಹ್ಮಣ ಸಮುದಾಯದ ಮುಖಂಡರು ಹಾಲಿ ಶಾಸಕರಿಗೆ ಟಿಕೆಟ್ ನೀಡದಂತೆ ಒತ್ತಾಯಿಸಿದ್ದಾರೆ. ಅಲ್ಲದೆ ಹೊಸಬರಿಗೆ ಅವಕಾಶ ನೀಡಬೇಕು ಬಯಸಿದ್ದಾರೆ. ಬ್ರಾಹ್ಮಣ ಸಮುದಾಯ ಮತದಾರರ ಬೆಂಬಲ ಹಾಗೂ ಕಾಂಗ್ರೆಸ್‌ನ ಮೂಲ ಮತದಾರರ ಬೆಂಬಲದಿಂದ ಗೆಲ್ಲುತ್ತೇನೆ ಎಂದರು.

ವಿದ್ಯಾರ್ಥಿ ಕಾಂಗ್ರೆಸ್, ಯೂತ್ ಕಾಂಗ್ರೆಸ್ ಮೂಲಕ ಪಕ್ಷ ಸಂಘಟನೆ ಮಾಡಿದ್ದೇನೆ. ಯೂತ್ ಕಾಂಗ್ರೆಸ್‌ನಲ್ಲಿದ್ದಾಗ 10 ವರ್ಷದ ಹಿಂದೆಯೇ ಪಾರ್ಲಿಮೆಂಟರಿ ಜನರಲ್ ಸೆಕ್ರೆಟರಿಯಾಗಿ ಕೆಲಸ ಮಾಡಿದ್ದೇನೆ ಎಐಸಿಸಿ ವೀಕ್ಷಕನಾಗಿ ಗೋವಾದಲ್ಲಿ ಕೆಲಸ ಮಾಡಿದ್ದೇನೆ. ಚಿಕ್ಕ ವಯಸ್ಸಿನಿಂದಲೂ ರಾಜಕೀಯ ನೋಡುತ್ತಾ ಬಂದಿದ್ದೇನೆ. ಅಭ್ಯರ್ಥಿಗಳ 2ನೇ ಪಟ್ಟಿ ಸದ್ಯದಲ್ಲಿಯೇ ಬಿಡುಗಡೆಯಾಗಲಿದ್ದು, ಮೊದಲ ಅವಕಾಶಕ್ಕಾಗಿ ಕಾಯುತ್ತಿದ್ದೇನೆ.

ಮತದಾರರಿಗೆ ಮನವರಿಕೆಯಾಗಿದೆ...



ಚಾಮರಾಜ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ನೀಡುವಂತೆ ಅರ್ಜಿ ಹಾಕಿದ್ದೇನೆ. ಅವಕಾಶ ಕೊಟ್ಟರೆ ಸ್ಪರ್ಧಿಸುತ್ತೇನೆ. ಅಲ್ಲದೆ ಕ್ಷೇತ್ರದ ಮತದಾರರಿಗೂ ಕಳೆದ ಸಲ ಮಾಡಿದ ತಪ್ಪನ್ನು ಮಾಡಬಾರದೆಂಬ ಮನವರಿಕೆಯಾಗಿದೆ ಎಂದು ಮಾಜಿ ಶಾಸಕ ವಾಸು ತಿಳಿಸಿದ್ದಾರೆ. ಸಕ್ರಿಯವಾಗಿ ಸಹಕಾರ ಕ್ಷೇತ್ರ ಸಂಘ–ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದೇನೆ. ಶಾಸಕರಾಗಿದ್ದ ಸಂದರ್ಭದಲ್ಲಿ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿ ಮತದಾರರಿಗೆ ಗೊತ್ತಿದೆ. ಕಳೆದ ಸಲ ಮಾಡಿದ ತಪ್ಪನ್ನು ಈ ಬಾರಿ ಮಾಡಬಾರದು ಎಂದು ಬಹಳಷ್ಟು ಜನರು ತಮ್ಮ ಭಾವನೆ ವ್ಯಕ್ತಪಡಿಸುತ್ತಿದ್ದಾರೆ. ನನ್ನ ಮೇಲೆ ಯಾವ ಆರೋಪ, ಕಪ್ಪು ಚುಕ್ಕೆ ಇರಲಿಲ್ಲ. ಕೆಲಸ ಮಾಡಲಿಲ್ಲ ಎನ್ನಲಿಲ್ಲ. ಅಭಿವೃದ್ಧಿ ಕೆಲಸ ಬಿಟ್ಟರೆ ಮತ್ಯಾವುದಕ್ಕೂ ಕೈಹಾಕಿಲ್ಲ. ಇದೆಲ್ಲದವನ್ನು ಗಮನಿಸಿ ಮತ್ತೊಮ್ಮೆ ಅವಕಾಶ ನೀಡುತ್ತಾರೆ ಎಂಬ ನಂಬಿಕೆಯಲ್ಲಿದ್ದೇನೆ ಎಂದಿದ್ದಾರೆ.

ಅದಾನಿ ವಿವಾದ, ರಾಹುಲ್ ಗಾಂಧಿ ಅನರ್ಹತೆ

ವಿಪಕ್ಷಗಳಿಂದ ಒಗ್ಗಟ್ಟು ಪ್ರದರ್ಶನ; ಕಪ್ಪು ಬಟ್ಟೆ ಧರಿಸಿ ಪ್ರತಿಭಟನಾ ಮೆರವಣಿಗೆ ಆರಂಭ



ನವದೆಹಲಿ: ಅದಾನಿ ವಿವಾದ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರನ್ನು ಅನರ್ಹಗೊಳಿಸಿದ ಕೇಂದ್ರದ ವಿರುದ್ಧ ಖಂಡನೆ ವ್ಯಕ್ತಪಡಿಸಿರುವ ವಿರೋಧ ಪಕ್ಷಗಳು, ಕಪ್ಪು ಬಟ್ಟೆ ಧರಿಸಿ ಸಂಸತ್ತಿನ ಸಂಕೀರ್ಣದಿಂದ ರಾಷ್ಟ್ರ ರಾಜಧಾನಿಯ ವಿಜಯ್ ಚೌಕ್‌ನತ್ತ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪ್ರತಿಪಕ್ಷದ ಸಂಸದರು ಸಂಸತ್ತಿನ ಸಂಕೀರ್ಣದಲ್ಲಿರುವ ಗಾಂಧಿ ಪ್ರತಿಮೆ ಬಳಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ್ದು, ಅದಾನಿ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿ (ಜೆಪಿಸಿ)ಗೆ ಒಪ್ಪಿಸುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಬಿಆರ್‌ಎಸ್, ಸಮಾಜವಾದಿ ಪಕ್ಷ ಸೇರಿದಂತೆ ಸಮಾನ ಮನಸ್ಕ ವಿಪಕ್ಷಗಳ ಸಂಸದರು ಭಾಗಿಯಾಗಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಸೇರಿದಂತೆ ಹಲವು ನಾಯಕರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಪಾದಯಾತ್ರೆ ವೇಳೆ ಖರ್ಗೆ ಅವರು ಇತರ ಸಂಸದರ ಕೈ ಹಿಡಿದು ಹೆಜ್ಜೆ ಹಾಕುತ್ತಿರುವುದು ಕಂಡು ಬಂದಿದೆ. ಈ ಮೂಲಕ ವಿಪಕ್ಷಗಳು ಒಗ್ಗಟ್ಟನ್ನು ಪ್ರದರ್ಶಿಸಿದರು. ಇದರ ಜೊತೆಗೆ ಸತ್ಯಮೇವ ಜಯತೆ ಎಂಬ ಬ್ಯಾನರ್ ಅನ್ನೂ ಹಿಡಿದು ಪ್ರತಿಭಟನೆ ನಡೆಸಲಾಗುತ್ತಿದೆ. ಇತರ ವಿರೋಧ ಪಕ್ಷದ ಸಂಸದರು ಭಿತ್ತಿಪತ್ರಗಳನ್ನು ಹಿಡಿದುಕೊಂಡಿದ್ದಾರೆ. ಸಂಸದರು ಕೇಂದ್ರ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಅದಾನಿ ಜೊತೆ ಸೇರಿಸಿದ್ದು, ಮೋದಿ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪ್ರತಿಭಟನೆ ವೇಳೆ ಮಾತನಾಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು, ಕೆಲವು ವರ್ಷಗಳಲ್ಲಿ ಅದಾನಿ ಸಂಪತ್ತು ಇಷ್ಟೊಂದು ಮಟ್ಟದಲ್ಲಿ ಹೆಚ್ಚಳವಾಗಿದ್ದು ಹೇಗೆ, ಮೋದಿಯವರೇ ವಿದೇಶಕ್ಕೆ ಹೋಗುವಾಗ ಉದ್ಯಮಿಯನ್ನು ಎಷ್ಟು ಬಾರಿ ಜೊತೆಗೆ ಕರೆದುಕೊಂಡು ಹೋಗಿದ್ದಿರಿ. ಅದಾನಿ ವಿಚಾರ ಸಂಬಂಧ ವಿಪಕ್ಷಗಳು ಎತ್ತುತ್ತಿರುವ ಪ್ರಶ್ನೆಗಳಿಗೆ ಮೋದಿಯವರು ಉತ್ತರ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದರು.

"ನಮಗೆ ಅದಾನಿ ವಿಚಾರದಲ್ಲಿ ಜೆಪಿಸಿ ಬೇಕು. ಸರ್ಕಾರ ಇದನ್ನು ಏಕೆ ಒಪ್ಪುತ್ತಿಲ್ಲ. ಜೆಪಿಸಿ ತನಿಖೆಗೆ ಏಕೆ ಹೆದರುತ್ತಿದ್ದೀರಿ... ಅಂದರೆ 'ದಾಲ್ ಮೇ ಕುಚ್ ಕಾಲಾ ಹೈ' (ಏನೋ ತಪ್ಪಾಗಿದೆ)" ಎಂದು ತಿಳಿಸಿದ್ದಾರೆ.

ರಾಹುಲ್ ಗಾಂಧಿಯನ್ನು ದೋಷಿ ಎಂದು ಸಾಬೀತುಪಡಿಸಲು ಬಯಸುತ್ತಿದ್ದೀರಿ. ಹೀಗಾಗಿಯೇ ಗುಜರಾತ್‌ಗೆ ಪ್ರಕರಣವನ್ನು ವರ್ಗಾಯಿಸಲಾಯಿತು. ಮೋದಿಯವರು ಪ್ರಜಾಪ್ರಭುತ್ವವನ್ನು ಮುಕ್ತಾಯಗೊಳಿಸುತ್ತಿದ್ದು, ಇದು ಪ್ರಜಾಪ್ರಭುತ್ವದ ಕರಾಳ ದಿನವಾಗಿದೆ. ಹೀಗಾಗಿಯೇ ಪ್ರತಿಪಕ್ಷಗಳ ಸಂಸದರು ಕಪ್ಪು ಬಟ್ಟೆಯನ್ನು ಧರಿಸಿದ್ದಾರೆಂದು ಹೇಳಿದರು.

ಇದಕ್ಕೂ ಮುನ್ನ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕೊಠಡಿಯಲ್ಲಿ ಡಿಎಂಕೆ, ಸಮಾಜವಾದಿ ಪಕ್ಷ, ಜೆಡಿ (ಯು), ಬಿಆರ್‌ಎಸ್, ಸಿಪಿಐ (ಎಂ), ಸಿಪಿಐ, ಆರ್‌ಜೆಡಿ, ಎನ್‌ಸಿಪಿ, ಐಯುಎಂಎಲ್, ಎಂಡಿಎಂಕೆ, ಕೇರಳ ಕಾಂಗ್ರೆಸ್, ಟಿಎಂಸಿ, ಆರ್‌ಎಸ್‌ಪಿ, ಎಎಪಿ, ಎನ್‌ಪಿ ಮತ್ತು ಶಿವಸೇನೆ (ಯುಬಿಟಿ) ಪಕ್ಷಗಳ ನಾಯಕರು ಭೇಟಿಯಾಗಿ ಮಾತುಕತೆ ನಡೆಸಿದರು.

ಅಪರಿಚಿತ ಶವ ಪತ್ತೆ

ಮೈಸೂರು, ಮಾ.27– ಯಲಿಯೂರು ರೈಲು ನಿಲ್ದಾಣದ ವ್ಯಾಪ್ತಿ ಅಪರಿಚಿತ ವ್ಯಕ್ತಿ ರೈಲುಗಾಡಿಗೆ ಸಿಲುಕಿ ಮೃತಪಟ್ಟಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಮೃತನ ಚಹರೆ: ಸದೃಢಕಾಯ ಶರೀರ, ಗೋಧಿ ಮೈಬಣ್ಣ, ಕಪ್ಪು ಕೂದಲು ಹಾಗೂ ಗಡ್ಡ ಮೀಸೆ ಬಿಟ್ಟಿದ್ದು ಮೃತನು ಆಕಾಶ ನೀಲಿ ಬಣ್ಣದ ಶರ್ಟ್ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದು, ಕಪ್ಪು ಬಣ್ಣದ ಎಸ್ ಚಿಹ್ನೆ ಇರುವ ಸೆಕ್ಯೂರಿಟಿ ಗಾರ್ಡ್‌ಬೆಲ್ಟ್ ಅದರಲ್ಲಿ ಎಸ್ ಚಿಹ್ನೆ ಇರುವ ಸ್ಟೀಲ್ ಬಕಲ್ ಇರುತ್ತದೆ

ವ್ಯಕ್ತಿಯ ವಾರಸುದಾರರು ಇದ್ದಲ್ಲಿ ಮೈಸೂರು ಜಿಲ್ಲೆಯ ರೈಲ್ವೆ ಪೊಲೀಸ್ ಠಾಣೆ(ದೂ.ಸಂ:0821–2516579) ಯನ್ನು ಸಂಪರ್ಕಿಸಬಹುದು ಎಂದು ರೈಲ್ವೆ ಪೊಲೀಸ್ ಠಾಣೆಯ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರಾಧಿಗಳಿಗೆ ಕ್ಷಮಾಪಣೆ; ಕಡತಗಳೊಂದಿಗೆ ಸಿದ್ಧರಾಗಿರಿ

ಬಿಲ್ಕಿಸ್ ಬಾನೊ ಅರ್ಜಿ ಕುರಿತು ಗುಜರಾತ್ ಸರ್ಕಾರಕ್ಕೆ ಸುಪ್ರೀಂ ತಾಕೀತು!



ನವದೆಹಲಿ: ಬಿಲ್ಕಿಸ್ ಬಾನೊ ಸಲ್ಲಿಸಿರುವ ಅರ್ಜಿ ಕುರಿತು ಕೇಂದ್ರ, ಗುಜರಾತ್ ಸರ್ಕಾರ ಮತ್ತಿತರರಿಂದ ಪ್ರತಿಕ್ರಿಯೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ಕೇಳಿದೆ. 2002ರ ಗೋಧ್ರಾ ಹತ್ಯಾಕಾಂಡದ ನಂತರ ಬಿಲ್ಕಿಸ್ ಬಾನೊ ಮೇಲೆ ಅತ್ಯಾಚಾರ ನಡೆದು ಆಕೆಯ ಏಳು ಮಂದಿ ಕುಟುಂಬ ಸದಸ್ಯರನ್ನು ಹತ್ಯೆ ಮಾಡಲಾಗಿತ್ತು.

ಈ ಪ್ರಕರಣದಲ್ಲಿ 11 ಮಂದಿಗೆ ಆರೋಪಗಳಿಂದ ಖುಲಾಸೆಗೊಳಿಸಿರುವುದನ್ನು ಬಾನೊ ಸುಪ್ರೀಂನಲ್ಲಿ ಪ್ರಶ್ನಿಸಿದ್ದಾರೆ. ಇದರಲ್ಲಿ ಸಮಸ್ಯೆಗಳ ಸರಮಾಲೆಯೇ ಇದ್ದು, ವಿವರವಾಗಿ ವಿಚಾರಣೆ ನಡೆಸುವ ಅಗತ್ಯವಿದೆ ಎಂದು ಹೇಳಿದ ನ್ಯಾಯಮೂರ್ತಿಗಳಾದ ಕೆಎಂ ಜೋಸೆಫ್ ಮತ್ತು ಬಿವಿ ನಾಗರತ್ನ ಅವರನ್ನೊಳಗೊಂಡ ನ್ಯಾಯಪೀಠ, ವಿಚಾರಣೆಯನ್ನು ಏಪ್ರಿಲ್ 18ಕ್ಕೆ ಮುಂದೂಡಿದೆ.

ನ್ಯಾಯಾಲಯಗಳ ಮುಂದೆ ಅನೇಕ ಕೊಲೆ ಪ್ರಕರಣಗಳಿದ್ದು, ಅಪರಾಧಿಗಳು ಕ್ಷಮಾಪಣೆ ಇಲ್ಲದೆ ಅನೇಕ ವರ್ಷಗಳಿಂದ ಜೈಲುಗಳಲ್ಲಿಯೇ ಕೊಳೆಯುತ್ತಿದ್ದಾರೆ. ಇತರ ಪ್ರಕರಣಗಳಂತೆ ಇಲ್ಲಿಯೂ ಏಕರೂಪ ಮಾನದಂಡಗಳನ್ನು ಅನ್ವಯಿಸಲಾಗಿದೆಯೇ ಎಂದು ನ್ಯಾಯಮೂರ್ತಿ ಜೋಸೆಫ್ ಪ್ರಶ್ನಿಸಿದರು.

ಅಪರಾಧ ಭಯಾನಕವಾಗಿದೆ ಎಂದು ಮೌಖಿಕವಾಗಿ ಸೂಚಿಸಿರುವ ನ್ಯಾಯಾಲಯ, ಸುಪ್ರೀಂಕೋರ್ಟ್ ಕೇಂದ್ರ, ಗುಜರಾತ್ ಸರ್ಕಾರ ಮತ್ತು ಅಪರಾಧಿಗಳಿಗೆ ನೋಟಿಸ್ ಜಾರಿ ಮಾಡಿದೆ. ಮುಂದಿನ ವಿಚಾರಣೆ ದಿನದಂದು ಕಕ್ಷಿದಾರರ ಕ್ಷಮಾದಾನಕ್ಕೆ ಸಂಬಂಧಿತ ಕಡತಗಳೊಂದಿಗೆ ಸಿದ್ಧವಾಗುವಂತೆ ಗುಜರಾತ್ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಕಳೆದ ವರ್ಷ ನವೆಂಬರ್ 30 ರಂದು ಗುಜರಾತ್ ಸರ್ಕಾರ 11 ಜೀವಾವಧಿ ಕೈದಿಗಳ ತಾತ್ಕಾಲಿಕ ಬಿಡುಗಡೆ ಪ್ರಶ್ನಿಸಿ ಬಾನೊ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ನಂತರ ಕಳೆದ ವರ್ಷ ಡಿಸೆಂಬರ್‌ನಲ್ಲಿ ಅವರು ಸಲ್ಲಿಸಲಾಗಿದ್ದ ಮರುಪರಿಶೀಲನಾ ಅರ್ಜಿ ವಜಾ ಗೊಂಡಿತ್ತು. ಎಲ್ಲಾ 11 ಅಪರಾಧಿಗಳಿಗೆ ಗುಜರಾತ್ ಸರ್ಕಾರವು ವಿನಾಯಿತಿ ನೀಡಿದ್ದರಿಂದ ಕಳೆದ ವರ್ಷ ಆಗಸ್ಟ್ 15 ರಂದು ಎಲ್ಲ ಆರೋಪಿಗಳು ಜೈಲಿನಿಂದ ಬಿಡುಗಡೆ ಮಾಡಲಾಗಿತ್ತು.

8 ವರ್ಷದ ಅಮೇರಿಕ–ಮಂಗೋಲಿಯನ್ ಬಾಲಕನನ್ನು 10ನೇ ಲಾಮಾ ಎಂದು ಹೆಸರಿಸಿದ ದಲೈಲಾಮಾ



ನವದೆಹಲಿ: ಬೌದ್ಧ ಧರ್ಮದ ಸರ್ವೋಚ್ಚ ಧರ್ಮಗುರು ದಲೈಲಾಮಾ ಅವರು 8 ವರ್ಷದ ಅಮೇರಿಕನ್ ಮಂಗೋಲಿಯನ್ ಬಾಲಕನನ್ನು ಟಿಬೆಟಿಯನ್ ಬೌದ್ಧಧರ್ಮದ ಮೂರನೇ ಪ್ರಮುಖ ಆಧ್ಯಾತ್ಮಿಕ ನಾಯಕ ಎಂದು ಘೋಷಿಸಿದ್ದಾರೆ. ಅಮೆರಿಕದಲ್ಲಿ ಜನಿಸಿದ ಮಂಗೋಲಿಯನ್ ಬಾಲಕನಿಗೆ ಟಿಬೆಟ್ ಧರ್ಮಗುರು ದಲೈ ಲಾಮಾ ಅವರು ಟಿಬೆಟಿಯನ್ ಬೌದ್ಧಧರ್ಮದಲ್ಲಿ ಮೂರನೇ ಅತ್ಯುನ್ನತ ಶ್ರೇಣಿಯ 10ನೇ ಲಾಮಾ ಎಂದು ಕರೆಯಲ್ಪಡುವ ಖಲ್ಖಾ ಜೆಟ್ಸನ್ ದಂಪಾ ರಿಂಪೋಚೆ ಅವರ ಹೆಸರಿಟ್ಟಿದ್ದಾರೆ ಎಂದು ಹೇಳಲಾಗಿದೆ. ಅಂತಾರಾಷ್ಟ್ರೀಯ ಸುದ್ದಿ ವೆಬ್‌ಸೈಟ್‌ವೊಂದು ಈ ಬಗ್ಗೆ ವರದಿ ಮಾಡಿದ್ದು, 'ದಲೈಲಾಮಾ ಅವರು ಎಂಟು ವರ್ಷದ ಬಾಲಕನೊಂದಿಗೆ ಮಾರ್ಚ್ 8 ರಂದು ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ನಡೆದ ಸಮಾರಂಭದಲ್ಲಿ ಭಾಗವಹಿಸಿದ್ದರು ಎನ್ನಲಾಗಿದೆ.

ಸಿಎಂ ತವರು ಶಿಗ್ಗಾವಿಯಲ್ಲೇ ಬಿಜೆಪಿಗೆ ಆಘಾತ


ಬೊಮ್ಮಾಯಿ ಆಪ್ತ ಸೇರಿ ಹಲವರು ಕಾಂಗ್ರೆಸ್ ಸೇರ್ಪಡೆ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆಗೆ ಭರ್ಜರಿ ಸಿದ್ಧತೆ ನಡೆಸಿರುವ ಬಿಜೆಪಿಗೆ ಸಿಎಂ ತವರು ಶಿಗ್ಗಾವಿಯಲ್ಲೇ ಆಘಾತ ಎದುರಾಗಿದ್ದು, ಬಸವರಾಜ ಬೊಮ್ಮಾಯಿ ಆಪ್ತರೆಂದೇ ಹೇಳಲಾಗುತ್ತಿದ್ದ ಶಿಗ್ಗಾಂವಿ ಕ್ಷೇತ್ರದ ಮಾಜಿ ಸಂಸದ ಮಂಜುನಾಥ್ ಕುನ್ನೂರು ಸೇರಿದಂತೆ ಹಲವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ಮಂಜುನಾಥ್ ಕುನ್ನೂರು ಮತ್ತು ಅವರ ಪುತ್ರ ರಾಜು ಕುನ್ನೂರು, ಚಿಂತಾಮಣಿಯ ನಾಯಕರಾದ ಎಂ.ಸಿ. ಸುಧಾಕರ್ ಹಾಗೂ ಕೆ.ಆರ್ ಪೇಟೆ ಕ್ಷೇತ್ರದ ಜೆಡಿಎಸ್ ನಾಯಕ ಬಿ.ಎಲ್ ದೇವರಾಜು ಅವರು ಇಂದು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ಇಂದು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಮ್ಮುಖದಲ್ಲಿ ಈ ಎಲ್ಲ ನಾಯಕರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಮಾಜಿ ಸಚಿವರಾದ ಪ್ರಿಯಾಂಕ್ ಖರ್ಗೆ, ರೆಹಮಾನ್ ಖಾನ್, ಚಲುವರಾಯಸ್ವಾಮಿ, ನರೇಂದ್ರಸ್ವಾಮಿ ಉಪಸ್ಥಿತರಿದ್ದರು.

ಬಿಜೆಪಿ ಶೋಚನೀಯ ಸ್ಥಿತಿಗೆ ಇದು ಸಾಕ್ಷಿ: ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಲಗೈ ಭಂಟನಂತೆ ಇದ್ದ ಶಿಗ್ಗಾಂವ್ ಕ್ಷೇತ್ರದ ಬಿಜೆಪಿ ನಾಯಕ, ಮಾಜಿ ಸಂಸದ ಹಾಗೂ ಮಾಜಿ ಶಾಸಕ ಮಂಜುನಾಥ್ ಕುನ್ನೂರು ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದು, ಬಿಜೆಪಿಯ ಶೋಚನೀಯ ಸ್ಥಿತಿಗೆ ಇದು ಸಾಕ್ಷಿ' ಎಂದು ವ್ಯಂಗ್ಯವಾಡಿದರು.



ರಾಜ್ಯದ ಮುಖ್ಯಮಂತ್ರಿಗಳು ತನ್ನ ಆಪ್ತರನ್ನೇ ವಿಶ್ವಾಸಕ್ಕೆ ತೆಗೆದುಕೊಳ್ಳದಿರುವಾಗ ರಾಜ್ಯದ ಜನರ ವಿಶ್ವಾಸ ಗಳಿಸಲು ಸಾಧ್ಯವೇ? ಮಂಜುನಾಥ್ ಕುನ್ನೂರು ಅವರು ಲೋಕಸಭೆ ಮಾಜಿ ಸದಸ್ಯರು, ಮೂರು ಬಾರಿ ಶಾಸಕರಾಗಿದ್ದರು. ಅವರು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಬೇಷರತ್ ಸೇರುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ನಾಯಕತ್ವ ಹಾಗೂ ಸಿದ್ಧಾಂತ ಒಪ್ಪಿ ಕಾಂಗ್ರೆಸ್ ಸೇರುತ್ತಿದ್ದಾರೆ. ಬಿಜೆಪಿ ನಾಯಕರೇ ಮುಖ್ಯಮಂತ್ರಿ ಕ್ಷೇತ್ರದಲ್ಲಿ ಬದಲಾವಣೆ ಬಯಸಿದ್ದಾರೆ ಎಂಬುದಕ್ಕೆ ಇದು ಸಾಕ್ಷಿ. ಈ ಸೇರ್ಪಡೆ ಶಿಗ್ಗಾಂವ್ ಕ್ಷೇತ್ರದಲ್ಲಿ ಮುಂಬರುವ ಚುನಾವಣೆ ಫಲಿತಾಂಶದ ಮೇಲೆ ಪರಿಣಾಮ ಬೀರಲಿದೆ. ಮಂಜುನಾಥ್ ಹಾಗೂ ಅವರ ಜತೆ ಬಂದಿರುವ ಎಲ್ಲ ನಾಯಕರಿಗೆ ನಾನು ಹೃದಯಪೂರ್ವಕವಾಗಿ ಪಕ್ಷಕ್ಕೆ ಸ್ವಾಗತಿಸುತ್ತೇನೆ ಎಂದರು.

ಚಿಂತಾಮಣಿಯ ಜೆಡಿಎಸ್ ನಾಯಕರನ್ನು ಸೇರ್ಪಡೆ ಮಾಡಿಕೊಂಡು, ಜಾತ್ಯಾತೀತ ಜನತಾದಳ ತ್ಯಜಿಸಿ ಚಿಂತಾಮಣಿ ಕ್ಷೇತ್ರದ ಮೂವರು ಪ್ರಮುಖ ನಾಯಕರು ಇಂದು ಕಾಂಗ್ರೆಸ್ ಸೇರುತ್ತಿದ್ದಾರೆ. ಪಕ್ಷದ ಸಿದ್ಧಾಂತ, ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ನಾಯಕತ್ವದ ಮೇಲೆ ನಂಬಿಕೆ ಇಟ್ಟು ಪಕ್ಷ ಸೇರುತ್ತಿದ್ದಾರೆ.

ಯುವ ಮಿತ್ರ ಸುಧಾಕರ್ ಅವರು ಸಾಕಷ್ಟು ಬಾರಿ ನನ್ನ ಭೇಟಿ ಮಾಡಿ ಪಕ್ಷ ಸೇರ್ಪಡೆ ಬಗ್ಗೆ ತಿಳಿಸಿದ್ದರು. ಇಂದು ಪಕ್ಷ ಸೇರ್ಪಡೆ ಹಾಗೂ ವಿವಿಧ ಸಭೆಗಳಿರುವ ಕಾರಣ ರಾಮನಗರ ಪ್ರಜಾಧ್ವನಿ ಯಾತ್ರೆ ರದ್ದು ಮಾಡಿದ್ದೇನೆ. ಇಂದು ಚಿಂತಾಮಣಿಯ ರಿಯಾಜ್ ಪಾಷಾ, ಮಹೇಶ್, ಭಾಸ್ಕರ್, ಕೃಷ್ಣಾ ರೆಡ್ಡಿ ಅಮರ್, ಮಹಮದ್ ಶಫಿವುಲ್ಲಾ, ಸಾಮ್ರಾಟ್, ಇರ್ಫಾನ್ ಖಾನ್, ಆರ್. ಪ್ರಸಾದ್, ವೆಂಕಟರೆಡ್ಡಿ, ನವೀನ್, ವಿಜಯ್, ಶ್ರೀನಿವಾಸ್ ಯಾದವ್ ಸೇರಿದಂತೆ ವಿವಿಧ ಸಮುದಾಯದ ಅನೇಕ ಮುಖಂಡರು ಪಕ್ಷ ಸೇರುತ್ತಿದ್ದಾರೆ. ನಮ್ಮ ಪಕ್ಷಕ್ಕೆ ಮಾತ್ರವಲ್ಲ, ರಾಜ್ಯ ಹಾಗೂ ದೇಶಕ್ಕೆ ಶಕ್ತಿ ತುಂಬಲು ನೀವೆಲ್ಲ ಕಾಂಗ್ರೆಸ್ ಸೇರುತ್ತಿದ್ದೀರಿ. ನಿಮಗೆ ಸ್ವಾಗತ ಕೋರುತ್ತೇನೆ ಎಂದರು.

ಕೆ.ಆರ್ ಪೇಟೆಯ ಜೆಡಿಎಸ್ ನಾಯಕ ದೇವರಾಜ್ ಅವರನ್ನು ಪಕ್ಷಕ್ಕೆ ಸ್ವಾಗತಿಸಿ, ಮಂಡ್ಯ ಜಿಲ್ಲೆಯ ರಾಜಕೀಯ ಇಂದು ಹೊಸ ತಿರುವು ಪಡೆಯುತ್ತಿದೆ. ಬಹಳಷ್ಟು ನಾಯಕರು ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರುತ್ತಿದ್ದಾರೆ. ಕಳೆದ ಕೆ.ಆರ್. ಪೇಟೆ ಉಪಚುನಾವಣೆಯಲ್ಲಿ ಜೆಡಿಎಸ್ ನಿಂದ ಸ್ಪರ್ಧಿಸಿ ಎರಡನೇ ಸ್ಥಾನ ಪಡೆದಿದ್ದ ದೇವರಾಜ್ ಅವರು ಇಂದು ಕಾಂಗ್ರೆಸ್ ಸೇರುತ್ತಿದ್ದಾರೆ. ಈ ಉಪಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿ ಚಂದ್ರಶೇಖರ್ ಅವರನ್ನು ಗೆಲ್ಲಿಸಲು ಪ್ರಯತ್ನಿಸಿದೆವು. ಆದರೆ ಅವರು 3ನೇ ಸ್ಥಾನ ಪಡೆಯಬೇಕಾಯಿತು. ಆಪರೇಷನ್ ಕಮಲದಿಂದ ಬಿಜೆಪಿ ಸೇರಿದ ಅಭ್ಯರ್ಥಿ ಗೆಲುವು ಸಾಧಿಸಿದ್ದರು. ಕೆ.ಆರ್.ಪೇಟೆ ಈ ಹಿಂದೆ ಕಾಂಗ್ರೆಸ್ ಪಕ್ಷದ ಭದ್ರಕೋಟೆಯಾಗಿತ್ತು. ಆ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ವಕೀಲರಾಗಿ ಕೆಲಸ ಮಾಡಿಕೊಂಡು ಬಂದಿರುವ ದೇವರಾಜ್ ಅವರು ಸರಳ ಸಜ್ಜನ ವ್ಯಕ್ತಿ.

ಅವರು 1999ರಲ್ಲಿ ವಿಧಾನಸಭೆಗೆ ಸ್ಪರ್ಧಿಸಿದ್ದರು. ನಂತರ 2019ರ ಉಪಚುನಾವಣೆ ಸಮಯದಲ್ಲಿ ಜೆಡಿಎಸ್‌ನಿಂದ ಅಭ್ಯರ್ಥಿಯಾಗಿ 57 ಸಾವಿರ ಮತ ಪಡೆದಿದ್ದರು. ಅವರು ಯಾವುದೇ ಷರತ್ತು ಇಲ್ಲದೆ, ಇಂದು ಕಾಂಗ್ರೆಸ್ ಪಕ್ಷ ಸೇರುತ್ತಿದ್ದಾರೆ. ಈ ರಾಜ್ಯ ಹಾಗೂ ಕೆ.ಆರ್ ಪೇಟೆಗೆ ಒಳ್ಳೆಯದಾಗಬೇಕು ಹೀಗಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರಲು ಬಯಸುತ್ತೇನೆ. ಜೆಡಿಎಸ್ ಹಾಗೂ ಬಿಜೆಪಿ ಮಣಿಸುವುದು ನಮ್ಮ ಗುರಿ ಹೀಗಾಗಿ ನಾವು ಷರತ್ತು ಇಲ್ಲದೇ ಸೇರುತ್ತೇನೆ ಎಂದು ಅವರು ಇಲ್ಲಿಗೆ ಬಂದಿದ್ದಾರೆ. ಇವರ ಜತೆ ಸಾವಿರಾರು ಮಂದಿ ಬೆಂಬಲಿಗರು ಬಂದಿದ್ದಾರೆ. ಹೊಸಬರು, ಹಳಬರು ಎಂಬ ವ್ಯತ್ಯಾಸ ಬೇಡ. ಪಕ್ಷ ಯಾರನ್ನೇ ಅಭ್ಯರ್ಥಿ ಮಾಡಿದರೂ ನೀವೆಲ್ಲರೂ ಸೇರಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ನಾಳೆಯಿಂದಲೇ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಕಾರ್ಯಕ್ರಮಗಳನ್ನು ಬೂತ್ ಮಟ್ಟದಲ್ಲಿ ಜನರಿಗೆ ತಲುಪಿಸಬೇಕು' ಎಂದು ತಿಳಿಸಿದರು.

ಶಿವಮೊಗ್ಗದ ಜೆಡಿಎಸ್ ಕಾರ್ಯದರ್ಶಿ ಅರುಣ್ ಕುಮಾರ್ ಅವರು ಕೂಡ ಪಕ್ಷಕ್ಕೆ ಬಂದಿದ್ದು, ಅವರನ್ನು ನಾವು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಸ್ವಾಗತಿಸುತ್ತೇನೆ. ಗುಬ್ಬಿ ವಾಸು ಅವರು ಕೂಡ ವಿಧಾನಸಭೆ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಪಕ್ಷ ಸೇರಲು ಅರ್ಜಿ ಹಾಕಲು ಬಂದಿದ್ದಾರೆ. ಅವರನ್ನು ಮತ್ತೊಂದು ದಿನ ಕಾರ್ಯಕ್ರಮ ಮಾಡಿ ಪಕ್ಷಕ್ಕೆ ಸೇರಿಸಿಕೊಳ್ಳುತ್ತೇವೆ ಎಂದರು.

ಮೈಸೂರು ಮಿತ್ರ ಮಂಗಳವಾರ 28 ಮಾರ್ಚ್ 2023

59.34 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿ ಉದ್ಘಾಟನೆ, ಶಂಕುಸ್ಥಾಪನೆ



ಹೆಚ್.ಡಿ.ಕೋಟೆ, ಮಾ.27– ನನ್ನ ಅಧಿಕಾರಾವಧಿಯಲ್ಲಿ ಪಕ್ಷಭೇದ ಮಾಡದೇ ಎಲ್ಲಾ ವರ್ಗದವರಿಗೂ ಸರ್ಕಾರದ ಸೌಲಭ್ಯ ತಲುಪಿಸುವ ಮೂಲಕ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಆವರಣದಲ್ಲಿ 59.34 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ನನ್ನ ಹಾಗೂ ನನ್ನ ತಂದೆಯವರನ್ನು ಶಾಸಕರನ್ನಾಗಿ ಆಯ್ಕೆ ಮಾಡಿದ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನ ಜನತೆಗೆ ನಮ್ಮ ಕುಟುಂಬ ಸದಾ ಚಿರಋಣಿಯಾಗಿರುತ್ತದೆ ಎಂದ ಅವರು, ಕ್ಷೇತ್ರದ ಅಭಿವೃದ್ಧಿಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ನನಗೆ ಸಹಕಾರ ನೀಡಿದ್ದು, ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ್ ಅವರ ಮಾರ್ಗದರ್ಶನದಲ್ಲಿ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇನೆ. 380 ಹಳ್ಳಿ, 320 ಹಾಡಿಗಳಿಂದ ಕೂಡಿರುವ ಹೆಚ್.ಡಿ.ಕೋಟೆ ದೊಡ್ಡ ಕ್ಷೇತ್ರವಾಗಿದ್ದು, ಶಾಸಕನಾದ ಬಳಿಕ ಪ್ರತಿಯೊಂದು ಗ್ರಾಮಕ್ಕೂ ಭೇಟಿ ನೀಡಿ, ಅಲ್ಲಿನ ಸಮಸ್ಯೆ ಬಗೆಹರಿಸುವ ಕೆಲಸ ಮಾಡಿದ್ದೇನೆ ಎಂದರು.

ತಾಲೂಕಿನ ಜನತೆ ಕಳೆದ ಚುನಾವಣೆಯಲ್ಲಿ ನನ್ನನ್ನು 27 ಸಾವಿರ ಮತಗಳ ಅಂತರದಿಂದ ಗೆಲ್ಲಿಸಿದರು. ನಾನು ಶಾಸಕನಾಗಿ ಆಯ್ಕೆಯಾದ ಸಂದರ್ಭ ಕೆಲವರು ಈತನಿಗೆ ಇನ್ನೂ ಚಿಕ್ಕ ವಯಸ್ಸು ಕ್ಷೇತ್ರವನ್ನು ಹೇಗೆ ಅಭಿವೃದ್ಧಿಗೊಳಿಸುತ್ತಾನೆ ಎಂದಿದ್ದರು. ಅಂತಹವರಿಗೆ ಅಭಿವೃದ್ಧಿ ಕಾರ್ಯದ ಮೂಲಕ ಉತ್ತರ ನೀಡಿದ್ದೇನೆ ಎಂದರು.

ಇದಕ್ಕೂ ಮುನ್ನಾ ವಿವಿಧ ಇಲಾಖೆಗಳಿಂದ ಏರ್ಪಡಿಸಿದ್ದ ವಸ್ತು ಪ್ರದರ್ಶನ ವೀಕ್ಷಿಸಿದ ಶಾಸಕರು 47.11 ಕೋಟಿ ರೂ. ವೆಚ್ಚದ ವಿವಿಧ ಇಲಾಖೆ ಕಟ್ಟಡ ಉದ್ಘಾಟನೆ, 12.23 ಕೋಟಿ ವೆಚ್ಚದ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ಇದೇ ವೇಳೆ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಶ್ರೀ ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ ಹಾಗೂ ಪಂಗಡದ ಫಲಾನುಭವಿಗಳಿಗೆ ಗಂಗಾ ಕಲ್ಯಾಣ ಯೋಜನೆ ಅಡಿ ಉಪಕರಣಗಳನ್ನು ವಿತರಿಸಲಾಯಿತು. ಅಲ್ಲದೇ ಶೇ.70ರಷ್ಟು ರಿಯಾಯಿತಿ ದರದಲ್ಲಿ 20 ಯುವಕರಿಗೆ ದ್ವಿಚಕ್ರ ವಾಹನ ವಿತರಿಸಲಾಯಿತು. ಬಳಿಕ ಸರಗೂರು ತಾಲೂಕಿನ 53 ರೈತ ಕುಟುಂಬಕ್ಕೆ ಸಾಗುವಳಿ ಹಕ್ಕುಪತ್ರ ವಿತರಿಸಲಾಯಿತು. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ತಾಲೂಕು ಉಪವಿಭಾಗದ 3 ಕಚೇರಿಗಳು, ಗ್ರಾಮೀಣ ಭಾಗಗಳಲ್ಲಿ ನಿರ್ಮಿಸಿರುವ 4 ಅಂಬೇಡ್ಕರ್ ಭವನ ಹಾಗೂ 2 ವಾಲ್ಮೀಕಿ ಭವನಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ 4 ಅಂಗನವಾಡಿ ಕಟ್ಟಡ, ಲೋಕೋಪಯೋಗಿ ಇಲಾಖೆಯ 5 ಕೋಟಿ ರೂ. ವೆಚ್ಚದ ತೊರವಳ್ಳಿ ಗ್ರಾಮದ ಬಳಿಯ ಮೈಸೂರು– ಕೋಟೆ ಸಂಪರ್ಕ ಸೇತುವೆ, ಪಶುಪಾಲನಾ ಇಲಾಖೆಯ ಕಂಚುಮಳ್ಳಿ ಮತ್ತು ಹಂಪಾಪುರ ಪಶು ಆಸ್ಪತ್ರೆ, ಶಿಕ್ಷಣ ಇಲಾಖೆಯ 38 ಶಾಲೆಯ 76 ಕೊಠಡಿ ಉದ್ಘಾಟಿಸಲಾಯಿತು.

ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ಮಧು, ಪ್ರೇಮ್, ಮೈಮುಲ್ ನಿರ್ದೇಶಕ ಈರೇಗೌಡ, ಸತೀಶ್‌ಗೌಡ, ರವಿ, ಪ್ರದೀಪ, ಏಜಾಜ್ ಪಾಷಾ, ಶಿವಪ್ಪ, ತಹಸೀಲ್ದಾರ್ ಮಹೇಶ್, ಅಧಿಕಾರಿಗಳಾದ ಉದಯಕುಮಾರ್, ರಂಗಸ್ವಾಮಿ, ನಾಗರಾಜು, ಬೋರಯ್ಯ, ಅಶೋಕ್, ಸೌಮ್ಯ, ರಾಜು, ಶ್ರೀನಿವಾಸ್, ಶಂಭುಲಿಂಗನಾಯಕ, ಡಾ.ಪೂರ್ಣನಂದ, ಡಾ.ರವಿಕುಮಾರ್, ಆಶಾ, ಚಂದುಕುಮಾರ್, ನಾರಾಯಣಸ್ವಾಮಿ, ರಾಮಸ್ವಾಮಿ, ಗೋವಿಂದ ನಾಯಕ, ಸಣ್ಣರಾಮಪ್ಪ, ಮುಖಂಡರಾದ ಚಿಕ್ಕವೀರನಾಯಕ, ಸೌಮ್ಯ ಅಶೋಕ್, ನಾಗರಾಜು, ಪರಶಿವಮೂರ್ತಿ, ನಾಗರಾಜು, ಕೆಂಡಗನಗೌಡ, ಇಬ್ರಾಹಿಂ, ಗಣೇಶ್ ಆಚಾರ್, ಬಿ.ಸಿ.ಬಸಪ್ಪ ಇದ್ದರು.

ನುಗ್ಗಳ್ಳಿಕೊಪ್ಪಲಲ್ಲಿ ಚಿರತೆ ಮರಿ ಸೆರೆ

ತಿ.ನರಸೀಪುರ, ಮಾ.27– ತಾಲೂಕಿನ ನುಗ್ಗಳ್ಳಿಕೊಪ್ಪಲು ಗ್ರಾಮದಲ್ಲಿ ಇಟ್ಟಿದ್ದ ಬೋನಿಗೆ ಒಂದೂವರೆ ವರ್ಷದ ಹೆಣ್ಣು ಚಿರತೆ ಮರಿ ಭಾನುವಾರ ರಾತ್ರಿ ಬಿದ್ದಿದೆ.



ಗ್ರಾಮದ ಮಂಟೇಲಿಂಗು ಎಂಬುವರ ಜಮೀನಿನಲ್ಲಿ ಇಟ್ಟಿದ್ದ ಬೋನಿನಲ್ಲಿ ಚಿರತೆ ಸೆರೆಯಾಗಿದ್ದು, ಚಿರತೆ ಓಡಾಟದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಬೋನು ಇರಿಸಿತ್ತು. ಸೆರೆ ಸಿಕ್ಕ ಚಿರತೆ ಮರಿಯನ್ನು ಪರೀಕ್ಷೆ ನಂತರ ಬಂಡೀಪುರ ಅರಣ್ಯಕ್ಕೆ ಬಿಡಲಾಗುವುದು ಎಂದು ಅರಣ್ಯಾಧಿಕಾರಿಗಳು ತಿಳಿಸಿದರು. ಸ್ಥಳಕ್ಕೆ ಆರ್‌ಎಫ್‌ಓ ಸಯ್ಯದ್ ನದೀಮ್, ಅರಣ್ಯಾಧಿಕಾರಿ ಮಂಜುನಾಥ್, ಗಸ್ತು ಅರಣ್ಯಾಧಿಕಾರಿ ಲೋಕೇಶ್ ಇತರೆ ಸಿಬ್ಬಂದಿವರ್ಗ ಆಗಮಿಸಿದ್ದರು.



ಕೆ.ಆರ್.ನಗರ ತಾಲೂಕಿನ ಕೆಗ್ಗೆರೆ ಗ್ರಾಮದ ಬಳಿ ಸಾ.ರಾ.ನಿಧಿ ಗಾರ್ಮೆಂಟ್ಸ್ ಅನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು. ಈ ವೇಳೆ ಶಾಸಕ ಸಾ.ರಾ.ಮಹೇಶ್, ಮಾಗಡಿ ಶಾಸಕ ಮಂಜು, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಇನ್ನಿತರರಿದ್ದರು.

ವಿಶ್ವಕರ್ಮ ಸಮುದಾಯ ಭವನಕ್ಕೆ ಭೂಮಿ ಪೂಜೆ

ಕೆ.ಆರ್.ನಗರ, ಮಾ.27– ವಿಶ್ವಕರ್ಮ ಸೇವಾ ಸಮಾಜಕ್ಕೆ ಸಿಎ ನಿವೇಶನ ಮಂಜೂರು ಮಾಡಿ, ನಿವೇಶನ ಪಡೆಯಲು ಸರ್ಕಾರಕ್ಕೆ ಸಂದಾಯ ಮಾಡಬೇಕಾಗಿದ್ದ 86 ಲಕ್ಷ ರೂ. ಪೈಕಿ ಕೇವಲ ಶೇ.10 ರಷ್ಟನ್ನು ಕಟ್ಟಲು ಸರ್ಕಾರದಿಂದ ಒಪ್ಪಿಗೆ ಪಡೆದು 5 ಲಕ್ಷ ರೂ.ಗಳನ್ನು ವೈಯಕ್ತಿಕವಾಗಿ ಭರಿಸಲಾಗಿದೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.



ಪಟ್ಟಣದ ವಿಜಯನಗರ ಹೊಸ ಬಡಾವಣೆಯಲ್ಲಿ ಸಮಾಜಕ್ಕೆ ಮಂಜೂರು ಮಾಡಿಸಲಾದ ಸಿಎ ನಿವೇಶನದಲ್ಲಿ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಭವನ ನಿರ್ಮಾಣ ಕಾಮಗಾರಿಗೆ ಸರ್ಕಾರದಿಂದ 1 ಕೋಟಿ 90 ಲಕ್ಷ ಅನುದಾನ ಕೊಡಿಸಲಾಗುತ್ತದೆ. ಕಿಡಿಗೇಡಿಗಳು ಮಾಡುವ ಅಪಪ್ರಚಾರಕ್ಕೆ ವಿಶ್ವಕರ್ಮ ಸಮುದಾಯದವರು ಕಿವಿಗೊಡಬಾರದು ಎಂದರು.

ಸಿಎ ನಿವೇಶನ ಮಂಜೂರು ಮಾಡಿಸಿದ ನಂತರ ಹಣ ಪಾವತಿಸಲು ಆಯಾ ಸಮಾಜಕ್ಕೆ ಸರ್ಕಾರ 30 ವರ್ಷ ಅವಕಾಶ ನೀಡಿರುವ ನಿಯಮವನ್ನು ತಿಳಿಯದವರು ರಾಜಕೀಯ ಲಾಭಕ್ಕಾಗಿ ಮಾತನಾಡುವುದು ಸಹಜ. ಸೂಕ್ಷ್ಮಾತೀ ಸೂಕ್ಷ್ಮ ಸಮಾಜಗಳಿಗೆ ತೊಂದರೆ ನೀಡಬಾರದು ಎಂಬ ಉದ್ದೇಶದಿಂದ ಮೊದಲ ಕಂತಿನ 5 ಲಕ್ಷ ಹಣ ಕಟ್ಟಲಾಗಿದೆ ಎಂದು ಮಾಹಿತಿ ನೀಡಿದರು.

ಟೀಕೆ ಮಾಡುವವರು ಅವರ ಸಮಾಜಕ್ಕೆ ಉತ್ತಮ ಮತ್ತು ಬೆಲೆ ಬಾಳುವ ಸ್ಥಳಗಳಲ್ಲಿ ಎಕರೆಗಟ್ಟಲೆ ನಿವೇಶನ ಪಡೆದಿದ್ದಾರೆ. ಆದರೆ ಇಂತಹ ಸಣ್ಣಮಟ್ಟ ಸಮಾಜಗಳಿಗೆ ನೀಡುವಾಗ ಇಲ್ಲದ ತಕರಾರು ಮತ್ತು ಅಪಪ್ರಚಾರ ಮಾಡುತ್ತಾರೆ ಎಂದು ದೂರಿದ ಶಾಸಕರು, ನಿವೇಶನವನ್ನು ಕಾನೂನಾತ್ಮಕವಾಗಿ ಕೊಡಿಸಲಾಗಿದ್ದು ವಿಶ್ವಕರ್ಮ ಸಮಾಜದವರು ಈ ವಿಚಾರದಲ್ಲಿ ಅನುಮಾನ ಪಡಬಾರದು ಎಂದರು.

ಹೆಬ್ಬಾಳು ಗ್ರಾಮದಲ್ಲಿ ಹೋಬಳಿ ಮಟ್ಟದ ಸಮುದಾಯ ಭವನ ನಿರ್ಮಿಸಲು ಸಿಎ ನಿವೇಶನ ಕೊಡಿಸುವುದಾಗಿ ಭರವಸೆ ನೀಡಲಾಗಿತ್ತು. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಶೀಘ್ರದಲ್ಲೇ ನಿವೇಶನ ಮಂಜೂರಾಗಲಿದೆ ಎಂದು ತಿಳಿಸಿದರಲ್ಲದೆ ಅಲ್ಲಿಯ ಭವನ ನಿರ್ಮಾಣಕ್ಕೂ ಅಗತ್ಯ ಅನುದಾನ ಮತ್ತು ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಇದೇ ಸಂದರ್ಭ ಸಮಾಜದಿಂದ ಶಾಸಕ ಸಾ.ರಾ.ಮಹೇಶ್ ಅವರನ್ನು ಸನ್ಮಾನಿಸಲಾಯಿತು. ಚನ್ನಗಿರಿ ತಾಲೂಕು ವಡ್ಡನಾಳು ಸಾವಿತ್ರಿ ಪೀಠದ ಶ್ರೀಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿಗಳು ಸಾನ್ನಿಧ್ಯ ವಹಿಸಿದ್ದರು.

ವಿಶ್ವಕರ್ಮ ಸೇವಾ ಸಮಾಜದ ಅಧ್ಯಕ್ಷ ಕೆ.ಎಸ್.ರೇವಣ್ಣ, ನವನಗರ ಅರ್ಬನ್ ಕೋ–ಅಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ವಿಶ್ವಕರ್ಮ ಸಂಘದ ತಾಲೂಕು ಅಧ್ಯಕ್ಷ ವೇಣುಗೋಪಾಲ್, ಪುರಸಭೆ ಸದಸ್ಯರಾದ ಕೆ.ಎಲ್.ಜಗದೀಶ್, ಉಮೇಶ್, ಸಂತೋಷಗೌಡ, ಮಾಜಿ ಸದಸ್ಯ ಕೆ.ಬಿ.ಸುಬ್ರಮಣ್ಯ, ಕುಮಾರ್, ಮುಖಂಡರಾದ ವೀರಭದ್ರಾಚಾರ್, ಚಿಕ್ಕವೀರು, ಸಿ.ವಿ.ಮೋಹನ್, ರವಿ ಆಚಾರ್, ರೇಣುಕಾಪ್ರಸನ್ನ, ಪ್ರಕಾಶಾಚಾರ್ ಸೇರಿದಂತೆ ಇನ್ನಿತರರಿದ್ದರು.

ಪಿ.ಪಟ್ಟಣದಲ್ಲಿ ಬೆಟ್ಟದಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದೇನೆ

ಎಸ್‌ಸಿ, ಎಸ್‌ಟಿ ಮೋರ್ಚಾ ಸಮಾವೇಶದಲ್ಲಿ ಸಂಸದ ಪ್ರತಾಪ್ ಸಿಂಹ



ಬೆಟ್ಟದಪುರ, ಮಾ.27– ಪಿರಿಯಾಪಟ್ಟಣ ತಾಲೂಕಿನಲ್ಲಿ ಶ್ರೀಮಲ್ಲಿಕಾರ್ಜುನ ಸ್ವಾಮಿ ಬೆಟ್ಟದಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದೇನೆ. ಬೇಕಾದರೆ ತಾಲೂಕನ್ನು ಒಂದು ಬಾರಿ ಸುತ್ತಿ ತಿಳಿದುಕೊಳ್ಳುವಂತೆ ಮಾಜಿ ಶಾಸಕ ಕೆ.ವೆಂಕಟೇಶ್‌ಗೆ ಸಂಸದ ಪ್ರತಾಪ್ ಸಿಂಹ ಸವಾಲು ಹಾಕಿದರು.

ಬೆಟ್ಟದಪುರದಲ್ಲಿ ನಡೆದ ಬಿಜೆಪಿ ಎಸ್‌ಸಿ ಮತ್ತು ಎಸ್‌ಟಿ ಮೋರ್ಚಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ನಮ್ಮ ಪಕ್ಷದ ಅಭ್ಯರ್ಥಿ ವಿಜಯ ಶಂಕರ್ ಗೆಲುವು ಖಚಿತ. ನನ್ನ ಅಧಿಕಾರವಧಿಯಲ್ಲಿ ಪಿರಿಯಾಪಟ್ಟಣ ತಾಲೂಕಿನ 303 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಗೆ ಚಾಲನೆ, ಮಸಣಿಕಮ್ಮನವರ ದೇವಾಲಯಕ್ಕೆ 50 ಲಕ್ಷ ಅನುದಾನ, 34 ಗ್ರಾಪಂಗಳಿಗೆ ಕಟ್ಟಡ ನಿರ್ಮಾಣ, ಗ್ರಾಪಂ ವ್ಯಾಪ್ತಿಯಲ್ಲಿ ರಸ್ತೆ ನಿರ್ಮಾಣ, ಕುಶಾಲನಗರ–ಮೈಸೂರು ರಾಜ್ಯ ಹೆದ್ದಾರಿ ಅಭಿವೃದ್ಧಿ ಸೇರಿದಂತೆ ಸಾಕಷ್ಟು ಜನಪರ ಕಾರ್ಯಗಳನ್ನು ಮಾಡಿದ್ದೇನೆ ಎಂದ ಅವರು, ಮುಂದಿನ ಸಂಸತ್ ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸಲು ಕ್ಷೇತ್ರದಲ್ಲಿ ಬಿಜೆಪಿ ಶಾಸಕರಿರುತ್ತಾರೆ ಎಂದರು. ತಾಲೂಕಿನ ಅನಧಿಕೃತ ತಂಬಾಕು ಬೆಳೆಗಾರರಿಗೆ ಪರವಾನಗಿ ಕೊಡಿಸಲು ಸಾಕಷ್ಟು ಶ್ರಮಿಸಿದ್ದೇನೆ. ಅಲ್ಲದೇ ತಂಬಾಕು ಬೆಳೆಗಾರರ ಪರ ಹೋರಾಡಲು ಬಿಜೆಪಿಯಿಂದ ಮೂವರು ಕಟ್ಟಾಳುಗಳಿದ್ದು, ಅದರಲ್ಲಿ ಹೆಚ್.ಸಿ.ಬಸವರಾಜು, ವಿಜಯ್ ಶಂಕರ್ ಹಾಗೂ ನಿರ್ದೇಶಕ ವಿಕ್ರಮ್ ರಾಜ್ ಇದ್ದಾರೆ. ನಾನು ರೈತರ ಕಷ್ಟಗಳಿಗೆ ಸ್ಪಂದಿಸಿ ಅದಕ್ಕೆ ಅನುಗುಣವಾಗಿ ನಿಮ್ಮ ಸಮಸ್ಯೆಗಳನ್ನು ನಿವಾರಿಸಲು ಪ್ರಯತ್ನಿಸುತ್ತೇನೆ ಎಂದರು.

ಬಿಜೆಪಿ ಮುಖಂಡ ಸುನೀಲ್ ಕುಮಾರ್ ಮಾತನಾಡಿ, ನರೇಗಾ ಯೋಜನೆಯಡಿ ತಾಲೂಕಿನ 34 ಗ್ರಾಪಂನ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯಾಗಿ ಮಾರ್ಪಟ್ಟಿವೆ. ಜಲ ಜೀವನ್ ಮಿಷನ್ ಯೋಜನೆ ಅಡಿ 303 ಹಳ್ಳಿಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ. ಪಿರಿಯಾಪಟ್ಟಣದ ಶಕ್ತಿದೇವತೆ ಮಸಣಿಕಮ್ಮ ದೇವಾಲಯದ ಅಭಿವೃದ್ಧಿಗೆ 50 ಲಕ್ಷ ರೂ. ಕೊಟ್ಟಿದ್ದೇವೆ. ಅಲ್ಲದೆ ದೇವಾಲಯ ನವೀಕರಣಕ್ಕಾಗಿ 9 ಕೋಟಿ ರೂ. ಮಂಜೂರಾಗಿದೆ. ಕಾಂಗ್ರೆಸ್ ಮತ್ತು ಜೆಡಿಎಸ್ ಎಂಬ ಜಪ ಬಿಟ್ಟು, ಈ ಬಾರಿ ಕಮಲ ಅರಳಿಸುವ ಕೆಲಸವನ್ನು ತಾಲೂಕಿನ ಜನತೆ ಮಾಡಬೇಕೆಂದು ಮನವಿ ಮಾಡಿದರು.

ವೈ.ವಿ.ರವಿಶಂಕರ್ ಮಾತನಾಡಿ, ಸಮಾಜದ ಕಟ್ಟ ಕಡೆ ವ್ಯಕ್ತಿಗೂ ಬಿಜೆಪಿ ಸರ್ಕಾರದ ಯೋಜನೆ ತಲುಪಿಸಬೇಕು. ಡಬಲ್ ಇಂಜಿನ್ ಸರ್ಕಾರ ಹೊಂದಿರುವ ನಾವು ಮಾಡಿರುವ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವ ಕೆಲಸ ಮಾಡಬೇಕೆಂದು ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಇದೇ ವೇಳೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಸಮುದಾಯದ ನೂರಾರು ಮಂದಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಗೊಂಡರು. ಶಾಸಕ ಎನ್.ಮಹೇಶ್ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಮಂಜುಳಾ ಸೋಮಶೇಖರ್, ತಾಲೂಕು ಅಧ್ಯಕ್ಷ ಎಂ.ರಾಜೇಗೌಡ, ಎಚ್.ಸಿ ಬಸವರಾಜು, ಯೋಗಾನಂದ, ಆರ್.ಟಿ.ಸತೀಶ್, ಅಣ್ಣಯ್ಯ, ಮೈಲಾರಿ, ವಿಕ್ರಮರಾಜ್, ಮಹದೇವ್, ರಮೇಶ್, ಲೋಕೇಶ್, ರವಿ, ಅರುಣ್ ರಾಜೇ ಅರಸ್, ಸುಂದರ್, ಪ್ರವೀಣ್, ಸುನೀಲ್ ಕುಮಾರ್, ರಾಜು, ಮಧು, ಯೋಗೇಶ್, ಕೆಂಡಗಣ್ಣಶೆಟ್ಟಿ ಇದ್ದರು.

ಮೈಮುಲ್ ಉಪ ಕಚೇರಿ ಕಾಮಗಾರಿಗೆ ಭೂಮಿಪೂಜೆ



ತಿ.ನರಸೀಪುರ, ಮಾ.27– ಪಟ್ಟಣದ ಎಪಿಎಂಸಿ ಆವರಣದಲ್ಲಿ 1.5 ಕೋಟಿ ರೂ. ವೆಚ್ಚದ ಮೈಸೂರು ಹಾಲು ಒಕ್ಕೂಟದ ಉಪಕಚೇರಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು.

ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ನಡೆದ ಉಪಕಚೇರಿ ಅಭಿವೃದ್ಧಿ ಕಾಮಗಾರಿಗೆ ಮೈಮುಲ್ ಮಾಜಿ ಅಧ್ಯಕ್ಷ ಓಂಪ್ರಕಾಶ್, ನಿರ್ದೇಶಕ ಚೆಲುವರಾಜು ಸೇರಿದಂತೆ ಮತ್ತಿತರರು ಭೂಮಿಪೂಜೆ ನೆರವೇರಿಸಿದರು.

ಮೈಮುಲ್ ನಿರ್ದೇಶಕ ಚೆಲುವರಾಜು ಮಾತನಾಡಿ, ಉಪಕಚೇರಿ ನಿರ್ಮಾಣದಿಂದ ಸಂಘದ ಕಾರ್ಯಕ್ರಮ ಮಾಡಲು ಅನುಕೂಲವಾಗಲಿದೆ. ಇಲ್ಲಿವರೆಗೆ ಬಾಡಿಗೆ ಕಟ್ಟಡದಲ್ಲಿ ಉಪಕಚೇರಿ ಕಾರ್ಯ ನಿರ್ವಹಿಸುತ್ತಿದ್ದು, ಅಲ್ಲಿ ಸ್ಥಳಾವಕಾಶದ ಕೊರತೆ ಎದುರಾಗಿತ್ತು. ಈಗ ಸ್ವಂತ ಕಟ್ಟಡ ನಿರ್ಮಾಣವಾಗುವುದರಿಂದ ಉತ್ತಮ ವಾತಾವರಣದಲ್ಲಿ ಕೆಲಸ ಮಾಡಬಹುದಾಗಿದೆ. ಉಪಕಚೇರಿ ನಿರ್ಮಾಣಕ್ಕೆ ಸ್ಥಳಾವಕಾಶ ಕಲ್ಪಿಸಿಕೊಟ್ಟ ಎಪಿಎಂಸಿ ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಮೈಮುಲ್ ಮಾಜಿ ಅಧ್ಯಕ್ಷ ಓಂಪ್ರಕಾಶ್ ಮಾತನಾಡಿ, ನೂತನ ಕಟ್ಟಡದಲ್ಲಿ ಕಚೇರಿ, ಸಭಾಂಗಣ, ವೈದ್ಯರ ವಸತಿಗೃಹ, ಬಿಎಂಸಿಗಳು, ಪಶು ಔಷಧಗಳು ದೊರೆಯಲಿದೆ. ರೈತರಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಹಾಗೂ ಸಂಘದ ಬೆಳವಣಿಗೆಗೆ ನೂತನ ಕಟ್ಟಡ ಸಹಕಾರಿಯಾಗಲಿದೆ. ರೈತರು ಮೊದಲು ಯಾವುದೇ ಕೆಲಸಕ್ಕೂ ಮೈಸೂರು ಕಚೇರಿ ಅವಲಂಬಿಸಬೇಕಿತ್ತು. ಈಗ ಇಲ್ಲೇ ಎಲ್ಲಾ ಸೌಲಭ್ಯಗಳನ್ನು ದೊರಕಿಸಿಕೊಡಲಾಗುತ್ತದೆ ಎಂದರು.

ಈ ವೇಳೆ ಮೈಮುಲ್ ಮಾಜಿ ಅಧ್ಯಕ್ಷ ಉಮಾಶಂಕರ್, ಸೋಮಶೇಖರ್, ಕೆ.ಜಿ.ಮಹೇಶ್, ನಿರ್ದೇಶಕರಾದ ಎಸ್.ಸಿ.ಅಶೋಕ್, ಲೀಲಾ, ದಾಕ್ಷಾಯಿಣಿ, ವ್ಯವಸ್ಥಾಪಕ ನಿರ್ದೇಶಕ ಬಿ.ಎನ್.ವಿಜಯಕುಮಾರ್, ವ್ಯವಸ್ಥಾಪಕ ಡಾ.ದಿವಾಕರ್, ಮಾರ್ಗ ವಿಸ್ತರಣಾಧಿಕಾರಿ ಪ್ರಮೋದ್, ಡಾ.ಸಣ್ಣತಮ್ಮೇಗೌಡ, ಕೇತುಪುರ ಕುಳ್ಳೇಗೌಡ, ಬೆನಕನಹಳ್ಳಿ ಮಾದಪ್ಪ ಸೇರಿದಂತೆ ಮತ್ತಿತರರಿದ್ದರು.

ಸರ್ಕಾರ ಎಡಗೈ ಸಮಾಜಕ್ಕೆ ನೀಡಿರುವ ಮೀಸಲಾತಿ ಬಗ್ಗೆ

ಪ್ರಾದೇಶಿಕ, ರಾಷ್ಟ್ರೀಯ ಪಕ್ಷಗಳ ಹೇಳಿಕೆಯಿಂದ ಸಮುದಾಯಕ್ಕೆ ಆತಂಕ

ತಾಲೂಕು ಬಾಬು ಜಗಜೀವನರಾಂ ಸಂಘದ ಮಾಜಿ ಅಧ್ಯಕ್ಷ ಶಂಕರ್

ತಿ.ನರಸೀಪುರ, ಮಾ.27– ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿಯನ್ವಯ ಸರ್ಕಾರ ಎಡಗೈ ಸಮಾಜಕ್ಕೆ ನೀಡಿರುವ ಮೀಸಲಾತಿ ಬಗ್ಗೆ ಪ್ರಾದೇಶಿಕ ಹಾಗೂ ರಾಷ್ಟ್ರೀಯ ಪಕ್ಷಗಳ ಹೇಳಿಕೆಯಿಂದ ಸಮುದಾಯಕ್ಕೆ ಆತಂಕವಾಗಿದೆ ಎಂದು ತಾಲೂಕು ಬಾಬು ಜಗಜೀವನರಾಂ ಸಂಘದ ಮಾಜಿ ಅಧ್ಯಕ್ಷ ಮಲಿಯೂರು ಶಂಕರ್ ತಿಳಿಸಿದರು.

ಪಟ್ಟಣದಲ್ಲಿ ನಡೆದ ಮಾದಿಗ ಸಮುದಾಯದ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಬಿಜೆಪಿ ಸರ್ಕಾರ ಪ್ರತ್ಯೇಕ ಮೀಸಲಾತಿ ನೀಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತಿದ್ದಂತೆ ಸಮಾಜದವರು ಮೀಸಲಾತಿ ಸಿಕ್ಕೇ ಬಿಟ್ಟಿತೆಂದು ಸಂಭ್ರಮಿಸುತ್ತಿದ್ದಾರೆ. ಆದರೆ ಪ್ರಾದೇಶಿಕ ಹಾಗೂ ರಾಷ್ಟ್ರೀಯ ರಾಜಕೀಯ ಪಕ್ಷಗಳು ಒಳ ಮೀಸಲಾತಿ ಘೋಷಣೆ ಕೇವಲ ಚುನಾವಣೆ ಗಿಮಿಕ್ ಎಂದು ಹೇಳಿಕೆ ನೀಡುತ್ತಿರುವುದರಿಂದ ನಮಗೆ ಆತಂಕ ಉಂಟಾಗಿದೆ. ಹಾಗಾಗಿ ಪ್ರಧಾನಿ ಮೋದಿಯವರು ತಮ್ಮ ಉಳಿದ ಅಧಿಕಾರಾವಧಿಯಲ್ಲಿ ರಾಜ್ಯದಿಂದ ಶಿಫಾರಸ್ಸು ಮಾಡಿ ಕಳುಹಿಸಿರುವ ವರದಿಯನ್ನು ಕೇಂದ್ರದಲ್ಲಿ ಅನುಮೋದಿಸಿ ರಾಜಕೀಯ ನಾಯಕರ ಬಾಯಿ ಮುಚ್ಚಿಸುವ ಮೂಲಕ ಸಮುದಾಯಕ್ಕೆ ನ್ಯಾಯ ದೊರಕಿಸಿಕೊಡಬೇಕೆಂದು ಒತ್ತಾಯಿಸಿದರು.

ದಿ.ಎನ್.ರಾಚಯ್ಯ ಜಯಂತಿ ಆಚರಿಸಿ: ರಾಜ್ಯದ ಧೀಮಂತ ರಾಜಕಾರಣಿ ಎನ್.ರಾಚಯ್ಯನವರು 1957ರಲ್ಲಿ ಸಂಸದರಾಗಿದ್ದು, ರಾಜ್ಯ ಸಚಿವರಾಗಿ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಿದ್ದರು. ರಾಜ್ಯದಲ್ಲಿ 225 ತಾಲೂಕುಗಳಲ್ಲಿ ಶಿಶು ಅಭಿವೃದ್ಧಿ ಯೋಜನೆ ಮೂಲಕ 62,580 ಅಂಗನವಾಡಿ ಕೇಂದ್ರಗಳು ಹಾಗೂ 3,331 ಮಿನಿ ಅಂಗನವಾಡಿ ಕೇಂದ್ರ ತೆರೆದು ಮಹಿಳೆಯರಿಗೆ ಸರ್ಕಾರಿ ಉದ್ಯೋಗ ದೊರಕುವಂತೆ ಮಾಡಿದ್ದರು. ಎನ್.ರಾಚಯ್ಯ ಮಾಡಿದ್ದ ಬಹುದೊಡ್ಡ ಸಾಧನೆ ಇದಾಗಿದ್ದು, ಮೇ 8ರಂದು ಎನ್. ರಾಚಯ್ಯನವರ ಹುಟ್ಟುಹಬ್ಬ. ಎಲ್ಲ ಅಂಗನವಾಡಿ ಕೇಂದ್ರಗಳಲ್ಲಿ ಅವರ ಜಯಂತಿ ಆಚರಿಸಲು ಸರ್ಕಾರ ಆದೇಶಿಸಬೇಕು ಎಂದು ಮನವಿ ಮಾಡಿದರು.



ಪುರಸಭಾ ಸದಸ್ಯ ಎಲ್.ಮಂಜುನಾಥ್ ಮಾತನಾಡಿ, ಎಡಗೈ ಜನಾಂಗಕ್ಕೆ ಶೇ.6ರಷ್ಟು ಒಳ ಮೀಸಲಾತಿ ನೀಡುವ ಮೂಲಕ ಬಿಜೆಪಿ ಸರ್ಕಾರ ಸಮುದಾಯದ ಹಿತ ಕಾಪಾಡಲು ಮುಂದಾಗಿದೆ. ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ವೇಳೆ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗ ರಚನೆ ಮಾಡಿ ವರದಿ ನೀಡುವಂತೆ ತಿಳಿಸಲಾಗಿತ್ತು. 2011ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುತ್ತದೆ. ಹಾಗಾಗಿ 38 ವರ್ಷಗಳ ಕಾಲ ಸಮುದಾಯದವರು ನಿರಂತರ ಹೋರಾಟದ ಮೂಲಕ ವರದಿ ಜಾರಿಗೆ ಹೋರಾಟ ನಡೆಸಿ ಪ್ರಾಣತ್ಯಾಗ ಮಾಡಿದ್ದರ ಫಲವಾಗಿ ರಾಜ್ಯ ಬಿಜೆಪಿ ಸರ್ಕಾರ ದಿಟ್ಟತನದಿಂದ ಒಳ ಮೀಸಲಾತಿ ಜಾರಿ ಮಾಡಿ ಕೇಂದ್ರಕ್ಕೆ ವರದಿ ಶಿಫಾರಸ್ಸು ಮಾಡಿದೆ. ಕೇಂದ್ರ ಸರ್ಕಾರ ವರದಿಗೆ ಅನುಮೋದನೆ ನೀಡುವ ಮೂಲಕ ವಿರೋಧ ಪಕ್ಷಗಳ ಹೇಳಿಕೆಯಿಂದ ಗೊಂದಲಕ್ಕೀಡಾಗಿರುವ ಸಮುದಾಯಕ್ಕೆ ನ್ಯಾಯ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ವರುಣಾ ಮತ್ತು ತಿ.ನರಸೀಪುರ ಕ್ಷೇತ್ರದ ಮಾದಿಗ ಸಂಘಟನೆಗಳ ಒಕ್ಕೂಟದ ನಿರ್ದೇಶಕ ಹೊಸಹಳ್ಳಿ ಮಾದೇಶ, ಕೇತಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ರೇವಣ್ಣ, ಸದಸ್ಯರಾದ ಸಿ.ಲಿಂಗರಾಜು, ಶಿವರಾಜು, ಚೇತನ್ ಕುಮಾರ್, ರಾಚಪ್ಪ, ಶಿವು, ಸಮುದಾಯದ ಮುಖಂಡರಾದ ಎಂ.ಮಹದೇವಸ್ವಾಮಿ, ಬಾಲು, ರಾಚಪ್ಪ, ಸಿದ್ದರಾಜು, ಲಿಂಗರಾಜು, ಮಹದೇವಣ್ಣ, ದಿಲೀಪ್, ಸಿದ್ದರಾಜು, ಮಹದೇವು, ಗೋಪಿ, ಬಸವರಾಜು, ವೇಣು, ಮಹೇಶ್, ಡಿ.ಶಿವಪ್ಪ, ರಾಜೇಶ್, ಕರಿಯಪ್ಪ, ಶಿವಾಜಿ ಸೇರಿದಂತೆ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಬ್ಜ (ಕ): ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.10.25ಕ್ಕೆ, ಮ.1.30ಕ್ಕೆ, ದಾಸ್ ಕಾ ಧಮ್ಕಿ (ತೆ): ಸಂ.4.30ಕ್ಕೆ, ರಾ.7.25ಕ್ಕೆ, ಶಾಜಮ್ ದಿ ಫ್ಯೂರಿ ಆಫ್ ದಿ ಗಾಡ್ಸ್ (ಇಂ): ರಾ.10.20ಕ್ಕೆ.
ಸ್ಕ್ರೀನ್ 3	ಶಾಜಮ್ ದಿ ಫ್ಯೂರಿ ಆಫ್ ದಿ ಗಾಡ್ಸ್ (ಇಂ): ಬೆ.11.10ಕ್ಕೆ, ಮ.1.50ಕ್ಕೆ, ಮಿಸ್ ಚಟರ್ಜಿ Vs ನಾರ್ವೆ (ಹಿಂ): ಸಂ.4.30ಕ್ಕೆ, ರಾ.7.10ಕ್ಕೆ, ರಾ.9.50ಕ್ಕೆ
ಸ್ಕ್ರೀನ್ 4	ಕಬ್ಜ (ಕ): ಬೆ.10.35ಕ್ಕೆ, ಮ.1.20ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಕಬ್ಜ (ಕ): ಬೆ.9.10ಕ್ಕೆ, ಮ.12ಕ್ಕೆ, ಮ.2.50ಕ್ಕೆ, ಸಂ.5.40ಕ್ಕೆ, ರಾ.8.30ಕ್ಕೆ.
ಸ್ಕ್ರೀನ್ 2	ಕಬ್ಜ (ಕ): ಬೆ.10.10ಕ್ಕೆ, ಮ.1ಕ್ಕೆ, ಮ.3.50ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಬ್ಜ (ಕ): ಬೆ.7.50ಕ್ಕೆ, ಬೆ.10.40ಕ್ಕೆ, ಮ.1.30ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಶಾಜಮ್ ದಿ ಫ್ಯೂರಿ ಆಫ್ ದಿ ಗಾಡ್ಸ್ (ಇಂ): ಬೆ.10.10ಕ್ಕೆ, ಮ.12.55ಕ್ಕೆ, ಸಂ.6.25ಕ್ಕೆ, ರಾ.9.10ಕ್ಕೆ, ಫಲನ ಅಬ್ಬೈ ಫಲನ ಅಮ್ಮೈ (ತೆ): ಸಂ.5.05ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕಿಲ್ಲರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಧಮಾಕಿ (ತೆ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತು ತೋತಿ ಮೆ ಮಕ್ಕರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಬ್ಜ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಬ್ಜ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಸೇಥನ್ ಕದವುಲದ(ತ)	4 ಪ್ರದರ್ಶನಗಳು
ಸಂಗಂ	
ಪಾಲಾರ್ (ಕ)	4 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಬ್ಜ (ಕ)	4 ಪ್ರದರ್ಶನಗಳು
ಪ್ರಭಾ	
ವೇದ (ಕ)	4 ಪ್ರದರ್ಶನಗಳು

ಕಾಂಗ್ರೆಸ್‌ನಿಂದ ಮಾತ್ರ ಸಂವಿಧಾನ ರಕ್ಷಣೆ



ಪಿರಿಯಾಪಟ್ಟಣ, ಮಾ.27– ದೇಶದ ಐಕ್ಯತೆ, ಸಮಗ್ರತೆ ಹಾಗೂ ಸಂವಿಧಾನ ರಕ್ಷಣೆ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಸಚಿವ ಈಶ್ವರ ಖಂಡ್ರೆ ಅಭಿಪ್ರಾಯಪಟ್ಟರು.

ಪಟ್ಟಣದಲ್ಲಿ ನಡೆದ ಕಾಂಗ್ರೆಸ್ ಬೆಂಬಲಿತ ವೀರಶೈವ ಲಿಂಗಾಯತ ಸಮುದಾಯದ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ಕಾಂಗ್ರೆಸ್ ಹೋರಾಟ ಸ್ಮರಣೀಯ ಎಂದರು.

ರಾಜ್ಯ ಹಾಗೂ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಪೆಟ್ರೋಲ್, ಡೀಸೆಲ್, ಅಡುಗೆ ಎಣ್ಣೆ ಸೇರಿದಂತೆ ದಿನಬಳಕೆಯ ಅಗತ್ಯ ವಸ್ತುಗಳ ಬೆಲೆ ಏರಿಸುವ ಮೂಲಕ ಜನ ಸಾಮಾನ್ಯರ ಜೇಬಿಗೆ ಕತ್ತರಿ ಹಾಕಿದೆ. ರಾಜ್ಯ ಸರ್ಕಾರ 40% ಕಮಿಷನ್ ಪಡೆಯುವ ಮೂಲಕ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಬಿಜೆಪಿಯವರು ಆಪರೇಷನ್ ಕಮಲದ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದರು ಎಂದು ಆರೋಪಿಸಿದರು.

ವೀರಶೈವ ಸಮಾಜ ನಿಜಲಿಂಗಪ್ಪ, ಬಿ.ಡಿ.ಜತ್ತಿ, ವೀರೇಂದ್ರ ಪಾಟೀಲ್ ಸೇರಿದಂತೆ ಅನೇಕ ದಿಗ್ಗಜರನ್ನು ಕಾಂಗ್ರೆಸ್ ಪಕ್ಷಕ್ಕೆ ನೀಡಿದೆ. ಸಮಾಜವನ್ನು ರಾಜಕೀಯವಾಗಿ ಬಳಸಿಕೊಂಡಿರುವ ಬಿಜೆಪಿ ಸರ್ಕಾರ ಯಾವುದೇ ಕೊಡುಗೆ ನೀಡಿಲ್ಲ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು, ಅದರಂತೆ ಕ್ಷೇತ್ರದಲ್ಲೂ ಪಕ್ಷದ ಅಭ್ಯರ್ಥಿ ಕೆ.ವೆಂಕಟೇಶ್ ಗೆಲುವಿಗೆ ಶ್ರಮಿಸುವಂತೆ ಕರೆ ನೀಡಿದರು.

ಮಾಜಿ ಶಾಸಕ ಕೆ.ವೆಂಕಟೇಶ್ ಮಾತನಾಡಿ, ಕಳೆದ ಚುನಾವಣೆಯಲ್ಲಿ ವೀರಶೈವ ಸಮುದಾಯ ನನ್ನ ಕೈ ಹಿಡಿಯಲಿಲ್ಲ. ನನಗೆ ನನ್ನ ತಪ್ಪಿನ ಅರಿವಾಗಿದೆ ಎಂದ ಅವರು, ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕೆಂದು ಮನವಿ ಮಾಡಿದರು.

ರಾಜ್ಯ ವೀರಶೈವ ಮಹಾಸಭಾ ಖಜಾಂಚಿ ಮಹೇಶ್ ಮಾತನಾಡಿದರು. ಸಮಾರಂಭದಲ್ಲಿ ಮುಖಂಡರಾದ ಗಣೇಶ್ ಹುಕ್ಕೇರಿ, ನಿತಿನ್ ವೆಂಕಟೇಶ್, ಬಿ.ವಿ.ಜವರೇಗೌಡ, ಬಿ.ಎಸ್.ರಾಮಚಂದ್ರ, ವಲದಪ್ಪ, ಗಣೇಶ್ ಪ್ರಸಾದ್, ಸೋಮಶೇಖರ್, ಗುರುಪಾದಸ್ವಾಮಿ, ನಂಜುಂಡಸ್ವಾಮಿ ಸೇರಿದಂತೆ ನೂರಾರು ವೀರಶೈವ ಸಮಾಜದ ಮುಖಂಡರಿದ್ದರು.

ಗಳಿಗೆಕೆರೆ ಡೈರಿಗೆ ತೋಟಪ್ಪನಾಯಕ ಅಧ್ಯಕ್ಷ

ಭೇರ್ಯ, ಮಾ.27– ಕೆ.ಆರ್.ನಗರ ತಾಲೂಕಿನ ಗಳಿಗೆಕೆರೆ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಟಿಎಪಿಸಿಎಂಎಸ್ ನಿರ್ದೇಶಕ ಜಿ.ಕೆ.ತೋಟಪ್ಪನಾಯಕ, ಉಪಾಧ್ಯಕ್ಷೆಯಾಗಿ ಸಿ.ಜಿ.ಆಶಾ ಅವಿರೋಧವಾಗಿ ಆಯ್ಕೆಯಾದರು.



ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜಿ.ಕೆ.ತೋಟಪ್ಪನಾಯಕ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸಿ.ಜಿ.ಆಶಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸಹಕಾರ ಇಲಾಖೆ ಶಿವಕುಮಾರ್ ಅವಿರೋಧ ಆಯ್ಕೆ ಘೋಷಿಸಿದರು. ಈ ವೇಳೆ ನಿರ್ದೇಶಕರಾದ ಜಿ.ಬಿ.ರಾಜಣ್ಣ, ಶಿವಕುಮಾರ್, ಬಸವರಾಜ್, ರಾಜನಾಯಕ, ನಾಗಮ್ಮ, ಮಣಿಯಮ್ಮ, ಕುಬೇರ, ರವೀಶ್, ಜಂಬ್ಲು ಇದ್ದರು.

ನಾಗರತ್ನಮ್ಮ ನಿಧನ



ಪಿರಿಯಾಪಟ್ಟಣ, ಮಾ.27– ತಾಲೂಕಿನ ಆವರ್ತಿ ಗ್ರಾಮದ ಜ್ಯೋತಿಷಿ ನಾಗಭೂಷಣಾರಾಧ್ಯ ಅವರ ಪತ್ನಿ ನಾಗರತ್ನಮ್ಮ(75) ಸೋಮವಾರ ಮುಂಜಾನೆ ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗ್ರಾಮೀಣ ಜನರ ಆರೋಗ್ಯಕ್ಕೆ ಪೂರಕವಾಗಿ ಪ್ರತಿ ಜಿಲ್ಲೆಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ ● ನಂದಿಬೆಟ್ಟಕ್ಕೆ ರೋಪ್ ವೇ ನಿರ್ಮಾಣ

ಬೆಂಗಳೂರು, ಮಾ. 27 (ಕೆಎಂಶಿ)–ಪ್ರತಿ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಿಸುವ ಮೂಲಕ ಗ್ರಾಮೀಣ ಭಾಗದಲ್ಲಿ ಆಸ್ಪತ್ರೆಗಳ ಅಭಿವೃದ್ಧಿಗೆ ಸರ್ಕಾರ ನಾಂದಿ ಹಾಡಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಇದೇ ಉದ್ದೇಶದಿಂದ ನಮ್ಮ ಪ್ರಧಾನಿಗಳು ನಿಯಮ ಸರಳೀಕರಣಗೊಳಿಸಿ ಪ್ರತಿ ಜಿಲ್ಲೆ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ವೈದ್ಯಕೀಯ ಕಾಲೇಜು ಆರಂಭಿಸಲು ಕಾರಣೀಭೂತರಾಗಿದ್ದಾರೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿಕ್ಕಬಳ್ಳಾಪುರ, ಹಾವೇರಿ, ಯಾದಗಿರಿ, ಚಿಕ್ಕಮಗಳೂರಿನಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸಲಾಗಿದೆ. ರಾಮನಗರದಲ್ಲಿಯೂ ವೈದ್ಯಕೀಯ ಕಾಲೇಜು ಆರಂಭಿಸಲಾಗುವುದು ಎಂದರು.




ನಂದಿಬೆಟ್ಟಕ್ಕೆ ರೋಪ್ ವೇ ಆಗಬೇಕೆಂದು ದಿವಂಗತ ನಟ ಶಂಕರನಾಗ್ ಕಂಡ ಕನಸು ಈಗ ನನಸಾಗುತ್ತಿದೆ. ರೋಪ್ ವೇ ಮಾಡಿದರೆ ಪ್ರವಾಸೋದ್ಯಮಕ್ಕೆ ಸಾಕಷ್ಟು ಅನುಕೂಲವಾಗುತ್ತದೆ. ಈ ಭಾಗದಲ್ಲಿ ಸಾಕಷ್ಟು ಪ್ರವಾಸಿ ತಾಣಗಳಿವೆ. ನಂದಿ ಬೆಟ್ಟದ ಪಕ್ಕದ ದೇವಸ್ಥಾನ ಅಭಿವೃದ್ಧಿಯಾಗಲಿದೆ. ಆದ್ದರಿಂದ ಇದೊಂದು ಪ್ರವಾಸಿ ಸರ್ಕಿಟ್ ಆಗಲು ಅನುಕೂಲವಾಗಲಿದೆ ಎಂದರು.

ಪ್ರಣಾಳಿಕೆ ಬಗ್ಗೆ ಚರ್ಚೆ: ನಮ್ಮ ಯೋಜನೆಗಳ ಬಗ್ಗೆ ಜನರಿಗೆ ವಿಶ್ವಾಸ ಮೂಡಿದೆ. ಇದರಿಂದ ನಮ್ಮ ಆತ್ಮವಿಶ್ವಾಸ ಹೆಚ್ಚಾಗಿದೆ. ಅಮಿತ್ ಶಾ ಅವರ ಸಭೆಯಲ್ಲಿ ಪ್ರಣಾಳಿಕೆಯ ಬಗ್ಗೆ ಚರ್ಚೆ ಮಾಡಿದ್ದೇವೆ. ಆರೋಗ್ಯ ಸಚಿವ ಸುಧಾಕರ್ ಅವರು ಪ್ರಣಾಳಿಕೆ ಸಮಿತಿ ಅಧ್ಯಕ್ಷರಾಗಿದ್ದಾರೆ. ಈ ಬಾರಿ ನಮ್ಮದು ಜನತಾ ಪ್ರಣಾಳಿಕೆಯಾಗಲಿದೆ ಎಂದರು.

ಮೀಸಲಾತಿ ಹೆಚ್ಚಳ ಮಾಡಿರುವುದು ಕಾಂಗ್ರೆಸ್‌ನವರಿಗೆ ಸಹಿಸಲಿಕ್ಕೆ ಆಗುತ್ತಿಲ್ಲ. ಹೀಗಾಗಿ ಅವರು ವಿರೋಧ ಮಾಡುತ್ತಿದ್ದಾರೆ. ನಾವು ಯಾವ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಮಾಡಿದ್ದೇವೆಯೋ ಅದನ್ನು ವಿರೋಧಿಸುತ್ತೇವೆ ಎಂದು ಹೇಳಲಿ. ಮುಸ್ಲಿಮರಿಗೆ ಯಾವುದೇ ರೀತಿಯ ಅನ್ಯಾಯವಾಗಿಲ್ಲ. ಅವರನ್ನು ಇಡಬ್ಲ್ಯೂಎಸ್ ವರ್ಗದಲ್ಲಿ ಸೇರಿಸಿದ್ದೇವೆ. ಅಲ್ಲಿ ಶೇ.10 ಮೀಸಲಾತಿ ಇದೆ. ನಮ್ಮ ಸಂವಿಧಾನದಲ್ಲಿ ಧಾರ್ಮಿಕ ಆಧಾರದಲ್ಲಿ ಮೀಸಲಾತಿ ಇಲ್ಲ. ಮುಸ್ಲಿಮರಿಗೆ ಯಾವುದೇ ರೀತಿಯ ಅನ್ಯಾಯ ಮಾಡಿಲ್ಲ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಸ್ಪಷ್ಟಪಡಿಸಿದರು.







ಹಿಂದುಳಿದ ವರ್ಗಗಳ ಪತ್ರಕರ್ತರಿಗೆ ಮಾಧ್ಯಮ ಕಿಟ್ ವಿತರಣೆ

ಜನೋಪಯೋಗಿ ಮಾಹಿತಿ ನೀಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರೆ




ಬೆಂಗಳೂರು, ಮಾ.27– ಸಮಾಜ ಸುಧಾರಣೆಯಲ್ಲಿ ಮುದ್ರಣ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳ ಪಾತ್ರ ಅತ್ಯಂತ ಪ್ರಮುಖವಾಗಿದೆ. ಪತ್ರಕರ್ತರ ವೃತ್ತಿಗೆ ಅನುಕೂಲವಾಗುವಂತಹ ಲ್ಯಾಪ್‌ಟಾಪ್, ಕ್ಯಾಮೆರಾ ಮತ್ತಿತರ ಅಗತ್ಯ ಸಲಕರಣೆಗಳನ್ನು ಸರಕಾರದ ವತಿಯಿಂದ ನೀಡಲಾಗಿದ್ದು, ಇವುಗಳನ್ನು ಬಳಸಿಕೊಂಡು ಇನ್ನಷ್ಟು ಕ್ರಿಯಾಶೀಲರಾಗಿ ಕೆಲಸ ಮಾಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರೆ ನೀಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ನಗರದ ಕಂಠೀರವ ಸ್ಟುಡಿಯೋ ಆವರಣದಲ್ಲಿ ಸೋಮವಾರ (ಮಾ.27) ನಡೆದ ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ಮಾನ್ಯತೆ ಪಡೆದ ಪತ್ರಕರ್ತರಿಗೆ ಮಾಧ್ಯಮ ಕಿಟ್ ವಿತರಿಸಿ ಅವರು ಮಾತನಾಡಿದರು. ಪತ್ರಕರ್ತರು ಮಾಹಿತಿ ಸಂಗ್ರಹದ ಜತೆಗೆ ವಿಚಾರಸಂಗ್ರಹವನ್ನೂ ಹೆಚ್ಚಿಸಿ ಕೊಂಡು ಜನೋಪಯೋಗಿ ಮಾಹಿತಿಯನ್ನು ನೀಡಬೇಕು. ಇದನ್ನು ಬಳಸಿಕೊಂಡು ಇನ್ನಷ್ಟು ಪರಿಣಾಮಕಾರಿಯಾಗಿ ಸಮಾಜ ಹಾಗೂ ವ್ಯವಸ್ಥೆಯ ಅಂಕುಡೊಂಕು ತಿದ್ದುವ ಕೆಲಸವನ್ನು ಮಾಡಬೇಕು ಎಂದು ಕಿವಿಮಾತು ಹೇಳಿದರು.

ಹಿಂದುಳಿದ ವರ್ಗಗಳ ಪತ್ರಕರ್ತರ ವೃತ್ತಿಗೆ ಸಹಕಾರಿಯಾಗುವಂತಹ ಕ್ಯಾಮೆರಾ, ಲ್ಯಾಪ್ ಟಾಪ್ ಮತ್ತಿತರ ಗುಣಮಟ್ಟದ ಸಲಕರಣೆಗಳನ್ನು ಸರಕಾರದ ವತಿಯಿಂದ ನೀಡಲಾಗುತ್ತಿದೆ. ರಾಜ್ಯ ಎಲ್ಲ ಜಿಲ್ಲೆಗಳ ಒಟ್ಟು 605 ಜನರಿಗೆ ಅಗತ್ಯ ಸಲಕರಣೆಯನ್ನು ನೀಡಲಾಗುತ್ತಿದೆ. ಹಿಂದೆ ಯಾವುದೇ ಸರಕಾರ ಈ ರೀತಿಯ ಮಾಧ್ಯಮ ಕಿಟ್ ನೀಡಿರಲಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಹೇಳಿದರು.

ಕೇಂದ್ರ ಸರಕಾರದ ಮಾಜಿ ಸಚಿವರಾದ ಡಿ.ವಿ.ಸದಾನಂದಗೌಡ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್, ಇಲಾಖೆ ಆಯುಕ್ತ ಡಾ.ಪಿ.ಎಸ್. ಹರ್ಷ, ಜಂಟಿ ನಿರ್ದೇಶಕರಾದ ಡಿ..ಪಿ.ಮುರಳೀಧರ್ ಸೇರಿದಂತೆ ಇಲಾಖೆಯ ಅಧಿಕಾರಿಗಳು, ಹಿರಿಯ ಪತ್ರಕರ್ತರು ಉಪಸ್ಥಿತರಿದ್ದರು.

ಆಯ ವ್ಯಯದಲ್ಲಿ ಘೋಷಿಸಿದಂತೆ ಹಿಂದುಳಿದ ವರ್ಗಗಳ ಪತ್ರಕರ್ತರಿಗೆ ಮುಖ್ಯಮಂತ್ರಿಗಳು ಸಾಂಕೇತಿಕವಾಗಿ ಮಾಧ್ಯಮ ಕಿಟ್ ವಿತರಿಸಿದರು.



ದೆಹಲಿ ಬಿಜೆಪಿ ಪದಾಧಿಕಾರಿಯಾಗಿ ಸುಷ್ಮಾ ಸ್ವರಾಜ್ ಪುತ್ರಿ ಬಾನ್ಸುರಿ ಸ್ವರಾಜ್

ನವದೆಹಲಿ: ದಿವಂಗತ ಮಾಜಿ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಅವರ ಪುತ್ರಿ ಬಾನ್ಸುರಿ ಸ್ವರಾಜ್ ಅವರು ಭಾರತೀಯ ಜನತಾ ಪಕ್ಷದ ದೆಹಲಿ ಕಾನೂನು ಘಟಕದ ಸಹ ಸಂಚಾಲಕರಾಗಿ ನೇಮಕಗೊಳ್ಳುವ ಮೂಲಕ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಬಾನ್ಸುರಿ ಅವರನ್ನು ಅಭಿನಂದಿಸಿದ ಪಕ್ಷದ ಅಧ್ಯಕ್ಷ ವೀರೇಂದ್ರ ಸಚ್‌ದೇವ, ಅವರ ನೇಮಕವು ಈಗಿನಿಂದಲೇ ಜಾರಿಗೆ ಬರಲಿದೆ ಎಂದಿದ್ದಾರೆ.




ತಮ್ಮನ್ನು ಪಕ್ಷದಲ್ಲಿ ಗುರುತಿಸಿ ಹುದ್ದೆ ನೀಡಿದ್ದಕ್ಕಾಗಿ ಟ್ವೀಟ್‌ನಲ್ಲಿ, ಬಾನ್ಸುರಿ ಅವರು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಪಕ್ಷದ ಹಿರಿಯ ನಾಯಕತ್ವಕ್ಕೆ ಧನ್ಯವಾದ ಅರ್ಪಿಸಿದ್ದಾರೆ. ನಾನು ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ಜೆಪಿ ನಡ್ಡಾ, ಬಿಎಲ್ ಸಂತೋಷ್, ವೀರೇಂದ್ರ ಸಚ್‌ದೇವ ಹಾಗೂ ಬಿಜೆಪಿಗೆ ಕೃತಜ್ಞನಾಗಿದ್ದೇನೆ. ಭಾರತೀಯ ಜನತಾ ಪಕ್ಷದ ದೆಹಲಿ ರಾಜ್ಯ ಕಾನೂನು ಕೋಶದ ರಾಜ್ಯ ಸಹ ಸಂಚಾಲಕನಾಗಿ ಪಕ್ಷಕ್ಕೆ ಸೇವೆ ಸಲ್ಲಿಸಲು ನನಗೆ ಈ ಅವಕಾಶವನ್ನು ನೀಡಿದ್ದಕ್ಕಾಗಿ ಆಭಾರಿಯಾಗಿದ್ದೇನೆ ಎಂದಿದ್ದಾರೆ.



ಮಧ್ಯಪ್ರದೇಶದ ಕುನೋ ಪಾರ್ಕ್‌ನಲ್ಲಿ ನಮೀಬಿಯಾದ ಚೀತಾ 'ಸಾಷಾ' ನಿಧನ

ಭೋಪಾಲ್: ಮಧ್ಯಪ್ರದೇಶದ ಕುನೋ ಪಾರ್ಕ್‌ನಲ್ಲಿದ್ದ ನಮೀಬಿಯಾದಿಂದ ತರಲಾಗಿದ್ದ 'ಸಾಷಾ' ಎಂಬ ಹೆಣ್ಣು ಚೀತಾ ಸಾವನ್ನಪ್ಪಿದೆ. ನಮೀಬಿಯಾದಿಂದ ಭಾರತಕ್ಕೆ ಸ್ಥಳಾಂತರಿಸಲಾದ ಎಂಟು ಚೀತಾಗಳ ಪೈಕಿ ಒಂದು ಚೀತಾ ಸೋಮ



ವಾರ ಸಾವನ್ನಪ್ಪಿದ್ದು, 'ಸಾಷಾ' ಎಂಬ ಹೆಣ್ಣು ಚೀತಾ ಕಿಡ್ನಿ ಕಾಯಿಲೆಯಿಂದ ಸಾವನ್ನಪ್ಪಿದೆ ಎಂದು ತಿಳಿದುಬಂದಿದೆ.

ಕಳೆದ ಕೆಲ ತಿಂಗಳಿಂದ 'ಸಾಷಾ' ಹೆಣ್ಣು ಚೀತಾ ಕಿಡ್ನಿ ಕಾಯಿಲೆಯಿಂದ ಬಳಲುತ್ತಿತ್ತು. ಜನವರಿಯಿಂದಲೇ ಸಾಷಾ ಚೀತಾದಲ್ಲಿ ಮೂತ್ರಪಿಂಡದ ಸೋಂಕು ಕಂಡುಬಂದಿತ್ತು. ದಿನನಿತ್ಯದ ವೈದ್ಯಕೀಯ ಪರೀಕ್ಷೆ ಸಮಯದಲ್ಲಿ ಸಾಷಾ ಆಯಾಸ ಮತ್ತು ದೌರ್ಬಲ್ಯದ ಲಕ್ಷಣಗಳನ್ನು ತೋರಿಸಿತ್ತು. ವೈದ್ಯಕೀಯ ಪರೀಕ್ಷೆಯಲ್ಲಿ ಚೀತಾ ನಿರ್ಜಲೀಕರಣಗೊಂಡಿದ್ದು, ಕಿಡ್ನಿ ಸಂಬಂಧಿ ಸಮಸ್ಯೆ ಇರುವುದು ಪತ್ತೆಯಾಗಿತ್ತು. ಅಂದಿನಿಂದ ಚೀತಾಗೆ ತಜ್ಞರು ಚಿಕಿತ್ಸೆ ನೀಡುತ್ತಿದ್ದರು. ಆದರೆ ಇಂದು ಸಾಷಾ ಚೀತಾ ಸಾವನ್ನಪ್ಪಿದೆ. ಇತ್ತೀಚೆಗಷ್ಟೇ ಸೌದಿ ಅರೇಬಿಯಾದ ದೊರೆ ಹೈದರಾಬಾದ್‌ನ ಜವಾಹರಲಾಲ್ ನೆಹರು ಮೃಗಾಲಯಕ್ಕೆ ನೀಡಿದ್ದ 'ಅಬ್ದುಲ್ಲಾ' ಎಂಬ ಗಂಡು ಚೀತಾ ಹೃದಯಾಘಾತದಿಂದ ಮೃತಪಟ್ಟಿತ್ತು. 2013 ರಲ್ಲಿ ಸೌದಿ ದೊರೆ ಮೊಹಮ್ಮದ್ ಅಲ್ ಸೌದ್ ಅವರು ಭಾರತ ಭೇಟಿ ವೇಳೆ ಹಿಬಾ ಎಂಬ ಒಂದು ಹೆಣ್ಣು ಚೀತಾ ಹಾಗೂ ಅಬ್ದುಲ್ಲಾ ಎಂಬ ಒಂದು ಗಂಡು ಚೀತಾವನ್ನು ಸ್ನೇಹಾರ್ಥವಾಗಿ ಜವಾಹರಲಾಲ್ ನೆಹರು ಮೃಗಾಲಯಕ್ಕೆ ಉಡುಗೊರೆಯಾಗಿ ನೀಡಿದ್ದರು.

ಭಾರತಕ್ಕೆ ಬಂದಿದ್ದ ಚೀತಾಗಳು: ಕಳೆದ ವರ್ಷ ಅವರ ಜನ್ಮದಿನವಾದ ಸೆಪ್ಟೆಂಬರ್ 17 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಕುನೋ ಜೈವಿಕ ಉದ್ಯಾನವನದಲ್ಲಿ ಐದು ವರ್ಷದ ಎರಡು ಹೆಣ್ಣು ಚೀತಾಗಳನ್ನು ಬಿಡಲಾಗಿತ್ತು. ಈ ಎರಡು ಹೆಣ್ಣು ಚೀತಾಗಳ ಪೈಕಿ ಸಾಷಾ ಕೂಡ ಒಂದಾಗಿತ್ತು. ಕಳೆದ ವಾರ, ಇನ್ನೂ ಎರಡು ಚಿರತೆಗಳಾದ ಎಲ್ಟನ್ ಮತ್ತು ಫ್ರೆಡ್ಡಿಯನ್ನು ಮಧ್ಯಪ್ರದೇಶದಲ್ಲಿ ಕಾಡಿಗೆ ಬಿಡಲಾಗಿತ್ತು. ಅದರೊಂದಿಗೆ, ನಮೀಬಿಯಾದಿಂದ ತರಲಾದ ಎಂಟು ಚೀತಾಗಳ ಪೈಕಿ ನಾಲ್ಕನ್ನು ಶಿಯೋಪುರ್ ಜಿಲ್ಲೆಯ ಉದ್ಯಾನವನದಲ್ಲಿ ಕಾಡಿಗೆ ಬಿಡಲಾಗಿದೆ.

